ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 26 ಭಾನುವಾರ 2024

ಸಂಪುಟ: 45 | ಸಂಚಿಕೆ: 40 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಮೈಸೂರಲ್ಲಿ ಪ್ರವಾಸಿಗರ ಜಾತ್ರೆ

ಪ್ರವಾಸಿ ತಾಣಗಳಲ್ಲಿ ವಾಹನ ದಟ್ಟಣೆ



ಮೈಸೂರು ಅರಮನೆ ಬಳಿ ಶನಿವಾರ ಪ್ರವಾಸಿಗರ ಜಾತ್ರೆಯೇ ನರೆದಿತ್ತು.

ಮೈಸೂರು, ಮೇ 25(ಎಸ್‌ಬಿಡಿ)– ಮೈಸೂರಿಗೆ ಶನಿವಾರ ಪ್ರವಾಸಿಗರ ದಂಡೇ ಹರಿದು ಬಂದಿತ್ತು. ಪರಿಣಾಮ ನಗರದ ಹೃದಯ ಭಾಗ ಸೇರಿದಂತೆ ಪ್ರವಾಸಿ ತಾಣಗಳ ಬಳಿ ಭಾರೀ ವಾಹನ ದಟ್ಟಣೆ ನಿರ್ಮಾಣವಾಗಿ, ಸಾರ್ವಜನಿಕರು ಹೈರಾಣಾದರು.

ವಾರಾಂತ್ಯ ದಿನಗಳಲ್ಲಿ ಹೆಚ್ಚು ಪ್ರವಾಸಿಗರು ಮೈಸೂರಿಗೆ ಭೇಟಿ ನೀಡುವುದು ಸಹಜ. ಆದರೆ ಮೇ 31ರಂದು ಶಾಲೆಗಳು ಪುನಾರಂಭವಾಗುವ ಕಾರಣ ಶನಿವಾರ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ಕುಟುಂಬದವರು, ಸಂಬಂಧಿಕರೊಂದಿಗೆ ಪ್ರವಾಸ ಕೈಗೊಂಡಿದ್ದು, ಹಾಗೆಯೇ ಮೈಸೂರಿಗೂ ಶನಿವಾರ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದರು. ಶಕ್ತಿ ಯೋಜನೆಯಡಿ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ವಿವಿಧೆಡೆಯಿಂದ ಸಾವಿರಾರು ಮಹಿಳೆಯರು ತಮ್ಮ ಮಕ್ಕಳೊಂದಿಗೆ ಪ್ರವಾಸಕ್ಕೆ ಬಂದಿದ್ದರು. ಐತಿಹಾಸಿಕ, ಸುಂದರ ● 9ನೇ ಪುಟಕ್ಕೆ

ಮೈಸೂರಿನ 11 ಪಾರಂಪರಿಕ ಕಟ್ಟಡ ತುರ್ತು ದುರಸ್ತಿ ಅನಿವಾರ್ಯ

● ಶಿಥಿಲಾವಸ್ಥೆಯಲ್ಲಿರುವ 129 ಪಾರಂಪರಿಕ ಕಟ್ಟಡಗಳ ಸರ್ವೆ ಕಾರ್ಯ ಪೂರ್ಣ

● 96,80,59,838 ರೂ. ಅಂದಾಜು ವೆಚ್ಚದೊಂದಿಗೆ ಪಾರಂಪರಿಕ ಇಲಾಖೆಯಿಂದ ವರದಿ ಸಲ್ಲಿಕೆ



ಮಹಾರಾಣಿ ವಿಜ್ಞಾನ ಕಾಲೇಜು



ಮಹಾರಾಜ ಕಾಲೇಜು ಯೂನಿಯನ್ ಬಿಲ್ಡಿಂಗ್



ಅಠಾರ ಕಚೇರಿ (ಹಳೇ ಡಿಸಿ ಕಚೇರಿ)

ಮೈಸೂರು, ಮೇ 25(ಆರ್‌ಕೆ)– ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ 129 ಪಾರಂಪರಿಕ ಕಟ್ಟಡಗಳ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಿದೆ. ಮೈಸೂರಿನ ಹಲವು ಕಟ್ಟಡಗಳು ಮಳೆ, ಇನ್ನಿತರೆ ಪ್ರಕೃತಿ ವಿಕೋಪಗಳಿಂದ ಶಿಥಿಲಗೊಂಡು ಅಪಾಯದ ಅಂಚಿನಲ್ಲಿದ್ದು, ಇಲಾಖೆ 2022ರ ಅಕ್ಟೋಬರ್ 12ರಿಂದ ಸರ್ವೆ ಕಾರ್ಯ ಆರಂಭಿಸಿತ್ತು. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಮಾಡೆಲ್ ಬಿಲ್ಡಿಂಗ್ (ಅಮೆಂಡ್‌ಮೆಂಟ್) ಬೈಲಾ 2021ರ ಪ್ರಕಾರ ವರ್ಗೀಕರಿಸಿ ಪಾರಂಪರಿಕ ಸ್ಮಾರಕಗಳ ವಸ್ತುಸ್ಥಿತಿ ಅರಿಯಲು ಸರ್ವೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿತ್ತು. ಇದೀಗ ಪಾರಂಪರಿಕ ಇಲಾಖೆಯು ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರಿಗೆ ಸಮೀಕ್ಷಾ ವರದಿ ಸಲ್ಲಿಸಿದ್ದು, ಸಂಪೂರ್ಣ ಶಿಥಿಲಗೊಂಡಿರುವ 11 ಪಾರಂಪರಿಕ ಕಟ್ಟಡಗಳನ್ನು ತುರ್ತಾಗಿ ದುರಸ್ತಿ ಮಾಡಿ ಸಂರಕ್ಷಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

11 ಕಟ್ಟಡಗಳು: ಅಗ್ರಹಾರ ಸರ್ಕಲ್‌ನ ವಾಣಿ ವಿಲಾಸ ಮಾರುಕಟ್ಟೆ, ಅಠಾರ ಕಚೇರಿ (ಹಳೇ ಜಿಲ್ಲಾಧಿಕಾರಿ ಕಚೇರಿ), ಸರಸ್ವತಿಪುರಂನ ಅಗ್ನಿಶಾಮಕ ಠಾಣೆ, ಮಹಾರಾಣಿ ವಿಜ್ಞಾನ ಕಾಲೇಜು, ಲಲಿತ ಮಹಲ್ ರಸ್ತೆಯ ಗವರ್ನ್‌ಮೆಂಟ್ ಸರ್ಟಿಫೈಡ್ ಸ್ಕೂಲ್ ಫಾರ್ ಗರ್ಲ್ಸ್, ● 9ನೇ ಪುಟಕ್ಕೆ

ಶಿಥಿಲಾವಸ್ಥೆಯ ಕಟ್ಟಡಗಳ ಸಂರಕ್ಷಣೆಗೆ ಅಂದಾಜು ವೆಚ್ಚ

ಕ್ರ.ಸಂ.	ಕಟ್ಟಡದ ಹೆಸರು	ಅಂದಾಜು ವೆಚ್ಚ
1	ವಾಣಿವಿಲಾಸ ಮಾರುಕಟ್ಟೆ	9,28,50,660
2	ಅಠಾರ ಕಚೇರಿ	13,50,80,494
3	ಅಗ್ನಿಶಾಮಕ ಕಚೇರಿ	3,90,81,777
4	ಮಹಾರಾಣಿ ವಿಜ್ಞಾನ ಕಾಲೇಜು	10,65,23,025
5	ಗವರ್ನ್‌ಮೆಂಟ್ ಸರ್ಟಿಫೈಡ್ ಸ್ಕೂಲ್ ಫಾರ್ ಗರ್ಲ್ಸ್	2,83,70,622
6	ಮಹಾರಾಜ ಕಾಲೇಜು	18,45,03,207
7	ಯುವರಾಜ ಕಾಲೇಜು	17,70,19,647
8	ಯೂನಿಯನ್ ಬಿಲ್ಡಿಂಗ್	5,80,50,867
9	ಸಂಗೀತ ವಿವಿ	3,62,55,618
10	ಗವರ್ನ್‌ಮೆಂಟ್ ಚಿಲ್ಡ್ರನ್ಸ್ ಗರ್ಲ್ಸ್ ಹೋಂ	4,90,14,220
11	ಮಹಾರಾಜ ಸಂಸ್ಕೃತ ಪಾಠಶಾಲೆ	6,13,09,701
	ಒಟ್ಟು	96,80,59,838

“ ಪಾರಂಪರಿಕ ಇಲಾಖೆಯಿಂದ 129 ಕಟ್ಟಡಗಳ ಸಮೀಕ್ಷೆ ನಡೆಸಲಾಗಿದೆ. ಆ ಪೈಕಿ ಕೇವಲ 11 ಕಟ್ಟಡಗಳು ತುರ್ತಾಗಿ ದುರಸ್ತಿಯಾಗಬೇಕೆಂದು ವರದಿ ನೀಡಿದೆ. ಆದರೆ, ಮೈಸೂರಲ್ಲಿ ಇನ್ನೂ 50ರಿಂದ 60 ಪಾರಂಪರಿಕ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ತುರ್ತಾಗಿ ಸಂರಕ್ಷಣಾ ಕೆಲಸವಾಗಬೇಕಿದೆ.

– ಪ್ರೊ. ಎನ್.ಎಸ್. ರಂಗರಾಜು, ಜಿಲ್ಲಾ ಪಾರಂಪರಿಕ ಸಮಿತಿ ಸದಸ್ಯ

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡಗಳ ಬಗ್ಗೆ ಇನ್ನು ಯಾವ ನಿರ್ಧಾರವೂ ಆಗಿಲ್ಲ

ಪಾರಂಪರಿಕ ಆಯುಕ್ತ ಎ.ದೇವರಾಜ್






ಮೈಸೂರು, ಮೇ 25(ಆರ್‌ಕೆ)– ಸಂಪೂರ್ಣ ಶಿಥಿಲಗೊಂಡು ಕೆಲ ಭಾಗ ಕುಸಿದು ಬಿದ್ದು ಸಾವು-ನೋವುಗಳಾಗಿರುವ ಮೈಸೂರಿನ ಹೃದಯ ಭಾಗದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳಿಗೆ ಇನ್ನೂ ಮುಕ್ತಿ ದೊರಕಿಲ್ಲ.

ಮೈಸೂರು ನಗರದ ಪಾರಂಪರಿಕ ಕಟ್ಟಡಗಳು, ಸ್ಮಾರಕಗಳನ್ನು ದುರಸ್ತಿ ಮಾಡಿ ಪುನರುಜ್ಜೀವನಗೊಳಿಸಲು ಮುಂದಾಗಿರುವ ಪುರಾತತ್ವ ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯು 11 ಕಟ್ಟಡಗಳನ್ನು ತುರ್ತಾಗಿ ದುರಸ್ತಿ ಮಾಡಬೇಕೆಂದು ● 9ನೇ ಪುಟಕ್ಕೆ

ಇಂದು ಐಪಿಎಲ್ ಫೈನಲ್

ಕೋಲ್ಕತ್ತಾ ನೈಟ್ ರೈಡರ್ಸ್ / ಸನ್‌ರೈಸರ್ಸ್ ಹೈದರಾಬಾದ್



ಸ್ಥಳ: ಚೆನ್ನೈ ಎಂ.ಎ.ಚಿದಂಬರಂ ಕ್ರೀಡಾಂಗಣ, ಸಮಯ: ಸಂಜೆ 7.30ಕ್ಕೆ

ಬದುಕಿರುವ ವ್ಯಕ್ತಿಗೆ ಮರಣ ಪ್ರಮಾಣ ಪತ್ರ; ನಕಲಿ ವಂಶವೃಕ್ಷ ಸೃಷ್ಟಿಸಿ ಭೂಮಿ ಕಬಳಿಕೆ

ಕಂದಾಯ ಇಲಾಖೆ ಮೂವರು ಅಧಿಕಾರಿಗಳು ಸೇರಿ ಐವರ ವಿರುದ್ಧ ಕ್ರಿಮಿನಲ್ ಕೇಸ್

ನಂಜನಗೂಡು, ಮೇ 25–ಜೀವಂತ ಇರುವ ವ್ಯಕ್ತಿಗೆ ಮರಣ ಪ್ರಮಾಣ ಪತ್ರ ಹಾಗೂ ನಕಲಿ ವಂಶ ವೃಕ್ಷ ಸೃಷ್ಟಿಸಿ, ಜಮೀನು ಕಬಳಿಸಿದ ಆರೋಪದ ಮೇರೆಗೆ ಮೂವರು ಕಂದಾಯ ಇಲಾಖೆ ಅಧಿಕಾರಿಗಳೂ ಸೇರಿದಂತೆ ಐವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ.

ನಂಜನಗೂಡು ತಾಲೂಕು ಗೋಳೂರು ವೃತ್ತದ ಗ್ರಾಮ ಲೆಕ್ಕಿಗ ಮಂಜುನಾಥ್, ರಾಜಸ್ವ ನಿರೀಕ್ಷಕ ಜಯಪ್ರಕಾಶ್, ಶಿರಸ್ತೇದಾರ್ ಶ್ರೀನಾಥ್, ದೀಗಳ್ಳಿ ಗ್ರಾಮದ ಕೃಷ್ಣೇಗೌಡ ಮತ್ತು ಶಿವಮಲ್ಲೇಗೌಡ ಆರೋಪಕ್ಕೆ ಗುರಿಯಾಗಿರುವವರು.

ವಿವರ: ನಂಜನಗೂಡು ತಾಲೂಕು ಮುಳ್ಳೂರು ಗ್ರಾಮದ ತಂಗಮ್ಮ ಎಂಬುವರು ಸೇರಿದ ಪಿತ್ರಾರ್ಜಿತ ಆಸ್ತಿ ಸರ್ವೆ ನಂ.444ರಲ್ಲಿ 1 ಎಕರೆ 30 ಗುಂಟೆ, ಸರ್ವೆ ನಂ.442ರಲ್ಲಿ 1 ಎಕರೆ 26 ಗುಂಟೆ, ಸರ್ವೆ ನಂ.215ರಲ್ಲಿ 1 ಎಕರೆ 32 ಗುಂಟೆ ಜಮೀನು ಹೊಂದಿದ್ದರು. ಈ ಜಮೀನು ಅವರ ಪುತ್ರ ಎನ್.ಚಂದ್ರಶೇಖರ್ ಎಂಬುವರ ಹೆಸರಿಗೆ ವರ್ಗಾವಣೆಯಾಗಿದ್ದು, ಆರ್‌ಟಿಸಿ ಹಾಗೂ ಪಹಣಿಯಲ್ಲಿ ಅವರ ಹೆಸರು ಇತ್ತು. ಆದರೆ ಎನ್.ಚಂದ್ರಶೇಖರ್ ಕೆನಡಾದಲ್ಲಿ ನೆಲೆಸಿ ವಾಸವಾಗಿದ್ದರು. ಅವರ ಸಹೋದರ ಎನ್.ನಾಗರಾಜ ರಾಂ ಅವರು ಬೆಂಗಳೂರಿನಲ್ಲಿದ್ದರು. ಹೀಗಾಗಿ ಜಮೀನನ್ನು ಇವರುಗಳು ಸರಿಯಾಗಿ ನೋಡಿಕೊಳ್ಳಲು ಆಗುತ್ತಿರಲಿಲ್ಲ ಎಂದು ಹೇಳಲಾಗಿದೆ. 2023ರ ಫೆಬ್ರವರಿ 23ರಂದು ನಾಗರಾಜ ರಾಂ ಅವರು ತಮ್ಮ ಜಮೀನಿಗೆ ಕಂದಾಯ ಕಟ್ಟಲು ತಾಲೂಕು ಕಚೇರಿಗೆ ಭೇಟಿ ನೀಡಿದಾಗ ಸರ್ವೆ ನಂ.444ರಲ್ಲಿನ ● 9ನೇ ಪುಟಕ್ಕೆ

ಲೋಕಸಭೆ ಚುನಾವಣೆ: 6ನೇ ಹಂತದಲ್ಲಿ ಶೇ. 58.82ರಷ್ಟು ಮತದಾನ

ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚು ವೋಟಿಂಗ್

ನವದೆಹಲಿ: ಲೋಕಸಭೆ ಚುನಾವಣೆ ಕ್ಲೈಮ್ಯಾಕ್ಸ್‌ನತ್ತ ಸಾಗುತ್ತಿದ್ದು, ರಾಷ್ಟ್ರ ರಾಜಧಾನಿ ದೆಹಲಿಯ ಎಲ್ಲಾ 7 ಕ್ಷೇತ್ರಗಳು ಸೇರಿದಂತೆ 58 ಕ್ಷೇತ್ರಗಳಲ್ಲಿ ಶನಿವಾರ 6ನೇ ಹಂತದ ಮತದಾನ ನಡೆದಿದೆ. ಇಂದು ಸಂಜೆ 5.30 ವರೆಗೆ ಶೇ.58.82ರಷ್ಟು ಮತದಾನವಾಗಿದ್ದು, ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚು ಮತದಾನವಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗ ತಿಳಿಸಿದೆ.

ರಾಜ್ಯವಾರು ಮತದಾನದಲ್ಲಿ ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚು ಅಂದರೆ ಶೇ. 78 ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಉತ್ತರ ಪ್ರದೇಶದ 14 ಸ್ಥಾನಗಳು, ಹರ್ಯಾಣದ ಎಲ್ಲಾ 10 ಸ್ಥಾನಗಳು, ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ ಎಂಟು ಸ್ಥಾನಗಳು, ದೆಹಲಿಯ ಎಲ್ಲಾ ಏಳು ಸ್ಥಾನಗಳು, ಒಡಿಶಾದ 6 ಸ್ಥಾನಗಳು, ಜಾರ್ಖಂಡ್‌ನ 4 ಸ್ಥಾನಗಳು ಮತ್ತು ಜಮ್ಮು ಮತ್ತು ಕಾಶ್ಮೀರದ ಒಂದು ಸ್ಥಾನಕ್ಕೆ ಇಂದು ಬೆಳಗ್ಗೆ 7 ಗಂಟೆಗೆ ಮತದಾನ ● 9ನೇ ಪುಟಕ್ಕೆ

ಮೈಸೂರು ಮಿತ್ರ

ಆರೋಗ್ಯಕರ ಸ್ಪರ್ಧಾ ಮನೋಪ್ರವೃತ್ತಿ ಉತ್ತೇಜಿಸುವ ನಿಟ್ಟಿನಲ್ಲಿ ಬೌದ್ಧಿಕ ಆಸ್ತಿಯ ಹಕ್ಕುಗಳ ರಕ್ಷಣೆ ಅಗತ್ಯ





ಮೈಸೂರು, ಮೇ 25– ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು.

ವಿಶೇಷ ಉಪನ್ಯಾಸಕರಾಗಿದ್ದ ಡಾ.ನಾಗಭೂಷಣ್ ಮಾತನಾಡುತ್ತಾ, ಬದಲಾಗುತ್ತಿರುವ ಆರ್ಥಿಕ ಜಗತ್ತಿನಲ್ಲಿ ಬೌದ್ಧಿಕ ಆಸ್ತಿಯ ಹಕ್ಕುಗಳ ರಕ್ಷಣೆ ಮತ್ತು ಅದನ್ನು ರಕ್ಷಣಾತ್ಮಕವಾಗಿ ಬಳಸುವ ವಿಧಾನ, ನೀತಿಗಳು ಬಹಳ ಮುಖ್ಯವಾಗಿದ್ದು, ಜಗತ್ತಿನ ವೇಗದ ಬೆಳವಣಿಗೆಯಲ್ಲಿ ಆಗುತ್ತಿರುವ ಪೇಟೆಂಟ್ ಮತ್ತು ಕಾಪಿರೈಟ್‌ಗಳ ದುರ್ಬಳಕೆಯನ್ನು ತಪ್ಪಿಸುವ ವಿಧಾನಗಳನ್ನು ಅನುಸರಿಸುವ ಮೂಲಕ ರಾಷ್ಟ್ರದ ರಕ್ಷಣಾತ್ಮಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಬದಲಾಗುತ್ತಿರುವ ಸ್ಪರ್ಧಾತ್ಮಕ ಸ್ಥಿತ್ಯಂತರ ಆರ್ಥಿಕ ಜಗತ್ತಿನಲ್ಲಿ ನವ ಪ್ರವರ್ತನೆಗಳು, ಆರ್ಥಿಕ ಬೆಳವಣಿಗೆ ಮತ್ತು ಆರೋಗ್ಯಕರವಾದ ಸ್ಪರ್ಧಾತ್ಮಕ ಮನೋಪ್ರವೃತ್ತಿಗಳನ್ನು ಉತ್ತೇಜಿಸುವ ಮೂಲಕ ಭೌತಿಕ ಆಸ್ತಿಯ ಹಕ್ಕುಗಳನ್ನು ರಕ್ಷಿಸುವ ಮತ್ತು ಪ್ರೋತ್ಸಾಹಿಸುವ ಅಗತ್ಯತೆ ಬಹಳ ಮುಖ್ಯವಾಗಿದ್ದು ಆಯಾ ರಾಷ್ಟ್ರದ ಬೆಳವಣಿಗೆಗೆ ನಾಂದಿಯಾಗುತ್ತದೆ ಎಂದು ತಿಳಿಸಿದರು. ನಂತರ ವಿದ್ಯಾರ್ಥಿಗಳು ವಿಶೇಷ ಉಪನ್ಯಾಸಕರೊಂದಿಗೆ ಸಂವಾದ ಮತ್ತು ರಸಪ್ರಶ್ನೆಗಳಲ್ಲಿ ಪಾಲ್ಗೊಂಡಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಆಧುನಿಕ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಅವಕಾಶಗಳನ್ನು ಹುಡುಕುವ ಜ್ಞಾನಾರ್ಜನೆಗೆ ಸದಾ ಮುನ್ನುಗ್ಗುತ್ತಿರಬೇಕೆಂದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ವೆಂಕಟಲಕ್ಷ್ಮಿ ಎಂ.ಎನ್ ಸ್ವಾಗತಿಸಿದರು. ವಿಭಾಗದ ಅಧ್ಯಾಪಕರಾದ ಡಾ.ಪುಷ್ಪರಾಣಿ, ಸಿದ್ದಪ್ಪ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದರ ಪರ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಮತ್ತು ಬಿಜೆಪಿ (ಎನ್‌ಡಿಎ) ಅಭ್ಯರ್ಥಿ ಕೆ.ವಿವೇಕಾನಂದ ಪರವಾಗಿ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಕೆ. ರಾಮು ಮತಯಾಚಿಸಿದರು. ಈ ವೇಳೆ ಎಚ್.ಕೆ.ರಮೇಶ್, ಮೈಸೂರು ನಗರ ಮಹಾ ಪ್ರಧಾನ ಕಾರ್ಯದರ್ಶಿ ಪಿ.ಗಂಗಾಧರ್, ಪ್ರಧಾನ ಕಾರ್ಯದರ್ಶಿಗಳಾದ ಎಂ.ಜೆ.ಸತ್ಯನಾರಾಯಣ, ಆರ್.ಮುದ್ದುರಾಜ್, ಚಂದ್ರು ಇನ್ನಿತರರಿದ್ದರು.

ಕಾಲರಾ ನಿಯಂತ್ರಣಕ್ಕೆ ಕ್ರಮ: ಜಿಲ್ಲಾ ಆರೋಗ್ಯಾಧಿಕಾರಿ

ಮೈಸೂರು, ಮೇ 25(ಆರ್‌ಕೆ)–



ಮೈಸೂರು ಜಿಲ್ಲೆಯಾದ್ಯಂತ ಕಾಲರಾದಂತಹ ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಅಗತ್ಯ ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಕೆ.ಸಾಲುಂಡಿ ಮತ್ತು ತಗಡೂರು ಗ್ರಾಮಗಳಲ್ಲಿ ಕಲುಷಿತ ನೀರು ಸೇವಿಸಿ ಓರ್ವ ಸಾವನ್ನಪ್ಪಿ 60ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾದ ಘಟನೆಯಿಂದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು, ಹೆಲ್ತ್ ಇನ್ಸ್‌ಪೆಕ್ಟರ್‌ಗಳು, ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ವಾಂತಿ–ಭೇದಿ ಲಕ್ಷಣಗಳು ಕಂಡುಬಂದಿರುವ ಬಗ್ಗೆ ಪರಿಶೀಲಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ಸಾಂಕ್ರಾಮಿಕ ರೋಗ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಚಿಕಿತ್ಸೆ ಕೊಡಿಸುವ ವ್ಯವಸ್ಥೆ ಮಾಡಲಾಗಿದೆ. ಅದೇ ರೀತಿ ತಾಲೂಕು ಸಾರ್ವಜನಿಕ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಮೈಸೂರಿನ ಕೆಆರ್ ಆಸ್ಪತ್ರೆಗಳಲ್ಲೂ ಕಾಲರಾ ರೋಗಿಗಳಿಗಾಗಿ ಹಾಸಿಗೆಗಳನ್ನು ಮೀಸಲಿರಿಸಿ ಔಷಧಿಗಳನ್ನು ದಾಸ್ತಾನಿಟ್ಟುಕೊಳ್ಳುವಂತೆ ಸೂಚಿಸಲಾಗಿದೆ ಎಂದು ಡಾ. ಕುಮಾರಸ್ವಾಮಿ ತಿಳಿಸಿದರು. ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಾಣಿವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳು ನೀರು ಸರಬರಾಜು ಮೂಲಗಳಲ್ಲಿ ಪರೀಕ್ಷಿಸಿ ಕುಡಿಯಲು ಯೋಗ್ಯ ಎಂದು ದೃಢಪಟ್ಟ ನಂತರವೇ ನೆಲಮಟ್ಟದ ಜಲ ಸಂಗ್ರಹಾಗಾರ, ಓವರ್ ಹೆಡ್ ಟ್ಯಾಂಕ್‌ಗಳಿಗೆ ಶುದ್ಧೀಕರಿಸಿದ, ಕ್ಲೋರಿನೇಷನ್ ಮಾಡಿ ನೀರನ್ನು ಪಂಪ್‌ಹೌಸ್‌ಗಳಿಂದ ಪೂರೈಸಲು ಕ್ರಮ ವಹಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ಪ್ರಕರಣ ಬೆಳಕಿಗೆ ಬಂದಿದ್ದ ಕೆ.ಸಾಲುಂಡಿ, ತಗಡೂರು ಗ್ರಾಮಗಳಲ್ಲಿ ಕಾಲರಾ ಸಂಪೂರ್ಣ ನಿಯಂತ್ರಣ ದಲ್ಲಿದೆ. ಈಗ ಒಬ್ಬ ವ್ಯಕ್ತಿಗೂ ವಾಂತಿ–ಭೇದಿಯಂತಹ ಸಾಂಕ್ರಾಮಿಕ ರೋಗ ಕಂಡುಬಂದಿಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದೆಡೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಕುಡಿಯುವ ನೀರು ಪೂರೈಕೆಗೆ ಮಾರ್ಗಸೂಚಿ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ಸ್ (ಎಸ್‌ಓಪಿ) ಹೊರಡಿಸಿದೆ. ಓವರ್‌ಹೆಡ್ ಟ್ಯಾಂಕ್, ನೆಲಮಟ್ಟದ ಜಲಸಂಗ್ರಹಾಗಾರಗಳನ್ನು ಆಗಿಂದಾಗ್ಗೆ ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ರಾಜ್‌ಕೋಟ್‌ನ ಗೇಮ್‌ಝೋನ್‌ನಲ್ಲಿ ಅಗ್ನಿ ದುರಂತ; 9 ಮಕ್ಕಳು ಸೇರಿ 24 ಮಂದಿ ಸಜೀವ ದಹನ!



ಗುಜರಾತ್: ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಟಿಆರ್‌ಪಿ ಗೇಮ್ ಝೋನ್‌ನಲ್ಲಿ ಭಾರೀ ಬೆಂಕಿ ಅವಘಡದಲ್ಲಿ 24 ಮಂದಿ ಸಜೀವ ದಹನಗೊಂಡಿದ್ದಾರೆ. ಬೆಂಕಿ ಅನಾಹುತದ ನಂತರ ಇಡೀ ಆಟದ ವಲಯ ಸುಟ್ಟು ಬೂದಿಯಾಗಿದೆ. ಸುಮಾರು 8 ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಆಗಮಿಸಿದ್ದು ರಕ್ಷಣಾ ಕಾರ್ಯಾಚರಣೆಯ ಜೊತೆಗೆ ಬೆಂಕಿಯನ್ನು ನಿಯಂತ್ರಿಸಲು ಹರಸಾಹಸ ಪಟ್ಟಿವೆ.

ಮಧ್ಯಾಹ್ನ ಟಿಆರ್‌ಪಿ ಗೇಮಿಂಗ್ ವಲಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ರಾಜ್‌ಕೋಟ್ ಪೊಲೀಸ್ ಆಯುಕ್ತ ರಾಜು ಭಾರ್ಗವ ತಿಳಿಸಿದ್ದಾರೆ. ಬೆಂಕಿಯನ್ನು ಹತೋಟಿಗೆ ತರಲಾಗಿದೆ. ಇದುವರೆಗೆ ಸುಮಾರು 24 ಮೃತ ದೇಹಗಳು ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಗೇಮಿಂಗ್ ವಲಯದ ಮಾಲೀಕರು ಯುವರಾಜ್ ಸಿಂಗ್ ಸೋಲಂಕಿ ವಿರುದ್ಧ ನಿರ್ಲಕ್ಷ್ಯ ಕುರಿತಂತೆ ಪ್ರಕರಣ ದಾಖಲಿಸಿ, ಬಂಧಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡ ನಂತರ ಹೆಚ್ಚಿನ ತನಿಖೆ ನಡೆಯಲಿದೆ ಎಂದು ಹೇಳಿದ್ದಾರೆ. ಎಎನ್‌ಐ ವರದಿಯ ಪ್ರಕಾರ, ಅಗ್ನಿ ಅವಘಡದ ಹೊಗೆ 3 ಕಿಲೋಮೀಟರ್ ದೂರದಿಂದ ಗೋಚರಿಸುತ್ತಿತ್ತು. ಬೆಂಕಿ ಹೊತ್ತಿಕೊಳ್ಳಲು ಕಾರಣ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಕಟ್ಟಡ ಕುಸಿದಿರುವುದರಿಂದ ಪರಿಹಾರ ಕಾರ್ಯದಲ್ಲಿ ತೊಂದರೆಯಾಗುತ್ತಿದೆ ಎಂದು ಅಗ್ನಿಶಾಮಕ ದಳದ ಅಧಿಕಾರಿ ತಿಳಿಸಿದ್ದಾರೆ. ಏತನ್ಮಧ್ಯೆ, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ದುರಂತದ ಹಿನ್ನೆಲೆಯಲ್ಲಿ ತಕ್ಷಣದ ರಕ್ಷಣಾ ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಮಹಾನಗರ ಪಾಲಿಕೆ ಮತ್ತು ಆಡಳಿತಕ್ಕೆ ಸೂಚನೆ ನೀಡಿದ್ದಾರೆ.

ಕನ್ನಡ ಓದಲು, ಬರೆಯಲು ಬಾರದವರು ಈಗ ರಾಜ್ಯದಲ್ಲಿ ಶಿಕ್ಷಣ ಸಚಿವರು

ಬಸವ ಜಯಂತಿ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಹೆಚ್.ವಿಶ್ವನಾಥ್ ವಿಷಾದ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ಹಾಗೂ ಕರ್ನಾಟಕ ಸೇನಾಪಡೆ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಅಭಿನಂದಿಸಲಾಯಿತು.

ಮೈಸೂರು, ಮೇ 25(ಜಿಎ)–ಕನ್ನಡ ಓದಲು, ಬರೆಯಲು ಬಾರದವರನ್ನು ರಾಜ್ಯದಲ್ಲಿ ಶಿಕ್ಷಣ ಸಚಿವರನ್ನಾಗಿ ಮಾಡಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ಹಾಗೂ ಕರ್ನಾಟಕ ಸೇನಾಪಡೆ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಲೇಜಿನ ದಿನಗಳಿಂದಲೂ ನಾವೆಲ್ಲ ಚಳುವಳಿಯಲ್ಲಿ ಕೆಲಸ ಮಾಡಿದ್ದೇವೆ. ವಾಟಾಳ್ ನಾಗರಾಜ್ ಅವರನ್ನು ಮೈಸೂರಿಗೆ ಕರೆತಂದಿದ್ದು ನಾವೇ ಎಂದರು.

ಅಂದು ರೈತ, ಮಹಿಳಾ, ಕಾರ್ಮಿಕ ಹೋರಾಟಗಳು ಹೆಚ್ಚು ನಡೆಯುತ್ತಿದ್ದವು. ಚಳುವಳಿಗಳು ಜೀವಂತವಾಗಿದೆ ಎಂದರೆ ಮಾತ್ರ ಸರ್ಕಾರವೂ ಜೀವಂತವಾಗಿರುತ್ತದೆ. ಇಂದು ಬಹಳಷ್ಟು ಕನ್ನಡ ಸಂಘಟನೆಗಳಿವೆ. ಆದರೆ ಸರ್ಕಾರ ಶಾಲೆಗಳನ್ನೂ ಮುಚ್ಚುತ್ತಿರುವುದರ ಬಗ್ಗೆ ಧ್ವನಿ ಎತ್ತುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಾನು ಶಿಕ್ಷಣ ಸಚಿವನಾಗಿದ್ದಾಗ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಹಿಂದೆ ಬಿದ್ದು, ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು, ಬಿಸಿಯೂಟ, ತಡೆಗೋಡೆ ನಿರ್ಮಾಣಗಳ ಕಾರ್ಯಕ್ಕೆ ಚಾಲನೆ ನೀಡಿದ್ದೆ. ಆದರೆ, ಇಂದು ರಾಜ್ಯ ಸರ್ಕಾರದಲ್ಲಿ ನಡೆಯುತ್ತಿರುವುದು ಜನರಿಗೆ ಮನೋರಂಜನಾ ಕಾರ್ಯಕ್ರಮವಾಗಿದೆ. ಗಾಂಭೀರ್ಯತೆ ಕಳೆದುಕೊಂಡ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ ಎಂದರು.

> “ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರ ಮಗ ಮಧು ಬಂಗಾರಪ್ಪ ಶಿಕ್ಷಣ ಮಂತ್ರಿಯಾಗಿ ಅಪ್ಪನ ಮರ್ಯಾದೆ ಕಳೆಯುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡ ಚಳುವಳಿ ಮೂಲಕ ಬಂದು ಕನ್ನಡ ಓದಲು, ಬರೆಯಲು ಬಾರದವರನ್ನು ಶಿಕ್ಷಣ ಮಂತ್ರಿ ಮಾಡಿದ್ದಾರೆ. ಮತ್ತೊಂದೆಡೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಸ್ಕೃತಿ ಇಲ್ಲದವರನ್ನು ಸಚಿವರಾಗಿ ಮಾಡಿದ್ದಾರೆ. ಕನ್ನಡ ನಾಡು ದೇಶಕ್ಕೆ ಹೆಸರುವಾಸಿ. ಆದರೆ ಇಂದು ವಿಧಾನಸೌಧ ಮಾಲ್ ಆಗಿ ಪರಿವರ್ತನೆಯಾಗಿದ್ದು, ಏನು ಬೇಕಾದರೂ ಮಾರಬಹುದು ಮತ್ತು ಕೊಳ್ಳಬಹುದಾಗಿದೆ. ಕನ್ನಡವನ್ನು ಮಾರಾಟ ಮಾಡಲಾಗುತ್ತಿದೆ.
>
> –ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಉಪಾಧ್ಯಕ್ಷ ಡಾ.ಬಿ.ಆರ್.ನಟರಾಜ್ ಜೋಯ್ಸ್, ಸಮಾಜ ಸೇವಕ ಚಂದ್ರಣ್ಣ, ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಖಜಾಂಚಿ ವರುಣಾ ಮಹೇಶ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್ ಅವರುಗಳನ್ನು ಅಭಿನಂದಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಕೆಎಸ್‌ಓಯು ಡೀನ್ ಡಾ.ಎನ್.ಲಕ್ಷ್ಮಿ, ಕನ್ನಡ ಚಳುವಳಿ ಕೇಂದ್ರ ಸಮಿತಿಯ ಮೂಗೂರು ನಂಜುಂಡಸ್ವಾಮಿ, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಉಪಸ್ಥಿತರಿದ್ದರು.

ಪ್ರಜ್ವಲ್ ರೇವಣ್ಣ ವಿರುದ್ಧ ಮೇ 30ರಂದು ಹಾಸನ ಚಲೋ ಕಾರ್ಯಕ್ರಮ

ಲೈಂಗಿಕ ದೌರ್ಜನ್ಯಕ್ಕೆ ರಾಜಕೀಯ, ಕೌಟುಂಬಿಕ ಪ್ರಭಾವ ಬಳಸಿಕೊಂಡಿದ್ದಾರೆ ಎಂದು ಸಿಐಟಿಯು ಆರೋಪ

ಮೈಸೂರು, ಮೇ 25(ಜಿಎ)–ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ರಾಜಕೀಯ ಅಧಿಕಾರ, ಪ್ರಭಾವಿ ಕೌಟುಂಬಿಕ ಹಾಗೂ ಪ್ರಬಲ ಜಾತಿ ಹಿನ್ನೆಲೆ ಬಳಸಿಕೊಂಡು ನೂರಾರು ಮಹಿಳೆಯರನ್ನು ತನ್ನ ಲೈಂಗಿಕ ವಿಕೃತಿಗೆ ಬಳಸಿಕೊಂಡಿದ್ದಾರೆ. ಹೀಗಾಗಿ ಇವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮೇ 30ರಂದು ಜಿಲ್ಲಾ ಸಿಐಟಿಯು ನೇತೃತ್ವದಲ್ಲಿ ಹಾಸನ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಕಾರ್ಯದರ್ಶಿ ಸುನಂದಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಪ್ರಜ್ವಲ್ ರೇವಣ್ಣ ಓರ್ವ ಜವಾಬ್ದಾರಿಯುತ ಜನಪ್ರತಿನಿಧಿಯಾಗಿ ತನ್ನ ಬಳಿ ನೆರವು ಕೇಳಿಬಂದ ಮಹಿಳೆಯರನ್ನು, ತನ್ನದೇ ಪಕ್ಷದ ಕಾರ್ಯಕರ್ತೆಯರನ್ನು ತನ್ನ ವಿಕೃತ ಲೈಂಗಿಕತೆಗೆ ದುರ್ಬಳಕೆ ಮಾಡಿಕೊಂಡಿದ್ದಾರೆ. ಜೊತೆಗೆ



ಆ ಕೃತ್ಯಗಳನ್ನು ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು, ಇದಕ್ಕಾಗಿ ತನ್ನ ಸ್ಥಾನ ಮತ್ತು ಸರ್ಕಾರ ನೀಡಿರುವ ವಸತಿ ಗೃಹ ದುರ್ಬಳಕೆ ಮಾಡಿಕೊಂಡಿರುವ ಗಂಭೀರ ಪ್ರಕರಣ ಇದಾಗಿದೆ. ಹೀಗಾಗಿ ಪ್ರಜ್ವಲ್ ಅವರ ಸಂಸದ ಸ್ಥಾನ ರದ್ದುಗೊಳಿಸಬೇಕು. ಒಂದು ವೇಳೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಜಯಗಳಿಸಿದಲ್ಲಿ ಇದೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ಕೂಡಲೇ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಬೇಕು. ಈ ಸಂಬಂಧ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿಸಬೇಕು. ರಾಜತಾಂತ್ರಿಕ ವೀಸಾ ರದ್ದು ಪಡಿಸಿ ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಅಂತಾರಾಷ್ಟ್ರೀಯ ಪೊಲೀಸರ ನೆರವಿನಿಂದ ಕೂಡಲೆ ಬಂಧಿಸಿ ದೇಶಕ್ಕೆ ಕರೆತರಬೇಕು. ಸಂತ್ರಸ್ತ ಮಹಿಳೆಯರ ಲೈಂಗಿಕ ವಿಡಿಯೋ ಮತ್ತು ಚಿತ್ರಗಳನ್ನು ಸಾರ್ವಜನಿಕವಾಗಿ ಪೆನ್‌ಡ್ರೈವ್, ಸಾಮಾಜಿಕ ಮಾಧ್ಯಮ ಮತ್ತಿತರೆ ಸಾಧನಗಳ ಮೂಲಕ ಸಾರ್ವಜನಿಕವಾಗಿ ಹಂಚಲು ಸಂಚು ನಡೆಸಿದ ಹಾಗೂ ಸಾರ್ವಜನಿಕವಾಗಿ ಹಂಚಿದ ವ್ಯಕ್ತಿಗಳನ್ನು ಕೂಡಲೇ ಬಂಧಿಸಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಜೆ.ಜಯರಾಂ, ಜಯಂತಿ, ಲತಾ ಉಪಸ್ಥಿತರಿದ್ದರು.

ಚಾಣಕ್ಯ ಸೇವಾ ರತ್ನ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 25–ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ 2023–24ನೇ ಸಾಲಿನಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕರಿಗೆ ಚಾಣಕ್ಯ ಸೇವಾ ರತ್ನ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಶಿಕ್ಷಣ, ಕಲೆ, ಸಾಹಿತ್ಯ ಸಂಗೀತ, ಕ್ರೀಡೆ ಸಾಂಸ್ಕೃತಿಕ, ಬಹುಮುಖ ಪ್ರತಿಭೆ, ಚಿತ್ರಕಲೆ, ವಿಜ್ಞಾನ ಮತ್ತು ಸಂಶೋಧನೆ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದವರು, ಈಗಾಗಲೇ ಪ್ರಶಸ್ತಿ ಪಡೆದವರು ಅರ್ಜಿ ಸಲ್ಲಿಸಬಹುದು. ಮೇ 27ರಂದು ಬೆಳಗ್ಗೆ 11 ಗಂಟೆಗೆ ಸಿಪಾಯಿ ಗ್ರಾಂಡ್ ಹೋಟೆಲ್‌ನಲ್ಲಿ ಚಾಣಕ್ಯ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಕೆಎಂಪಿಕೆ ಟ್ರಸ್ಟ್ ಸಂಚಾಲಕಿ ರೇಖಾ ಶ್ರೀನಿವಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಉಚಿತ ತಪಾಸಣೆ, ಜಾಗೃತಿ ಶಿಬಿರ

ಮೈಸೂರು, ಮೇ 25– ಅಂತರರಾಷ್ಟ್ರೀಯ ಮಹಿಳಾ ಆರೋಗ್ಯ ದಿನದ ಪ್ರಯುಕ್ತ ಜೆಎಸ್‌ಎಸ್ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ವಿಭಾಗ ಹಾಗೂ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದಿಂದ ಮೇ 28ರಂದು ಬೆಳಗ್ಗೆ 9.30ರಿಂದ ಸಂಜೆ 4ರವರೆಗೆ ಸ್ತನರೋಗ, ಗರ್ಭಕಂಠ ಕ್ಯಾನ್ಸರ್‌ಗೆ ಉಚಿತ ತಪಾಸಣೆ, ಜಾಗೃತಿ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–2335161, 2335168 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಮೈಸೂರು, ಮೇ 25– ನಂಜನಗೂಡಿನ ತಗಡೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವಿವಿಧ ವೃತ್ತಿಗಳ ಪ್ರವೇಶಾತಿಗಾಗಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2 ವರ್ಷದ ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್, ಮೆಕ್ಯಾನಿಕ್, ಫಿಟ್ಟರ್ ಕೋರ್ಸುಗಳಿದ್ದು, ಅರ್ಜಿಗಳನ್ನು ಆನ್‌ಲೈನ್ ಮೂಲಕ ಯಾವುದೇ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಅಥವಾ ಸೈಬರ್ ಸೆಂಟರ್‌ಗಳಲ್ಲಿ www.cite.karnataka.gov.in ಮೂಲಕ ಜೂ.10ರೊಳಗೆ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ: 08221–220200 ಅನ್ನು ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.05.2024 ಭಾನುವಾರ, ಮಳೆ ನಕ್ಷತ್ರ: ರೋಹಿಣಿ, 25.05.2024 ರಿಂದ 07.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಮೂಲ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್–ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.

■ **ವಿಪ್ರ ವಕೀಲರ ಪರಿಷತ್:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವರ್ಧಂತಿ ಅಂಗವಾಗಿ ಬೃಹತ್ ಶೋಭಾ ಯಾತ್ರೆ, ವೇದಘೋಷ ತಂಡ, ವೀರಗಾಸೆ, ನಂದಿಧ್ವಜ, ಭಜನಾ ಮಂಡಳಿಗಳ ಜೊತೆ ತೆರೆದ ಜೀಪ್, ಒಂದು ಸಾರೋಟಿಯಲ್ಲಿ ಸ್ವಾಮೀಜಿಯವರ ಭಾವಚಿತ್ರಗಳ ಮೆರವಣಿಗೆ, ಸ್ಥಳ: ಚಾಮುಂಡಿಪುರಂ ವೃತ್ತದಿಂದ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್, ಆರೋಹಣಂ ಫೌಂಡೇಷನ್, ಶ್ರೀ ಕೃಷ್ಣದೇವರಾಯ ಬಲಿಜ ನಾಯ್ಡು ಸಂಘ:** ಅಕ್ಯೂಪ್ರೆಶರ್, ಸುಜೋಕ್ ಮತ್ತು ಅಕ್ಯೂ ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: 322, ಲೀಲಾವತಿ ನಾಯ್ಡು, ಅರವಿಂದನಗರ, ಬೆಳಗ್ಗೆ 10.30 ರಿಂದ.

■ **ಭರಣಿ ಆರ್ಟ್ ಗ್ಯಾಲರಿ:** 30ನೇ ವಾರ್ಷಿಕೋತ್ಸವದ ಅಂಗವಾಗಿ ನಿಸರ್ಗ ಚಿತ್ರ ಕಲಾವಿದ ಹಾ.ಪು. ರಂಗಸ್ವಾಮಿ ಅವರ ನಿಸರ್ಗ ಲಾಲಿತ್ಯ: ಜಲವರ್ಣ ಕಲಾಕೃತಿಗಳ ಪ್ರದರ್ಶನ, ಉದ್ಘಾಟನೆ: ಕೊಡವ ಸಮಾಜದ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಕುಟ್ಟಿಮಾಡ ಡಿ.ಮುತ್ತಪ್ಪ, ಅಧ್ಯಕ್ಷತೆ: ಭರಣಿ ಆರ್ಟ್ ಗ್ಯಾಲರಿ ಹಿರಿಯ ಕಲಾವಿದ ಎನ್.ಬಿ.ಕಾವೇರಪ್ಪ, ವಿಶೇಷ ಅತಿಥಿಗಳು: ಖ್ಯಾತ ಕಲಾವಿದ ಗಂಜೀಫಾ ರಘುಪತಿ ಭಟ್, ಸಾಹಿತಿ ಡಾ.ಮಜ್ಜಿಗೆಪುರ ಕೆ.ಶಿವರಾಮು, ಇ–ಬಯೋ ಟೋರಿಯಂ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ವಿತರಕ ನಂಜುಂಡಸ್ವಾಮಿ, ನಿಸರ್ಗ ಚಿತ್ರ ಕಲಾವಿದ ಹಾ.ಪು. ರಂಗಸ್ವಾಮಿ, ಸ್ಥಳ: ಭರಣಿ ಆರ್ಟ್ ಗ್ಯಾಲರಿ, ವಿವೇಕಾನಂದನಗರ, ಬೆಳಗ್ಗೆ 11ಕ್ಕೆ.

■ **ಯೋಗಾನರಸಿಂಹಸ್ವಾಮಿ ದೇವಸ್ಥಾನ :** ಕುಂಭಾಭಿಷೇಕ ಮಹೋತ್ಸವ ಹಾಗೂ ಮಹಾ ಸುದರ್ಶನ ಯಾಗ, ಸಹಸ್ರ ಕಳಶಾಭಿಷೇಕ – ಸೌಂದರ್ಯ ಲಹರಿ ಪಾರಾಯಣ, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ ಒಂದನೇ ಹಂತ.

■ **ಜನಚೈತನ್ಯ ಫೌಂಡೇಷನ್:** ಡಾ.ರಾಜ್‌ಕುಮಾರ್ ಜನ್ಮದಿನದ ಪ್ರಯುಕ್ತ ಹಾಡೊಂದು ನಾ ಹಾಡುವೆನು ಚಲನಚಿತ್ರ ಗೀತೆಗಳ ಸಂಗೀತ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ನಾಗರಾಜು ವಿ.ಭೈರಿ, ಡಾ.ರೇಖಾ, ಎನ್.ಶ್ರೀನಿವಾಸಲು, ಗಾಯಕ ಆನಂದಶೆಟ್ಟಿ, ಎಇಇ ಅಜರುದ್ದೀನ್, ಮೋಹನಕುಮಾರಿ, ರಾಜಣ್ಣ, ಸ್ಥಳ: ಪುರಭವನ, ಮಧ್ಯಾಹ್ನ 3 ರಿಂದ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ :** ಅಕ್ಕಮಹಾದೇವಿ ಜಯಂತಿ ಹಾಗೂ ಕದಳಿ ರಜತೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್, ಅಧ್ಯಕ್ಷತೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ, ರಜತೋತ್ಸವ ಉದ್ಘಾಟನೆ: ಕದಳಿ ಮಹಿಳಾ ವೇದಿಕೆ ರಾಜ್ಯ ಸಂಚಾಲಕಿ ಸುಶೀಲಾ ಸೋಮಶೇಖರ್, ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅವರಿಂದ ಅಕ್ಕನ ಆಧ್ಯಾತ್ಮಿಕ ಮತ್ತು ಅನುಭಾವದ ದರ್ಶನ ಕುರಿತು ಉಪನ್ಯಾಸ, ಉಪಸ್ಥಿತರು : ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು.ಸದಾನಂದಯ್ಯ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಶಾರದಾ ಶಿವಲಿಂಗಸ್ವಾಮಿ, ಸಂಜೆ 4ಕ್ಕೆ ಕದಳಿ ಸಹೋದರಿಯರಿಂದ ವಚನ ಗಾಯನ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 4.30ಕ್ಕೆ.

■ **ನೆಲೆ ಹಿನ್ನೆಲೆ, ರಂಗವಾಹಿನಿ, ಚಾಮರಾಜನಗರ, ರಾಮ ಮನೋಹರ ಲೋಹಿಯಾ ಟ್ರಸ್ಟ್:** ರಾಜ್ಯ ಮಟ್ಟದ ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ, ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ, ಉದ್ಘಾಟನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಯೋಜಿತ ಅಧ್ಯಕ್ಷ ಡಾ.ಎಲ್.ಎನ್. ಮುಕುಂದರಾಜು, ಅಧ್ಯಕ್ಷತೆ: ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ.ಆರ್.ರಾಜು, ಪ್ರಾಸ್ತಾವಿಕ ನುಡಿ: ಪ್ರದೇಶಾಭಿವೃದ್ಧಿ ಮಂಡಳಿ ನಿರ್ದೇಶಕ ಡಿ. ಚಂದ್ರಶೇಖರಯ್ಯ, ಪ್ರಶಸ್ತಿ ಪ್ರದಾನ: ಎಎಸ್‌ಬಿಎಂ ವಿವಿ ಭುವನೇಶ್ವರ ವಿಶ್ರಾಂತ ಕುಲಪತಿ ಪ್ರೊ. ಮಹದೇವ, ಪ್ರಶಸ್ತಿ ಪುರಸ್ಕೃತರ ಕುರಿತು : ಕವಿ ಸುಬ್ಬು ಹೊಲೆಯಾರ್, ಪ್ರಶಸ್ತಿ ಪುರಸ್ಕೃತರು : ಕವಿ ಎಂ.ಜವರಾಜ್, ರಾಜಶೇಖರ ಕೋಟಿ ಕುರಿತು : ಒಡನಾಡಿಯ ಸ್ಟ್ಯಾನ್ಲಿ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಆನಂದ್ ಗೋಪಾಲ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು– ಕನ್ನಡದ ಒಡನಾಡಿ ಭಾಷೆಗಳನ್ನು ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಹೆಚ್. ವಿ. ನಾಗರಾಜರಾವ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ವಿಶ್ವ ಧೂಮಪಾನ ರಹಿತ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ. 'ಧೂಮಪಾನ ಮತ್ತು ಹೃದಯಾಘಾತ' ಕುರಿತು ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಹೃದ್ರೋಗ ವಿಭಾಗದ ನಿರ್ದೇಶಕರಾದ ಡಾ. ವಿ.ಕೇಶವಮೂರ್ತಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಶ್ರೀಗುರು ಕಲಾ ಶಾಲೆಯ ಪುಟಾಣಿಗಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ನಂಜನಗೂಡು ತಾಲೂಕು ಹಳ್ಳದಕೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಕೊಳ್ಳೇಗಾಲ ತಾಲೂಕು ಸತ್ತೇಗಾಲದ ಶಿವಮ್ಮ ಮತ್ತು ಸಂಗಡಿಗರು, 1.20 ಭಾವಗೀತೆಗಳು–ಆರ್. ಶೈಲ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ 'ಎರಡು ಕನಸು', 3.45 ಯಕ್ಷಗಾನ : ತಾಳ ಮದ್ದಲೆ, ಪ್ರಸಂಗ– ಕಿರಾತಾರ್ಜುನ, ಪ್ರಸ್ತುತಿ– ಕೊಡಪದವಿನ ಚಣಿಲ ಸುಬ್ರಹ್ಮಣ್ಯ ಭಟ್ ಮತ್ತು ತಂಡದವರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ. ಮೀನಾ, 6.55 ಕೃಷಿರಂಗ, ತೋರಣ ಹೂರಣ –ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ– ಆರ್. ಲೋಕೇಶ್ವರಿ, 8.00'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಹಾವೇರಿ ಜಿಲ್ಲೆಯ ಅಲೆಮಾರಿ ದುರ್ಮುರ್ಗಿ ದಂಪತಿ ಹನುಮಂತ ದುರ್ಮುರ್ಗಿ ಹಾಗೂ ಚೆನ್ನವ್ವ ದುರ್ಮುರ್ಗಿ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ಪಂಡಿತ್. ರಾಮ್ ದೇಶಪಾಂಡೆ – ಹಾಡುಗಾರಿಕೆ

■ **ಕರ್ನಾಟಕ ಶಾಸ್ತ್ರೀಯ ಸಂಗೀತ ಒಕ್ಕೂಟ ಟ್ರಸ್ಟ್ :** ಮೈಸೂರು ವಾಸುದೇವಾಚಾರ್ಯ ಸಂಸ್ಮರಣಾ ಸಂಗೀತ ಉತ್ಸವ, ಬೆಳಗ್ಗೆ 9.30 ರಿಂದ ವಿದ್ವಾನ್ ವಿಜಯಸೂರ್ಯ ಅವರಿಂದ ನಾಗಸ್ವರ, ವಿದುಷಿ ಸಿ.ವಿ. ಶ್ರುತಿ–ಪಿಟೀಲು, ವಿದ್ವಾನ್ ತೇಜು–ಡೋಲು; ಬೆಳಗ್ಗೆ 10.30ರಿಂದ ದೀಪೋಜ್ವಲನ ಉದ್ಘಾಟನೆ; ಬೆಳಗ್ಗೆ 11ರಿಂದ ವಾಸುದೇವಾಚಾರ್ಯರ ಕೃತಿಗಳನ್ನಾಧರಿಸಿದ ಗೋಷ್ಠಿಗಾಯನ, ನಿರ್ದೇಶನ: ಡಾ.ಪುಸ್ತಕಂ ರಮಾ; ಮಧ್ಯಾಹ್ನ 12ರಿಂದ ವಿದುಷಿ ಸುರಭಿಪುಸ್ತಕಂ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ತುಮಕೂರು ಬಿ.ರವಿಶಂಕರ್–ಮೃದಂಗ, ವಿದ್ವಾನ್ ವಿಕ್ರಮ್ ಭಾರದ್ವಾಜ್– ಮೋರ್ಚಿಂಗ್; ಸಂಜೆ 5.30ರಿಂದ ಗಾಯನ ಕಛೇರಿ–ವಿದ್ವಾನ್ ಮೈಸೂರು ಶ್ರೀನಾಥ್, ಕು.ತನ್ಮಯೀ– ಪಿಟೀಲು, ವಿದ್ವಾನ್ ಜಿ.ಎಸ್.ರಾಮಾನುಜಂ–ಮೃದಂಗ, ವಿದ್ವಾನ್ ಎಸ್.ರಮೇಶ್–ಮೋರ್ಚಿಂಗ್; ಸಂಜೆ 6.30ರಿಂದ ಕೊಳಲು ವಾದನ–ವಿದ್ವಾನ್ ಮೈಸೂರು ಚಂದನ್‌ಕುಮಾರ್, ಕು.ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಎ.ರಾಧೇಶ್–ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟಂ; ರಾತ್ರಿ 7.30 ರಿಂದ ಗಾಯನ ಕಛೇರಿ–ವಿದ್ವಾನ್ ಮಧೂರು ಬಾಲಸುಬ್ರಹ್ಮಣ್ಯ, ವಿದ್ವಾನ್ ವೀಣಾ ಸುರೇಶ್–ಪಿಟೀಲು, ವಿದ್ವಾನ್ ಪಿ. ನಟರಾಜ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ವಾಸುದೇವಾಚಾರ್ಯ ಭವನ.

■ **ಭಾರತೀಯ ವಿದ್ಯಾರ್ಥಿ ಸಂಘ–ಬಿವಿಎಸ್ :** ಬುದ್ಧ ಫೆಸ್ಟ್–2024, ಧಮ್ಮ ಲಹರಿ ಧ್ವನಿಸುರುಳಿ ಬಿಡುಗಡೆ, ಬೌದ್ಧ ಸಾಹಿತ್ಯ ಮೀಮಾಂಸಕರಾದ ಪ್ರೊ. ಮಹಾದೇವಯ್ಯ ಕಲ್ಲಾರೆಪುರ ಅವರಿಂದ ಬುದ್ಧನ ಪಟಿಚ್ಚ ಸಮುಪ್ಪಾದ ತತ್ತ್ವ ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಪಂ ನಿವೃತ್ತ ಉಪ ಕಾರ್ಯದರ್ಶಿ ಡಾ. ಎಸ್. ಪ್ರೇಮ್‌ಕುಮಾರ್, ಧ್ವನಿಸುರುಳಿ ಬಿಡುಗಡೆ : ಬಸವರಾಜ ದೇವನೂರ, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಪುರುಷೋತ್ತಮ್, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ರಸ್ತೆ, ಸಂಜೆ 5.30 ರಿಂದ.

■ **ಹೊರೈಜಾನ್ ಸಂಸ್ಥೆ :** ಲಯವಾದ್ಯ ತರಗತಿ, ಮುಖ್ಯ ಅತಿಥಿಗಳು : ಅಗಂ ಬ್ಯಾಂಡ್ ವಾದಕ ಯದುನಂದನ್ ನಾಗರಾಜ್, ಕೊಳಲು ವಾದಕ ಎಂ.ಪಿ.ಎನ್. ಅರ್ಜುನ್, ಸಂಸ್ಥೆ ಜಿ.ಎಂ. ಮಂಜುನಾಥ್, ಸಚಿನ್ ದೇವ್ ರೈ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸ್ವರಸಂಕುಲ ಸಂಗೀತ ಸಭಾ :** ಕೆ.ವಿ. ಮೂರ್ತಿ ಸ್ಮರಣಾರ್ಥ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ, ವಿದುಷಿ ಶ್ರೀಮತಿ ದೇವಿ ಅವರಿಂದ ಸಂಗೀತ ಗಾಯನ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 6ಕ್ಕೆ ಅಂಕುರಾರ್ಪಣ, ಸ್ಥಳ: ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ, ತಿಲಕ್‌ನಗರ.

■ **ಶ್ರೀ ಕೃಷ್ಣ ಗಾನ ಸಭಾ :** ನೃತ್ಯ ಕಾರ್ಯಕ್ರಮ, ಜೋಯಿಸ್ ಕಲಾ ಪ್ರತಿಷ್ಠಾನ ವಿದ್ಯಾರ್ಥಿಗಳಿಂದ, ನಿರ್ದೇಶನ: ನಮ್ರತಾ ಜೋಯಿಸ್, ಸ್ಥಳ: ಶ್ರೀ ಕೃಷ್ಣ ಗಾನ ಸಭಾ ಆವರಣ, ಗೋಕುಲಂ, ಸಂಜೆ 6.30ಕ್ಕೆ.

ಮೈಸೂರಲ್ಲಿ ಪ್ರತ್ಯೇಕ ಎರಡು ಅಪಘಾತದಲ್ಲಿ ಮೂವರ ಸಾವು



ಮೈಸೂರು ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ರಿಂಗ್‌ರಸ್ತೆಯಲ್ಲಿ ಅಪಘಾತ ಸಂಭವಿಸಿದ ಸ್ಥಳ ಪರಿಶೀಲನೆ ನಡೆಸಿ, ಮಾಹಿತಿ ಪಡೆದರು. ಈ ವೇಳೆ ಡಿಸಿಪಿ ಜಾಹ್ನವಿ, ವಿವಿ ಪುರಂ ಇನ್ಸ್‌ಪೆಕ್ಟರ್ ಭಾನು ಇದ್ದರು.

ಮೈಸೂರು, ಮೇ 25(ಎಸ್‌ಬಿಡಿ)– ಮೈಸೂರಿನಲ್ಲಿ ಶುಕ್ರವಾರ ರಾತ್ರಿ ಎರಡು ಪ್ರತ್ಯೇಕ ಅಪಘಾತದಲ್ಲಿ ಮಹಿಳೆ ಸೇರಿ ಮೂವರು ಸಾವನ್ನಪ್ಪಿದ್ದು, ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ರಿಂಗ್‌ರಸ್ತೆಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಎದುರು ಸಂಭವಿಸಿದ ಅಪಘಾತದಲ್ಲಿ ಇಬ್ಬರು ಯುವಕರು ಹಾಗೂ ಮೈಸೂರು–ಬೆಂಗಳೂರು ರಸ್ತೆಯಲ್ಲಿ ನಡೆದ ಅಪಘಾತದಲ್ಲಿ ಓರ್ವ ಮಹಿಳೆ ಸಾವನ್ನಪ್ಪಿದ್ದಾರೆ.

ಸ್ನೇಹಿತರು ಸಾವು: ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ಧಾರವಾಡ ಮೂಲದ ಸಾಯಿ ಕೀರ್ತಿ(24) ಹಾಗೂ ಆಂಧ್ರ ಮೂಲದ ನವೀನ್ ಸಾಯಿ(23) ಎಲ್ ಅಂಡ್ ಟಿ ಕಂಪನಿಯಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿದ್ದು, ಹೆಬ್ಬಾಳದಲ್ಲಿ ವಾಸವಿದ್ದರು. ಶುಕ್ರವಾರ ರಾತ್ರಿ 12.30ರ ಸಮಯದಲ್ಲಿ ಸಾಯಿ ಕೀರ್ತಿ ರಾಯಲ್ ಎನ್‌ಫೀಲ್ಡ್ ಹಾಗೂ ನವೀನ್ ಸಾಯಿ ಹಾಗೂ ಮತ್ತೋರ್ವ ಸ್ನೇಹಿತ ಪಲ್ಸರ್‌ನಲ್ಲಿ ರಾಯಲ್‌ಇನ್ ಜಂಕ್ಷನ್ ಕಡೆಯಿಂದ ಉನ್ನತಿನಗರದ ಕಡೆಗೆ ಹೋಗುವಾಗ ಈ ಘಟನೆ ಸಂಭವಿಸಿದೆ

ಮುಂದೆ ಹೋಗಿದ್ದ ಸಾಯಿಕೀರ್ತಿ ಜಿಆರ್‌ಎಸ್ ಬಳಿ ಯೂಟರ್ನ್ ತೆಗೆದುಕೊಂಡು ಬರುವಾಗ ಸ್ನೇಹಿತ ನವೀನ್ ಸಾಯಿ ರಾಂಗ್ ಸೈಡ್‌ನಲ್ಲಿ ಸಂಚರಿಸಿದ್ದಾನೆ. ಈ ವೇಳೆ ಬೈಕ್‌ಗಳಿಗೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನವೀನ್ ಜೊತೆಗಿದ್ದ ಸ್ನೇಹಿತನಿಗೆ ಗಂಭೀರ ಗಾಯವಾಗಿದೆ. ಹೆಲ್ಮೆಟ್ ಧರಿಸದ ಕಾರಣ ತಲೆಗೆ ಬಲವಾದ ಪೆಟ್ಟು ಬಿದ್ದು, ಸಾವನ್ನಪ್ಪಿದ್ದಾರೆ. ಸಾಯಿಕೀರ್ತಿ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದ್ದು, ನವೀನ್ ಸಾಯಿ ದೇಹವನ್ನು ಭಾನುವಾರ ವೈದ್ಯಕೀಯ ಪರೀಕ್ಷೆ ನಡೆಸಿ, ವಾರಸುದಾರರಿಗೆ ನೀಡಲಾಗುವುದು ಎಂದು ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಭಾನು ತಿಳಿಸಿದ್ದಾರೆ

ಪುಟ್ಟ ಮಗು ಪಾರು: ಶುಕ್ರವಾರ ರಾತ್ರಿ 11.30ರ ವೇಳೆಯಲ್ಲಿ ಬೆಲವತ್ತದ ಸೈಯದ್ ನಾಸಿರ್, ಪತ್ನಿ ಹಾಜಿರಾ(32) ದಂಪತಿ ತಮ್ಮ 2 ವರ್ಷದ ಮಗುವಿನೊಂದಿಗೆ ಬೈಕ್‌ನಲ್ಲಿ ಪ್ರಶಾಂತ್ ನಿಲಯದ ಕಡೆಯಿಂದ ದಂಡಿಮಾರಮ್ಮ ದೇವಸ್ಥಾನದ ರಸ್ತೆ ಕಡೆಗೆ ಹೋಗುವಾಗ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿಯಾದ ರಭಸಕ್ಕೆ ಬೈಕ್ ನೆಲಕ್ಕುರುಳಿದ್ದು, ತೀವ್ರವಾಗಿ ಗಾಯಗೊಂಡಿದ್ದ ಹಾಜಿರಾ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಅವರ ಪತಿ ಸೈಯದ್‌ಗೆ ಗಂಭೀರ ಗಾಯವಾಗಿದ್ದು, ಅದೃಷ್ಟವಶಾತ್ 2 ವರ್ಷದ ಮಗು ರಸ್ತೆ ಬದಿ ಹುಲ್ಲಿನ ಮೇಲೆ ಬಿದ್ದಿದ್ದು ಪ್ರಾಣಾಪಾಯದಿಂದ ಪಾರಾಗಿದೆ ಎಂದು ಎನ್.ಆರ್.ಸಂಚಾರ ಠಾಣೆ ಇನ್ಸ್‌ಪೆಕ್ಟರ್ ರೇಖಾಬಾಯಿ ತಿಳಿಸಿದ್ದಾರೆ.



4ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿನ್ನ ನೆನಪಿನಲ್ಲಿರುವ
ದುಃಖತಪ್ತರು: ಚೆಲುವಯ್ಯ
ಕೆ.ಆರ್. ಪೇಟೆ
ಶ್ರೀಮತಿ ಸಾವಿತ್ರಿ
ನಿಧನ: 25.05.2020

14ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 14 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಪತಿ: ವೇಣುಗೋಪಾಲ್, ಸವಿತ
ಮಗ: ಜಯಸಿಂಹ
ಸೊಸೆ: ಕಾವ್ಯ
ತಾಯಿ: ಶಾಂತಮ್ಮ
ಸಿ.ಎಸ್.ಮಂಜುಳ(ಚಿಣ್ಣ)

ಧರ್ಮಸ್ಥಳದ ಮಂಜುನಾಥ ಸ್ವಾಮಿಯ ದರ್ಶನ ಪಡೆದ ಸಿಎಂ, ಡಿಸಿಎಂ



ಮಂಗಳೂರು, ಮೇ 25– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಶನಿವಾರ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ, ಮಂಜುನಾಥ ಸ್ವಾಮಿಯ ದರ್ಶನ ಪಡೆದರು.

ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರು ಸಾಂಪ್ರದಾಯಿಕ ಉಡುಗೆಗಳಾದ ಶಲ್ಲೆ ಮತ್ತು ಪಂಚೆಯನ್ನು ಧರಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಇಂದು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಿಎಂ ಮತ್ತು ಡಿಸಿಎಂ, ಅಲ್ಲಿಂದ ರಸ್ತೆ ಮಾರ್ಗವಾಗಿ ಧರ್ಮಸ್ಥಳಕ್ಕೆ ತೆರಳಿದರು. ದೇವರ ದರ್ಶನ ಪಡೆದ ನಂತರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವಿರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ಕುಶಲೋಪರಿ ವಿಚಾರಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, 'ರಾಜ್ಯದಲ್ಲಿ ಉತ್ತಮ ಮಳೆ – ಬೆಳೆ ಆಗಲೆಂದು ಪ್ರಾರ್ಥನೆ ಮಾಡಿದ್ದೇವೆ. ನಮ್ಮ ಧರ್ಮದ ಸಂಪ್ರದಾಯದಂತೆ ಧರ್ಮಸ್ಥಳದ ಮಂಜುನಾಥ ಸ್ವಾಮಿಗೆ ನಮಸ್ಕಾರ ಹೇಳಲು ಬಂದಿದ್ದೇವೆ. ರಾಜ್ಯದ ಜನತೆ ಪರವಾಗಿ ಹಾಗೂ ವೈಯಕ್ತಿಕವಾಗಿ ಪ್ರಾರ್ಥನೆ ಮಾಡಿದ್ದೇನೆ ಎಂದರು.

ರಾಜ್ಯದ ನಾನಾ ಕಡೆಗಳಿಂದ ಶಕ್ತಿ ಯೋಜನೆ ಪ್ರಯೋಜನ ಪಡೆದು ಧರ್ಮಸ್ಥಳಕ್ಕೆ ಭಕ್ತರು ಬರುತ್ತಿದ್ದಾರೆಂದು ವೀರೇಂದ್ರ ಹೆಗ್ಗಡೆಯವರು ಹೇಳಿದ್ದಾರೆ. ದೇವಸ್ಥಾನದೊಳಗೆ ಇದ್ದ ಮಹಿಳಾ ಭಕ್ತರು ತಮಗೆ ಎರಡು ಸಾವಿರ ಸಿಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ಅವರೆಲ್ಲರ ಆಶೀರ್ವಾದ ನಮಗೆ ಶಕ್ತಿ ತುಂಬಿದೆ ಎಂದರು.

ಮೇ 28ಕ್ಕೆ ಪ್ರಧಾನಿ ಮೋದಿ ದ್ವೇಷ ಭಾಷಣ ವಿರುದ್ಧದ ದೂರಿನ ವಿಚಾರಣೆ

ಬೆಂಗಳೂರು, ಮೇ 25– ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಅದು ದೇಶದ ಜನರ ಸಂಪತ್ತನ್ನು ಮುಸ್ಲಿಮರಿಗೆ ಮರು ಹಂಚಿಕೆ ಮಾಡುತ್ತದೆ ಎಂಬ ಪ್ರಚೋದನಾಕಾರಿ ಮತ್ತು ದ್ವೇಷಪೂರಿತ ಚುನಾವಣಾ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಜನಪ್ರತಿನಿಧಿಗಳ ವಿಶೇಷ (ಮ್ಯಾಜಿಸ್ಟ್ರೇಟ್) ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಾಗಿದೆ.



ಈ ಸಂಬಂಧ ಹೆಬ್ಬಾಳದ ಜಿಯಾವುರ್ ರಹಮಾನ್ ನೊಮಾನಿ, 42ನೇ ಎಸಿಎಂಎಂ ನ್ಯಾಯಾಲಯಕ್ಕೆ ಇದೇ 23ರಂದು ದೂರು ಸಲ್ಲಿಸಿದ್ದಾರೆ. ಪ್ರಧಾನಿಯವರ ಭಾಷಣವು ಮುಸ್ಲಿಮರನ್ನು ನಿಂದಿಸುವಂತಿದೆ. ಈ ದೇಶದ ಸಂಪತ್ತನ್ನು ಲೂಟಿ ಹೊಡೆದ ನುಸುಳುಕೋರರ ಜೊತೆ ಅವರನ್ನು ಹೋಲಿಕೆ ಮಾಡುವಂತೆ ಪ್ರೇರೇಪಿಸುತ್ತದೆ. ಆದಕಾರಣ ದ್ವೇಷ ಹರಡಿದ, ಶಾಂತಿಭಂಗ ಉಂಟು ಮಾಡಿದ ಆರೋಪದಡಿ ಮೋದಿ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ದೂರಿನಲ್ಲಿ ವಿವರಿಸಲಾಗಿದೆ. ವಿಚಾರಣೆ ಮೇ 28ಕ್ಕೆ ನಿಗದಿಯಾಗಿದೆ. ಫಿರ್ಯಾದುದಾರರ ಪರ ವಕೀಲ ಮುರ್ತಜಾ ಅಲಿ ಬೇಗ್ ವಕಾಲತ್ತು ವಹಿಸಿದ್ದಾರೆ.

ಪತ್ರಕರ್ತ ಜಯಕುಮಾರ್ ಇನ್ನಿಲ್ಲ



ಬೆಂಗಳೂರು, ಮೇ 25– ಪತ್ರಕರ್ತ ಆರ್. ಜಯಕುಮಾರ್(64) ಅವರು ಅನಾರೋಗ್ಯದಿಂದ ಶನಿವಾರ ಮಧ್ಯಾಹ್ನ ನಿಧನರಾದರು.

ಕೊಡಗಿನವರಾದ ಜಯಕುಮಾರ್, ಚಳವಳಿ ಮೂಲಕವೇ ಪತ್ರಕರ್ತರಾಗಿ ರೂಪುಗೊಂಡವರು. ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಉದಯ ಟಿವಿ ಸೇರಿದಂತೆ ಮೂರು ದಶಕ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದರು. ಅವರು ಪತ್ನಿ ಡಾ. ಲೀಲಾ ಸಂಪಿಗೆ, ಪುತ್ರಿ ದೀಪಿಕಾ ಅವರನ್ನು ಅಗಲಿದ್ದಾರೆ. ಜಯಕುಮಾರ್ ಅವರ 'ಗಾಂಧಿ ಮರೆತ ನಾಡಿನಲ್ಲಿ' ಮತ್ತು 'ಕಾಡು ಹಾದಿಯ ಬೆಳಕಿನ ಜಾಡಿನಲ್ಲಿ' ಪುಸ್ತಕಗಳು ಇತ್ತೀಚೆಗೆ ಬಿಡುಗಡೆಯಾಗಿದ್ದವು. ಜಯಕುಮಾರ್ ದೇಹವನ್ನು ಬೆಂಗಳೂರು ಮೆಡಿಕಲ್ ಕಾಲೇಜಿಗೆ ದಾನ ಮಾಡಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "ನಾನು ಕೊಟ್ಟ ಔಷಧ ಮುಗಿಯಿತಾ?"
ಗುಂಡ : "ಇಲ್ಲ ಡಾಕ್ಟ್ರೇ."
ಡಾಕ್ಟರ್ : "ಯಾಕೆ?"
ಗುಂಡ : "ಔಷಧಿ ಬಾಟಲಿಯ ಮೇಲೆ ಯಾವಾಗಲೂ ಮುಚ್ಚಿಡಿ ಎಂದು ಬರೆದಿತ್ತು. ಅದಕ್ಕೆ ನಾನು ಔಷಧ ಬಾಟಲಿಯ ಮುಚ್ಚಳ ತೆಗಿಯಲೇ ಇಲ್ಲ!"

ಮೈಸೂರು ಮಿತ್ರ
ಭಾನುವಾರ, 26 ಮೇ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಅನುಭವವೇ ಬುದ್ಧಿವಂತಿಕೆ, ಮುಖ್ಯ ಸ್ನೇಹಿತ –ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆದದ್ದೇ ಒಂದು / ಅಂದುಕೊಂಡದ್ದೇ ಒಂದು

ನಿಮ್ಮ ಪತ್ರಗಳು

■ ಒಳಚರಂಡಿ ವ್ಯವಸ್ಥೆ ಕಲ್ಪಿಸಿ



ಮಾನ್ಯರೆ,

ಮೈಸೂರು ಸ್ವಚ್ಛ ನಗರಿ ಎಂಬ ಬಿರುದಿಗೆ ಈ ಸ್ಥಳ ವಿರುದ್ಧವಾಗಿದೆ. ಮೈಸೂರಿನ ಹೃದಯ ಭಾಗ ವಾರ್ಡ್ ನಂಬರ್ 41ರ ಕುಂಬಾರಗೇರಿಯಲ್ಲಿ ಡ್ರೈನೇಜ್ ಮೋರಿ ನೀರು ಕಳೆದ ಆರು ತಿಂಗಳಿಂದ ರಸ್ತೆಯಲ್ಲಿ ಹರಿಯುತ್ತಿದೆ. ಇದರಿಂದ ಬರುವ ದುರ್ವಾಸನೆಯಿಂದ ಪರಿತಪಿಸುತ್ತಿದ್ದೇವೆ. ಅನಾರೋಗ್ಯದ ಭೀತಿಯಿಂದ ಆತಂಕಕ್ಕೊಳಗಾಗಿದ್ದೇವೆ. ಅಲ್ಲದೆ ಈ ಜಾಗವು ಸೊಳ್ಳೆಗಳ ಆವಾಸ ಸ್ಥಾನವಾಗಿದ್ದು, ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಂಬಂಧ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ದೂರು ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಡ್ರೈನೇಜ್ ದುರಸ್ತಿಪಡಿಸಬೇಕು. ನೆಮ್ಮದಿಯಿಂದ ವಾಸಿಸಲು ಅನುಕೂಲ ಮಾಡಿಕೊಡಬೇಕಾಗಿ ಮನವಿ.

– ಕುಂಬಾರಗೇರಿ ನಿವಾಸಿಗಳು, ಮೈಸೂರು.

■ ದೇವೇಗೌಡರ ಮೇಲೆ ಈ ರೀತಿಯ ದಾಳಿ ಅಗತ್ಯವಿರಲಿಲ್ಲ

ಮಾನ್ಯರೆ,

ಮಾಜಿ ಪ್ರಧಾನಿ ದೇವೇಗೌಡರು, ತಮ್ಮ ಮೊಮ್ಮಗ ಪ್ರಜ್ವಲ್‌ನನ್ನು ತಕ್ಷಣ ಎಸ್‌ಐಟಿ ಮುಂದೆ ಬಂದು ಶರಣಾಗು ಎಂದು ಹೇಳಿರುವ ವಿಚಾರ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಈ ಸಂಬಂಧ ಮುಖ್ಯಮಂತ್ರಿಗಳು ಪ್ರಜ್ವಲ್‌ನನ್ನು ವಿದೇಶಕ್ಕೆ ಕಳುಹಿಸಿರುವವರೇ ದೇವೇಗೌಡರು. ಈಗ ಸಾರ್ವಜನಿಕರ ಅನುಕಂಪಕ್ಕೋಸ್ಕರ ಪತ್ರ ಬರೆದಿದ್ದಾರೆ ಎಂದು ಆರೋಪಿಸಿದ್ದಾರೆ. ಪ್ರಜ್ವಲ್ ಎಲ್ಲೇ ಅವಿತುಕೊಂಡು ಕುಳಿತಿದ್ದರೂ ದೇಶಕ್ಕೆ ವಾಪಸ್ ಬರಲೇಬೇಕಲ್ಲವೆ? ಆಗ ನೆಲದ ಕಾನೂನಿನಂತೆ ಆತನ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಹಾಗಾಗಿ ಯಾರೂ ಕಾನೂನಿನ ಮುಂದೆ ಏನು ಮಾಡಲೂ ಸಾಧ್ಯವಿಲ್ಲ. ಅಂತಹುದರಲ್ಲಿ ದೇವೇಗೌಡರಾಗಲೀ ಮತ್ತೊಬ್ಬರಾಗಲಿ ಏನೂ ಮಾಡಲು ಸಾಧ್ಯವಿಲ್ಲ. ಇದು ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲದ ವಿಷಯವೇನಲ್ಲ. ಆದರೂ ದೇವೇಗೌಡರ ಕಾಲು ಎಳೆಯುವ ಪ್ರಯತ್ನ ಬೇಕಾಗಿತ್ತೇನು? ಈಗಾಗಲೇ ಗೌಡರ ಕುಟುಂಬದಲ್ಲಿ ಮೌನ, ದುಃಖ ಮಡುಗಟ್ಟಿದೆ. ವಯೋವೃದ್ಧರಾದ ದೇವೇಗೌಡರ ಮೇಲೆ ಈ ರೀತಿಯ ದಾಳಿ ಬೇಕಾಗಿರಲಿಲ್ಲ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

■ ನನ್ನ ಪ್ರಾಣ ಉಳಿಸಿದ ಹೆಲ್ಮೆಟ್

ಮಾನ್ಯರೆ,

ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಒಂದು ಜೀವ ರಕ್ಷಕವಿದ್ದಂತೆ. ರಸ್ತೆಗಳಲ್ಲಿ ಹೋಗುವಾಗ ಅಕಸ್ಮಾತ್ ಅಪಘಾತ ಸಂಭವಿಸಿದಾಗ ತಲೆಗೆ ಏಟು ಬೀಳಬಾರದೆಂದು ಹೆಲ್ಮೆಟ್ ಧರಿಸಲಾಗುತ್ತದೆ. ಜನರ ಜೀವ ಉಳಿವಿಗೆ ದ್ವಿಚಕ್ರ ವಾಹನ ಸವಾರರು ಹಾಗೂ ಹಿಂಬದಿ ಸವಾರರು ಸೇರಿದಂತೆ ಹೆಲ್ಮೆಟ್‌ನ್ನು ಕಡ್ಡಾಯವಾಗಿ ಧರಿಸಬೇಕೆಂದು ಸರ್ಕಾರ ಕಾನೂನನ್ನೆ ಜಾರಿ ಮಾಡಿದ್ದು, ಯಾರು ಹೆಲ್ಮೆಟ್ ಧರಿಸುವುದಿಲ್ಲವೋ ಅವರಿಗೆ ಟ್ರಾಫಿಕ್ ಪೊಲೀಸರು ದಂಡ ವಿಧಿಸುವ ಕಾನೂನು ಜಾರಿಯಲ್ಲಿದೆ.

ಕೇವಲ ಕಾನೂನಿನ ದೃಷ್ಟಿಯಲ್ಲದೆ ನಮ್ಮ ಪ್ರಾಣ ಅಮೂಲ್ಯವಾದುದಾಗಿದ್ದು, ಅಕಸ್ಮಾತ್ ಅಪಘಾತಗಳಲ್ಲಿ ತಲೆಗೆ ಏಟು ಬಿದ್ದು ಪ್ರಾಣ ಕಳೆದುಕೊಂಡಾಗ ಮನೆಯಲ್ಲಿ ನಮ್ಮನ್ನೆ ನಂಬಿಕೊಂಡು ಜೀವನ ಮಾಡುವ ಹೆಂಡತಿ –ಮಕ್ಕಳು ಬೀದಿ ಪಾಲಾಗುತ್ತಾರೆ. ಇದನ್ನು ಅಕ್ಷರಶಃ ನಂಬಿದ ನಾನು ಕಾನೂನಿಗೋಸ್ಕರವಲ್ಲದೆ ನನ್ನ ಜೀವಕ್ಕೋಸ್ಕರ ಹೆಲ್ಮೆಟ್ ಧರಿಸಿಯೇ ದ್ವಿಚಕ್ರವಾಹನ ಚಲಾಯಿಸುತ್ತಿದ್ದೆ. ನಾನು ಎಂದಿಗೂ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿರಲಿಲ್ಲ. ಹೀಗಿರುವಾಗ ಮೇ 11ರಂದು ನಾನು ಸಿಟಿಯಿಂದ ಗಿರಿದರ್ಶಿನಿಯಲ್ಲಿರುವ ನನ್ನ ಮನೆಗೆ ಬರುವಾಗ ಟೆರೇಷಿಯನ್ ಕಾಲೇಜು ಬಳಿಯ ರಸ್ತೆಯಲ್ಲಿ ಮಳೆಯಿಂದ ಶೇಖರಣೆಯಾಗಿದ್ದ ಮರಳಿನ ಮೇಲೆ ಗಾಡಿ ಚಲಿಸಿದಾಗ ಸ್ಕಿಡ್ ಆಗಿ ಗಾಡಿ ಸಮೇತ ಎಡಭಾಗಕ್ಕೆ ಬಿದ್ದಿದ್ದೇನೆ. ಹೀಗೆ ಬೀಳುವಾಗ ನನ್ನ ತಲೆ ಮೊದಲು ರಸ್ತೆಗೆ ಬಲವಾಗಿ ಒಡೆಯಿತು. ನಾನು ಹೆಲ್ಮೆಟ್ ಧರಿಸಿದ್ದರಿಂದ ಪ್ರಾಣಾಪಾಯದಿಂದ ಪಾರಾದೆ. ಆದರೂ ಎಡಕೈಗೆ ಸಂಪೂರ್ಣ ತರಚಿದ ಗಾಯ ಹಾಗೂ ಎಡಭಾಗದ ಮೊಣಕಾಲಿಗೂ ಗಾಯಗಳಾಗಿದ್ದು, ಒಂದು ವಾರದಿಂದ ಇನ್ನೂ ಚಿಕಿತ್ಸೆ ಪಡೆಯುತ್ತಲೇ ಇದ್ದೇನೆ. ಆದರೆ ಹೆಲ್ಮೆಟ್ ಧರಿಸಿದ್ದರಿಂದ ಪ್ರಾಣಾಪಾಯದಿಂದ ಪಾರಾದೆನೆಂದು ನಿಟ್ಟುಸಿರು ಬಿಟ್ಟಿದ್ದೇನೆ. ಆದ್ದರಿಂದ ದ್ವಿಚಕ್ರವಾಹನ ಸವಾರರು ತಾವೂ ಕೂಡ ತಪ್ಪದೆ ಹೆಲ್ಮೆಟ್ ಧರಿಸಿ ತಮ್ಮ ಪ್ರಾಣ ಉಳಿಸಿಕೊಳ್ಳಬೇಕೆಂಬುದು ನನ್ನ ಮನವಿ

–ಎಂ.ಮಹೇಶ್ ನಿಲಸೋಗೆ, ಗಿರಿದರ್ಶಿನಿ ಬಡಾವಣೆ, ಮೈಸೂರು.

■ ಕುಮಾರಸ್ವಾಮಿಯವರ ಕೂಗು ಕೇಳುತ್ತಿಲ್ಲವೆ...?

ಮಾನ್ಯರೆ,


ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ "ಕೂಗು" ಪ್ರಜ್ವಲ್ ರೇವಣ್ಣಗೆ ಕೇಳಿಸುತ್ತಿಲ್ಲವೇ.? ಹಾಸನದ ಸಂಸದ ಪ್ರಜ್ವಲ್ ರೇವಣ್ಣನವರ ಮಹಿಳಾ ಲೈಂಗಿಕ ದೌರ್ಜನ್ಯದ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ, ತಲೆಮರೆಸಿಕೊಂಡು ವಿದೇಶದಲ್ಲಿದ್ದು, ನೀನು ನಿಮ್ಮ ತಾತ (ಹೆಚ್.ಡಿ.ದೇವೇಗೌಡರು, ಮಾಜಿ ಪ್ರಧಾನಿಗಳು) ಮತ್ತು ಪಕ್ಷದ ಕಾರ್ಯಕರ್ತರಿಗೆ ಗೌರವ ಕೊಟ್ಟು, ಎಲ್ಲೇ ಇದ್ದರೂ 48 ಗಂಟೆಯೊಳಗೆ ಬಂದು, ಈ ನೆಲದ ಕಾನೂನಿಗೆ ಗೌರವ ಕೊಟ್ಟು ತನಿಖೆಗೆ ಸಹಕರಿಸುವಂತೆ ಕುಮಾರಸ್ವಾಮಿ ಪ್ರಜ್ವಲ್‌ಗೆ ಮನವಿ ಮಾಡಿದ್ದಾರೆ. ಆದರೆ ಈ ಕೂಗು ಇನ್ನೂ ಪ್ರಜ್ವಲ್‌ಗೆ ಕೇಳಿಸಲಿಲ್ಲವೇನೋ ಎನಿಸುತ್ತದೆ. ಅಥವಾ ಕೇಳಿಸಿದ್ದರೂ ನನಗೂ ಕುಮಾರಸ್ವಾಮಿಗೂ ಸಂಬಂಧ ಇಲ್ಲ ಎಂದು ಸುಮ್ಮನೆ ಇರಬಹುದು.

ರಾಜಕೀಯ ಪಂಡಿತರು ಹೇಳುವಂತೆ ಜೂನ್ ತಿಂಗಳ 4ರ ತನಕವೂ ಅಂದರೆ ಲೋಕಸಭಾ ಚುನಾವಣೆ ಫಲಿತಾಂಶ ಬರುವ ತನಕವೂ ಆತ ಭಾರತಕ್ಕೆ ಬರುವ ಸಾಧ್ಯತೆ ಕಡಿಮೆ; ಒಂದು ವೇಳೆ ಚುನಾವಣೆಯಲ್ಲಿ ಗೆದ್ದರೆ ಮಾತ್ರ ಆತ ಬರಬಹುದು, ಒಂದು ವೇಳೆ ಸೋಲಾದರೆ, ಆತ ಭಾರತಕ್ಕೆ ಬರುವುದಿಲ್ಲ ಎಂಬ ಮಾತುಗಳು ಕೇಳಿ ಬರುತ್ತಿವೆ. ಇದೇನೇ ಇರಲಿ, ಪ್ರಜ್ವಲ್ ರೇವಣ್ಣನವರದು ಎನ್ನಲಾಗುತ್ತಿರುವ ಪೆನ್ ಡ್ರೈವ್ ಸುದ್ದಿ ದೇಶ – ವಿದೇಶದಲ್ಲಿ ಸುದ್ದಿಯಾಗಿದ್ದು, ಕರ್ನಾಟಕದ ದುರ್ದೈವದ ಸಂಗತಿ, – ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



19. ಕವಿತಿಲಕ ಸೋಸಲೆ ಅಯ್ಯಶಾಸ್ತ್ರಿಗಳು



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಇಂದಿನ ಹಿರಿಯ ಮತ್ತು ಹಿಂದಿನ ತಲೆಮಾರಿನವರು ಸರಳವೂ, ಸುಂದರವೂ ಆದ 'ಸ್ವಾಮಿ ದೇವನೆ ಲೋಕಪಾವನೆ' ಹಾಡನ್ನು ಕೇಳದೆ ಇರುವುದಿಲ್ಲ. ಶಾಲೆಗಳಲ್ಲಿ ಅಂದಿಗೆ ಇದು ಪ್ರಸಿದ್ಧ ಪ್ರಾರ್ಥನಾಗೀತೆಯಾಗಿತ್ತು. ಬೆಳಗ್ಗೆ ಶಾಲೆಗಳು ಪ್ರಾರಂಭವಾಗುವ ಮುನ್ನ ವಿದ್ಯಾರ್ಥಿಗಳು ಶಿಸ್ತಿನಿಂದ ನಿಂತು ಈ ಪ್ರಾರ್ಥನೆಯನ್ನು ತಪ್ಪದೆ ಹಾಡುತ್ತಿದ್ದರು. ನಾಡಿನಾದ್ಯಂತ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆಯಾಗಿ ಇದು ಖ್ಯಾತಿ ಗಳಿಸಿತ್ತು. ಇದು ಎಷ್ಟು ಪ್ರಸಿದ್ಧಿ ಪಡೆಯಿತೆಂದರೆ ಈ ಗೀತೆಯನ್ನು ಪ್ರಸಿದ್ಧ ಚಲನಚಿತ್ರಗಳೂ ಬಳಸಿಕೊಂಡವು. ಚಿತ್ರಮಂದಿರಗಳಲ್ಲಿ ಸೇರಿದ್ದ ಪ್ರೇಕ್ಷಕರು ತಮ್ಮ ಮೆಚ್ಚಿನ ಈ ಕನ್ನಡ ಪ್ರಾರ್ಥನೆಯನ್ನು ಕೇಳಿ ತಾವೂ ಗುನುಗುವಂತೆ ಮಾಡಿತ್ತು. ಈ ಗೀತೆಯ ರಚನೆಕಾರರು ಕನ್ನಡ ಸಾಹಿತ್ಯ ಮತ್ತು ರಂಗಭೂಮಿಯಲ್ಲಿ ಹೆಸರು ಮಾಡಿದ್ದ ಸೋಸಲೆ ಅಯ್ಯಶಾಸ್ತ್ರಿಗಳು.

ಇವರು ತಿರುಮಕೂಡಲು ನರಸೀಪುರದ ಸೋಸಲೆ ಗ್ರಾಮದಲ್ಲಿ 1854ರ ಮಾರ್ಚ್ 20ರಂದು ಸೋಸಲೆ ಗರಳಪುರಿ ಶಾಸ್ತ್ರಿಗಳು ಮತ್ತು ಸುಬ್ಬಮ್ಮ ಅವರ ಎರಡನೇ ಪುತ್ರರಾಗಿ ಜನಿಸಿದರು. ಇವರದೊಂದು ಸುಸಂಸ್ಕೃತ ಮನೆತನ. ಇವರ ಹಿರಿಯರು ಸೋಸಲೆಗೆ ಬಂದು ನೆಲೆಸಿದ್ದರು. ಅಲ್ಲಿ 'ಅಣ್ಣಯ್ಯ ಶಾಸ್ತ್ರಿ ಅಗ್ರಹಾರ'ವನ್ನು ಕಟ್ಟಿಸಿ ವಾಸವಾಗಿದ್ದರು. ನಂತರ ಸೋಸಲೆ ಅಯ್ಯಶಾಸ್ತ್ರಿಗಳ ತಂದೆ ಸುಮಾರು 1861–62ರಲ್ಲಿ ಮೈಸೂರಿಗೆ ಬಂದು ಹಳೇ ಅಗ್ರಹಾರದ ಕತ್ವಾಡಿಪುರ ಅಗ್ರಹಾರದಲ್ಲಿ ವೀಣೆ ವೆಂಕಟಸುಬ್ಬಯ್ಯ ಅವರ ವಠಾರದಲ್ಲಿ ವಾಸಿಸಿದರು. ಸುಮಾರು 1874ರಲ್ಲಿ ಅದೇ ಕತ್ವಾಡಿಪುರ ಅಗ್ರಹಾರದಲ್ಲಿ ಸಾಲು ಮನೆಗಳ ಜೊತೆ ತಮ್ಮ ಮನೆಯನ್ನೂ ಕಟ್ಟಿಕೊಂಡು ವಾಸ ಮಾಡಲಾರಂಭಿಸಿದರು. ಸೋಸಲೆ ಅಯ್ಯಶಾಸ್ತ್ರಿಗಳಿಗೆ ಮೊದಲಿಗೆ ವೆಂಕಟಸುಬ್ಬುಶರ್ಮ ಎಂದು ಹೆಸರಿಡಲಾಗಿತ್ತು. 'ಅಯ್ಯಾ' ಎಂದು ಇವರನ್ನು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು. ಆ ಹೆಸರೇ ಉಳಿಯಿತು. ಇವರ ಪ್ರಾರಂಭಿಕ ಶಿಕ್ಷಣ ಮನೆಯಲ್ಲಿಯೇ ನಡೆಯಿತು. ನಂತರ ಸೋಸಲೆಯಿಂದ ಮೈಸೂರಿಗೆ ಬಂದು ಖ್ಯಾತ ವಿದ್ವಾಂಸರೂ, ಸಂಸ್ಕೃತ ಪಂಡಿತೋತ್ತಮರೂ ಆದ ಪೆರಿಯಸ್ವಾಮಿ ತಿರುಮಲಾಚಾರ್ಯರಲ್ಲಿ ವ್ಯಾಕರಣ, ತರ್ಕ, ಅಲಂಕಾರ ಇತ್ಯಾದಿ ಶಾಸ್ತ್ರಗಳ ಅಭ್ಯಾಸ ಮಾಡಿದರು. ಸಾಹಿತ್ಯದ ಜೊತೆಗೆ, ಚಿತ್ರಕಲೆ ಮತ್ತು ಸಂಗೀತದಲ್ಲಿ ಕೂಡ ಆಸಕ್ತಿ ಬೆಳೆಸಿಕೊಂಡರು. 14 ವರ್ಷ ವಯಸ್ಸಾಗಿದ್ದಾಗ ಚಾಮರಾಜನಗರದ ಶ್ರೀಕಂಠಶಾಸ್ತ್ರಿ ಅವರ ಪುತ್ರಿ ಲಕ್ಷ್ಮೀದೇವಮ್ಮ ಅವರೊಂದಿಗೆ ಇವರ ವಿವಾಹ ಜರುಗಿತು. ಶ್ರೀಕಂಠಶಾಸ್ತ್ರಿಗಳು ನಂತರ ಅರಮನೆಯ ಧರ್ಮಾಧಿಕಾರಿಗಳಾದರು.

ಗುರುಗಳಾಗಿದ್ದ ಪೆರಿಯಸ್ವಾಮಿ ತಿರುಮಲಾಚಾರ್ಯರು ಸ್ಥಾಪಿಸಿದ್ದ ಸದ್ವಿದ್ಯಾ ಪಾಠಶಾಲೆಯಲ್ಲಿ ಸೋಸಲೆ ಅಯ್ಯಶಾಸ್ತ್ರಿಗಳು ಉಪಾಧ್ಯಾಯ ವೃತ್ತಿ ಪ್ರಾರಂಭಿಸಿದರು. ನಂತರ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ಪ್ರಾಚೀನ ಸಂಸ್ಕೃತ ಗ್ರಂಥಗಳ ಪರಿಶೋಧನೆಯ ಕಾರ್ಯವನ್ನು ಕೈಗೊಂಡರು. 1889ರಿಂದ ಹೊಸದಾಗಿ ಪ್ರಾರಂಭವಾಗಿದ್ದ ಭಾಷೋಜ್ಜೀವಿನಿ ಸಂಸ್ಥೆಯಲ್ಲಿ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದರು. ಇವರ ವಿದ್ವತ್ತನ್ನು ಗುರುತಿಸಿದ ಮಹಾರಾಜರು ಇವರಿಗೆ ಅರಮನೆಯಲ್ಲಿ ರಾಜಗುರುಗಳ ಸ್ಥಾನ ನೀಡಿ ಆಸ್ಥಾನ ಮಹಾವಿದ್ವಾಂಸರನ್ನಾಗಿ ನೇಮಿಸಿಕೊಂಡು ಗೌರವಿಸಿದ್ದರು. ಈ ಸ್ಥಾನವನ್ನು ಅವರು 1901ರವರೆಗೆ ನಿರ್ವಹಿಸಿದರು.

ಸೋಸಲೆ ಅಯ್ಯಶಾಸ್ತ್ರಿಗಳು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಅವರು ಬರೆದಿರುವ ನಾಟಕಗಳಲ್ಲಿ ಕರ್ಣಾಟಕ ನಳಚರಿತ್ರ ನಾಟಕಂ, ಕರ್ಣಾಟಕ ವಿಕ್ರಮೋರ್ವಶೀಯ, ಕರ್ಣಾಟಕ ಪ್ರತಾಪ ಸಿಂಹ ಚರಿತ್ರ ನಾಟಕಂ, ಕರ್ಣಾಟಕ ರಾಮಾಯಣ ನಾಟಕಂ, ಹರಿಶ್ಚಂದ್ರ ನಾಟಕಂ ಮುಂತಾದವು ಸೇರಿವೆ. ಅವರ ಷಟ್ಪದಿ ಕಾವ್ಯಗಳೆಂದರೆ ಶೇಷ ರಾಮಾಯಣಂ, ಉತ್ತರ ರಾಮಾಯಣದ ರಾಮಾಶ್ವಮೇಧ, ದಮಯಂತಿ ಚರಿತ್ರೆ ಇತ್ಯಾದಿ. ಅವರ ಚಂಪೂ ಕಾವ್ಯಗಳ ಪೈಕಿ ರಾಜಭಕ್ತಿಲಹರಿ, ಯಕ್ಷಪ್ರಶ್ನೆ ಮತ್ತು ಮಹಿಶೂರ ಮಹಾರಾಜ ಚರಿತ್ರಂ ಸೇರಿವೆ. ಸಂಸ್ಕೃತದಲ್ಲಿನ ಚಂಪೂಕಾವ್ಯಗಳೆಂದರೆ ಚಾಮರಾಜೇಂದ್ರ ಪಟ್ಟಾಭಿಷೇಕಂ ಮತ್ತು ಕೃಷ್ಣಾಂಬಪರಿಣಯಂ. ಇವಲ್ಲದೇ ಶಾಸ್ತ್ರಿಗಳು ಶ್ರೀಮನ್ಮಹಾರಾಜಾಶೀರ್ವಾದ ಪಂಚರತ್ನಂ ಮತ್ತು ಶ್ರೀಮದ್ಯುವರಾಜಾಶೀರ್ವಾದ ಪಂಚರತ್ನಂ ಶ್ಲೋಕಗಳನ್ನು ಸಂಸ್ಕೃತದಲ್ಲಿ ರಚಿಸಿದ್ದರು. ಅವರ ಗ್ರಂಥ ಪರಿಷ್ಕರಣ ಕಾರ್ಯದಲ್ಲಿ ಕರ್ಣಾಟಕ ಶಬ್ದಾನುಸಾರ, ಕರ್ಣಾಟಕ ಕಾದಂಬರೀ, ನಾಗರಸನ ಕರ್ಣಾಟಕ ಭಗವದ್ಗೀತೆ, ಶ್ರೀಕೃಷ್ಣರಾಯ ವಾಣೀವಿಲಾಸ ವಚನಭಾರತ, ಚಂಪೂರಾಮಾಯಣಂ (ಯುದ್ಧಕಾಂಡ) ಹಾಗೂ ಶ್ರೀಕೃಷ್ಣ ಭೂಪಾಲೀಯಂ (ಅಲಂಕಾರ ಗ್ರಂಥ)ಗಳು ಸೇರಿವೆ. ಹೀಗೆ ಹಲವಾರು ಕೃತಿಗಳನ್ನು ರಚಿಸಿ ಮಹತ್ವದ ಕಾಣಿಕೆ ನೀಡಿದ್ದಾರೆ, ಶಾಸ್ತ್ರಿಗಳು.

ಇವರ ವಿದ್ವತ್ತಿನ ಒಂದು ಸಾಮರ್ಥ್ಯವೆಂದರೆ ಉತ್ತರ ಭಾರತದ ಜ್ಞಾನ ಸುಂದರಿ ಎಂಬ ವಿದುಷಿಯನ್ನು ತಮ್ಮ ಕವಿತಾ ಸಾಮರ್ಥ್ಯದಿಂದ ಸೋಲಿಸಿ, ಮಹಾರಾಜರ ಮೆಚ್ಚುಗೆಗೆ ಪಾತ್ರರಾಗಿದ್ದರು. 1905ರಲ್ಲಿ ಮಹಾವಿದ್ವಾನ್ ಮತ್ತು 1912ರಲ್ಲಿ ಕವಿತಿಲಕ ಪ್ರಶಸ್ತಿಗಳನ್ನು ಮಹಾರಾಜರಿಂದ ಗಳಿಸಿದರು. ಇವಲ್ಲದೆ ಇನ್ನೂ ಹಲವು ಪ್ರಶಸ್ತಿಗಳನ್ನು ಪಡೆದಿದ್ದರು.

1936ರಲ್ಲಿ ಪ್ರಕಟವಾದ 'ಮಹಿಶೂರ ಮಹಾರಾಜ ಚರಿತ್ರಂ' ಮಹಾಕಾವ್ಯ. "ಆದಿ ಯದುರಾಯರು ಮೈಸೂರು ಸಂಸ್ಥಾನಕ್ಕೆ ಬಂದದು ಮೊದಲುಗೊಂಡು ಮುಮ್ಮಡಿ ಕೃಷ್ಣರಾಜ ಒಡೆಯರು ಪುತ್ರ ಸ್ವೀಕಾರಮಾಡಿಕೊಂಡವರೆಗೆ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರದಲ್ಲಿರುವಂತೆಯೂ ಅಲ್ಲಿಂದ ಮುಂದೆ ನಾನು ಪ್ರತ್ಯಕ್ಷವಾಗಿ ನೋಡಿ ತಿಳಿದಿರುವಂತೆಯೂ ಅವರಿವರ ಮುಖದಿಂದ ಕೇಳಿ ತಿಳಿದಿರುವಂತೆಯೂ ಈ ಮಹಾರಾಜರ ಚರಿತ್ರೆಯನ್ನು ಕರ್ಣಾಟ ಚಂಪೂಗ್ರಂಥವಾಗಿ ರಚಿಸಿರುವೆನು" ಎನ್ನುತ್ತಾರೆ.

ಕೃಷ್ಣಭೂಪಲನು, ಅಂದರೆ ನಾಲ್ವಡಿ ಕೃಷ್ಣರಾಜರು ಕೃತಿಯ ಲಾಲಿತ್ಯವನ್ನು, ಅಲಂಕಾರವನ್ನು ನೋಡಿ ತಲೆದೂಗಿ ತಮ್ಮ ಕವಿತಾಶಕ್ತಿಯನ್ನು ಮೆಚ್ಚಿ 'ಕವಿತಿಲಕ' ಎಂಬ ಬಿರುದನ್ನು 'ನವಮಣಿಕಟಕದೊಡೆ' ದಯಪಾಲಿಸಿದನು ಎನ್ನುತ್ತಾರೆ ಈ ಕಾವ್ಯದ ಕರ್ತೃ ಅಯ್ಯಶಾಸ್ತ್ರಿಗಳು.

ಶಾಸ್ತ್ರಿಗಳು ನಾಟಕಗಳಲ್ಲಿಯೂ ಅಭಿರುಚಿ ಪಡೆದು ಕೆಲವು ನಾಟಕ ಕೃತಿಗಳನ್ನೂ ರಚನೆ ಮಾಡಿದ್ದರಲ್ಲದೆ ಮೈಸೂರಿನಲ್ಲಿ ನಾಟಕ ಸಂಘವೊಂದನ್ನು ಕಟ್ಟಿ ಹಲವಾರು ವರ್ಷಗಳ ಕಾಲ ಅದರ ವ್ಯವಸ್ಥಾಪಕರಾಗಿ ದುಡಿದು ರಂಗಭೂಮಿಯ ಕಲೆಯನ್ನು ಪುನರುಜ್ಜೀವನಗೊಳಿಸಿದ್ದರು. ಇವರ ಪ್ರಸಿದ್ಧ 'ಸ್ವಾಮಿದೇವನೆ ಲೋಕಪಾಲನೆ' ಗೀತೆಯನ್ನು ಬಿ.ಆರ್.ಪಂತಲು ಅವರು 1957ರಲ್ಲಿ ತಮ್ಮ 'ಸ್ಕೂಲ್ ಮಾಸ್ಟರ್' ಕನ್ನಡ ಚಲನಚಿತ್ರದಲ್ಲಿ ಬಳಸಿಕೊಂಡಿದ್ದರು. ಈ ಶಾಲಾ ಪ್ರಾರ್ಥನೆಯನ್ನು ಟಿ.ಜಿ.ಲಿಂಗಪ್ಪ, ಎ.ಪಿ. ಕೋಮಲಾ, ಕೆ.ರಾಣಿ ಹಿನ್ನೆಲೆಯಲ್ಲಿ ಹಾಡಿದ್ದಾರೆ.

ತಮ್ಮ ಸಾಧನೆಗಳ ಮೂಲಕ ಅಜರಾಮರರಾಗಿದ್ದ ಕನ್ನಡ ನಾಡಿನ ಘನತೆವೆತ್ತ ವಿದ್ವಾಂಸ ಸೋಸಲೆ ಅಯ್ಯಶಾಸ್ತ್ರಿಗಳು 80 ವರ್ಷಗಳ ಕಾಲ ಬದುಕಿದ್ದು ಮೇ 17, 1934ರಲ್ಲಿ ನಿಧನರಾದರು. ಇವರ ಪುತ್ರ ಸೋಸಲೆ ಗರಳಪುರಿ ಶಾಸ್ತ್ರಿಗಳು ಅಥವಾ ಎಸ್.ಜಿ.ಶಾಸ್ತ್ರಿಗಳೆಂದು ಅಂತರರಾಷ್ಟ್ರೀಯ ಖ್ಯಾತಿಯ ಮೈಸೂರು ಸ್ಯಾಂಡಲ್ ಸೋಪಿನ ಜನಕರಾಗಿ ಪ್ರಸಿದ್ಧಿ ಗಳಿಸಿದ್ದರು. ಅವರೂ ಕೆಲವು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ಮೈಸೂರಿನಲ್ಲಿ ಅಪಾರ ಅಭಿಮಾನಿಗಳ ಸಮಕ್ಷಮದಲ್ಲಿ ಗೋಲ್ಡನ್‌ಸ್ಟಾರ್ ಗಣೇಶ್ ಅಭಿಯನದ

'ಕೃಷ್ಣಂ ಪ್ರಣಯ ಸಖಿ' ಚಿತ್ರದ ಮೊದಲ ಹಾಡು ಬಿಡುಗಡೆ



ಮೈಸೂರಿನ ಮಾಲ್ ಆಫ್ ಮೈಸೂರ್‌ನಲ್ಲಿ ಗೋಲ್ಡನ್‌ಸ್ಟಾರ್ ಗಣೇಶ್ ಅಭಿಯನದ 'ಕೃಷ್ಣಂ ಪ್ರಣಯ ಸಖಿ' ಚಲನಚಿತ್ರದ 'ಮೈ ಮ್ಯಾರೇಜ್ ಈಸ್ ಫಿಕ್ಸ್ ಅ ಯಾಂ ರೆಡಿ ಟು ಟೇಕ್ ರಿಸ್ಕ್' ಹಾಡನ್ನು ಬಿಡುಗಡೆ ಮಾಡಲಾಯಿತು. ನಿರ್ದೇಶಕ ಶ್ರೀನಿವಾಸ ರಾಜು, ನಿರ್ಮಾಪಕ ಪ್ರಶಾಂತ್ ಜಿ.ರುದ್ರಪ್ಪ, ಗಾಯಕ ಚಂದನ್ ಶೆಟ್ಟಿ, ನಟಿಯರಾದ ವಿನೂತ, ಚಂದನ ಗೌಡ, ಚಂದನ ಹಾಗೂ ಸುಶ್ಮಿತಾ ಉಪಸ್ಥಿತರಿದ್ದರು.

ಮೈಸೂರು, ಮೇ 25(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕನ್ನಡ ಚಿತ್ರರಂಗದ ಖ್ಯಾತ ನಟ ಗೋಲ್ಡನ್‌ಸ್ಟಾರ್ ಗಣೇಶ್ ಅಭಿಯನದ 'ಕೃಷ್ಣಂ ಪ್ರಣಯ ಸಖಿ' ಚಲನಚಿತ್ರದ 'ಮೈ ಮ್ಯಾರೇಜ್ ಈಸ್ ಫಿಕ್ಸ್ ಅ ಯಾಂ ರೆಡಿ ಟು ಟೇಕ್ ರಿಸ್ಕ್' ಹಾಡನ್ನು ಬಿಡುಗಡೆ ಮಾಡಲಾಯಿತು.

ಮಾಲ್ ಆಫ್ ಮೈಸೂರ್‌ನಲ್ಲಿ ಈಗಲ್ ಮೀಡಿಯಾ ಕ್ರಿಯೇಷನ್ ಸಹಯೋಗದೊಂದಿಗೆ ಶನಿವಾರ ಏರ್ಪಡಿಸಿದ್ದ ಅದ್ದೂರಿ ವೇದಿಕೆಯಲ್ಲಿ ನಟ ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯ, ಶ್ರೀನಿವಾಸ ರಾಜು ನಿರ್ದೇಶನ, ಪ್ರಶಾಂತ್ ಜಿ.ರುದ್ರಪ್ಪ ನಿರ್ಮಾಣ, ತ್ರಿಶೂಲ್ ಎಂಟರ್‌ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ 8 ಮಂದಿ ಹೀರೋಯಿನ್‌ಗಳಿರುವ ಕುಟುಂಬ ಮನರಂಜನೆ, ಸಸ್ಪೆನ್ಸ್ ಅಂಡ್ ಥ್ರಿಲ್ಲರ್ ಕಥೆಯುಳ್ಳ 'ಕೃಷ್ಣಂ ಪ್ರಣಯ ಸಖಿ' ಚಲನಚಿತ್ರದ ಮೊದಲ ಹಾಡನ್ನು ಕನ್ನಡದ ಪಾಪ್ ಸಿಂಗರ್ ಚಂದನ್ ಶೆಟ್ಟಿ ಹಾಡುವ ಮೂಲಕ ಬಿಡುಗಡೆ ಮಾಡಲಾಯಿತು.

ಅರ್ಜುನ್ ಜನ್ಯ ಸಂಗೀತ ನಿರ್ದೇಶನದಲ್ಲಿ ಮೂಡಿ ಬಂದಿರುವ 'ಮೈ ಮ್ಯಾರೇಜ್ ಈಸ್ ಫಿಕ್ಸ್ ಅ ಯಾಂ ರೆಡಿ ಟು ಟೇಕ್ ರಿಸ್ಕ್' ಹಾಡಿಗೆ ಧ್ವನಿ ನೀಡಿರುವ ಗಾಯಕ ಚಂದನ್ ಶೆಟ್ಟಿ, ನೃತ್ಯ ಕಲಾವಿದರೊಂದಿಗೆ ಹೆಜ್ಜೆ ಹಾಕುತ್ತಾ ರಿದಂ ಸಂಗೀತದೊಂದಿಗೆ ಹಾಡುವ ಮೂಲಕ ಚಿತ್ರತಂಡದ ಸಮ್ಮುಖದಲ್ಲಿ ಮೊದಲ ಹಾಡಿನ ತುಣುಕನ್ನು ರಿಲೀಸ್ ಮಾಡಿದರು.

ಇದಕ್ಕೂ ಮುನ್ನ ವರ್ಣರಂಜಿತ ವೇದಿಕೆಗೆ ಆಗಮಿಸಿದ ನಟ ಗೋಲ್ಡನ್ ಸ್ಟಾರ್ ಗಣೇಶ್, ಕಿಕ್ಕಿರಿದು ತುಂಬಿದ್ದ ಅಭಿಮಾಣಿಗಳತ್ತ ಕೈಬಿಸಿ ನನ್ನ ಪ್ರೇಕ್ಷಕರೇ ನನಗೆ ರಾಜ, ರಾಣಿಯರು ಎಂದೇಳುವ ಮೂಲಕ ಗಮನ ಸೆಳೆದರು. ತಮ್ಮದೇ ಶೈಲಿಯಲ್ಲಿ ಮೂರು ಬಾರಿ ನಮಸ್ಕಾರ ಎನ್ನುತ್ತಾ ಮಾತು ಆರಂಭಿಸಿದ ನಟ ಗಣೇಶ್, ಮೈಸೂರಿನ ಪರಂಪರೆ, ಪಾರಂಪರಿಕತೆ, ಮಹಾರಾಜರೆಂದರೆ ಎಲ್ಲರಿಗೂ ಇಷ್ಟ. ನನಗೆ ನನ್ನ ಪ್ರೇಕ್ಷಕರೇ ಮಹಾರಾಜ, ಮಹಾರಾಣಿ, ಯುವರಾಜ, ಯುವರಾಣಿಯರು. ಮೈಸೂರಿಗೆ ಬರುವುದೇ ವಿಶೇಷ. ನನ್ನ ಯಾವುದೇ ಸಿನಿಮಾವಾದರೂ ಒಂದಷ್ಟು ಶೂಟಿಂಗ್ ಮೈಸೂರಿನಲ್ಲಿ ಇರಲೇಬೇಕು ಎನ್ನುವ ಮೂಲಕ ಮೈಸೂರು ಮೇಲಿನ ಅಭಿಮಾನ ಮೆರೆದರು.

ರಿಸ್ಕ್ ಎಂದರೆ ಜವಾಬ್ದಾರಿ: ನಿರೂಪಕಿ ಅನುಶ್ರೀ ಹಾಡಿನ ಸಾಲನ್ನು ಹೇಳುತ್ತಾ ಈ ವಯಸ್ಸಿನಲ್ಲಿ ರಿಸ್ಕ್ ತೆಗೆದುಕೊಳ್ಳಲು ರೆಡಿ ಇದ್ದೀರಾ? ಎಂದಿದ್ದಕ್ಕೆ ರಿಸ್ಕ್ ತೆಗೆದುಕೊಂಡು ಅಭ್ಯಾಸವಾದ ಮೇಲೆ ಯಾವುದೂ ರಿಸ್ಕ್ ಅಲ್ಲ. ರಿಸ್ಕ್ ಎಂದರೆ ಜವಾಬ್ದಾರಿ ಎಂದರ್ಥ. ಜೀವನದಲ್ಲಿ ರಿಸ್ಕ್ ತೆಗೆದುಕೊಳ್ಳಬೇಕು. 'ಮೈ ಮ್ಯಾರೇಜ್ ಈಸ್ ಫಿಕ್ಸ್ ಅ ಯಾಂ ರೆಡಿ ಟು ಟೇಕ್ ರಿಸ್ಕ್' ಎಂದರೆ ಜೀವನದಲ್ಲಿ ಜವಾಬ್ದಾರಿ ತೆಗೆದುಕೊಳ್ಳಲು ರೆಡಿ ಇದ್ದಾನೆ ಎಂದರ್ಥ. ರಿಸ್ಕ್ ಎಂದರೆ ಜವಾಬ್ದಾರಿ ಎಂದೇಳುವ ಮೂಲಕ ತಮ್ಮ ಚಿತ್ರದ ಕಥೆಯಲ್ಲಿನ ಸಸ್ಪೆನ್ಸ್ ಸುಳಿವು ನೀಡಿದರು. ಆನಂದ್ ಆಡಿಯೋ ಸಂಸ್ಥೆ 25 ವರ್ಷದ ಸಂಭ್ರಮದಲ್ಲಿದೆ. ಕಳೆದ 15–16 ವರ್ಷದಿಂದ ಆನಂದ್ ಆಡಿಯೋ ಜೊತೆ ಕೆಲಸ ಮಾಡಿದ್ದೇನೆ. ಮುಂದೆಯೂ ಆನಂದ್ ಆಡಿಯೋ ಯಶಸ್ವಿನತ್ತಾ ಸಾಗುತ್ತಿರಲಿ ಎಂದು ಆಶಿಸಿದರಲ್ಲದೆ ಮೈಸೂರಿನ ಅಭಿಮಾನಿಗಳು, ಸ್ನೇಹಿತರಿಗೆ ಧನ್ಯವಾದ ತಿಳಿಸಿದರು.

ಫ್ಯಾಮಿಲಿ ಎಂಟರ್‌ಟೈನ್ಮೆಂಟ್ ಸಿನಿಮಾ: ನಿರ್ಮಾಪಕ ಪ್ರಶಾಂತ್ ಜಿ.ರುದ್ರಪ್ಪ ಮಾತನಾಡಿ, ಕನ್ನಡ ಚಿತ್ರರಂಗದಲ್ಲಿ ಕಳೆದ ಮೂರ್‍ನಾಲ್ಕು ವರ್ಷದಿಂದ ಫ್ಯಾಮಿಲಿ ಎಂಟರ್‌ಟೈನ್ಮೆಂಟ್ ಸಿನಿಮಾಗಳು ಬಂದಿಲ್ಲ. ಆದ್ದರಿಂದ 'ಕೃಷ್ಣಂ ಪ್ರಣಯ ಸಖಿ' ಫ್ಯಾಮಿಲಿ ಎಂಟರ್‌ಟೈನ್ಮೆಂಟ್ ಸಿನಿಮಾ ಮಾಡಿದ್ದೇವೆ. ಹೊಸ ಕತೆಯನ್ನೊಳಗೊಂಡ ಚಲನಚಿತ್ರ ಇದಾಗಿದ್ದು, ಪ್ರೋತ್ಸಾಹಿಸುವಂತೆ ಕೋರಿದರು.

6 ಹಾಡುಗಳು, 62 ಮಂದಿ ಕಲಾವಿದರು: ನಿರ್ದೇಶಕ ಶ್ರೀನಿವಾಸ ರಾಜು ಮಾತನಾಡಿ, ಗೋಲ್ಡನ್‌ಸ್ಟಾರ್ ಗಣೇಶ್ ಅವರಿಗೆ ಮಾತ್ರವೇ ಒಪ್ಪುವ ಕತೆ ಇದಾಗಿದೆ. ಸಂಪೂರ್ಣ ಕುಟುಂಬ ಮನರಂಜನೆ ಸಿನಿಮಾ ಇದಾಗಿದ್ದು, ಕನ್ನಡ ಚಿತ್ರರಂಗದ ಹಿರಿಯ–ಕಿರಿಯ ನಟ–ನಟಿಯರು ಸೇರಿ 62 ಮಂದಿ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಸಿನಿಮಾದಲ್ಲಿ 6 ಹಾಡುಗಳಿದ್ದು, ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಅಚ್ಚುಕಟ್ಟಾಗಿದೆ. ಎಲ್ಲಾ ಹಾಡುಗಳು ಸೊಗಸಾಗಿದ್ದು, ಹಿಟ್ ಆಗಲಿವೆ. ಗಣೇಶ್ ಅವರ ಅಭಿನಯಕ್ಕೆ ಈ ಸಿನಿಮಾ ಕಡಿಮೆಯೇ ಎನ್ನುವ ಮೂಲಕ ಅವರೊಂದಿಗೆ ಮತ್ತೊಂದು ಸಿನಿಮಾ ಮಾಡುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಇದೇ ವೇಳೆ ಮಾಲ್ ಆಫ್ ಮೈಸೂರ್ ಹಾಗೂ ಅಭಿಮಾನಿಗಳಿಂದ 'ಕೃಷ್ಣಂ ಪ್ರಣಯ ಸಖಿ' ಚಿತ್ರತಂಡವನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ನೂರಾರು ಅಭಿಮಾನಿಗಳು ನೆಚ್ಚಿನ ನಟ ಗಣೇಶ್ ಜೊತೆಗೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು. ಈಗಲ್ ಮೀಡಿಯಾ ಕ್ರಿಯೇಷನ್‌ನ ನವರಸನ್ ಮತ್ತಿತರರಿದ್ದರು.

ಥಿಯೇಟರ್‌ನಲ್ಲೇ ಸಿನಿಮಾ ನೋಡಿ...!

ವರ್ಣರಂಜಿತ ಕಾರ್ಯಕ್ರಮದಲ್ಲಿ ನೋಡುಗರ ಮನ ಸೆಳೆಯುತ್ತಿದ್ದ 'ಕೃಷ್ಣಂ ಪ್ರಣಯ ಸಖಿ' ಚಲನಚಿತ್ರದ ನಟಿಯರಾದ ವಿನೂತ, ಚಂದನ ಗೌಡ, ಚಂದನ ಹಾಗೂ ಸುಶ್ಮಿತಾ ಅವಕಾಶ ನೀಡಿದ ನಿರ್ದೇಶಕರು, ನಿರ್ಮಾಪಕರು ಹಾಗೂ ನಟ ಗಣೇಶ್‌ಗೆ ಧನ್ಯವಾದ ತಿಳಿಸುತ್ತಲೇ ಕನ್ನಡ ಚಲನಚಿತ್ರಗಳನ್ನು ಕನ್ನಡ ಅಭಿಮಾನಿಗಳು ಥಿಯೇಟರ್‌ನಲ್ಲಿಯೇ ವೀಕ್ಷಣೆ ಮಾಡಿ ಎಂದು ಹೇಳುತ್ತಾ ಚಿತ್ರದಲ್ಲಿ ಅಭಿನಯಿಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಇದೊಂದು ವಿಶೇಷ ಸಿನಿಮಾ...

'ಕೃಷ್ಣಂ ಪ್ರಣಯ ಸಖಿ' ವಿಶೇಷ ಸಿನಿಮಾವಾಗಿದ್ದು, ನಿರ್ದೇಶಕರಿಗೆ, ನಿರ್ಮಾಪಕರಿಗೆ ಧನ್ಯವಾದ ತಿಳಿಸುತ್ತೇನೆ. ನಿರ್ದೇಶಕರು ಕಥೆ ಹೇಳುವಾಗ ಅವರ ಈ ಹಿಂದಿನ ಚಿತ್ರ ದಂಡುಪಾಳ್ಯದ ರೀತಿಯಲ್ಲಿ ನನ್ನಿಂದಲೂ ಸಿನಿಮಾ ಮಾಡಿಸುತ್ತಾರೆ. ಬೇರೆ ರೀತಿಯೇ ನನ್ನನ್ನು ತೋರಿಸಬೇಕು ಎಂದುಕೊಂಡಿರಬಹುದು ಎಂದುಕೊಂಡಿದ್ದೇ. ಆದರೆ ಆರಂಭದಲ್ಲೇ 8 ಮಂದಿ ನಾಯಕಿಯರು ಮದುವೆಯ ವಧು ಅಲಂಕಾರದ್ದು, ತಾವು ವರನಾಗಿ ಬೈಕ್‌ನಲ್ಲಿ ಬರಬೇಕು ಎನ್ನುತ್ತಿದ್ದಂತೆ ನಾನು ಇದುವರೆಗೂ ಮಾಡಿರುವ ಮನರಂಜನೆ ಸಿನಿಮಾಗಳಂತೆಯೇ ಎನಿಸಿತು. ಆದರೆ ಅಂತಿಮ ಹಂತದಲ್ಲಿ ಸಸ್ಪೆನ್ಸ್ ಅಂಡ್ ಥ್ರಿಲ್ಲರ್ ಆಗಿರಲಿದ್ದು, ವಿಶೇಷ ಕಥೆಯನ್ನು ಹೊಂದಿದೆ. ನನ್ನ ಅಭಿಮಾನಿಗಳಿಗೆ ಮನರಂಜನೆ ನೀಡಲಿದೆ. ಹಾಗೆಯೇ ಗಾಯಕ ಚಂದನ್ ಶೆಟ್ಟಿ ಅದ್ಭುತವಾಗಿ ಹಾಡಿದ್ದಾರೆ.

– ಗೋಲ್ಡನ್‌ಸ್ಟಾರ್ ಗಣೇಶ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಭಾನುವಾರ 26 ಮೇ 2024

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ

ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಲು ಪುಟ್ಟಣ್ಣ ಮನವಿ



ಮರಿತಿಬ್ಬೇಗೌಡ

ಮೈಸೂರು, ಮೇ 25(ಜಿಎ)–ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸುತ್ತಿರುವ ಮರಿತಿಬ್ಬೇಗೌಡರು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ಆದ್ದರಿಂದ ಈ ಬಾರಿಯ ಚುನಾವಣೆಯಲ್ಲಿಯೂ ಶಿಕ್ಷಕರು ಮೊದಲ ಪ್ರಾಶಸ್ತ್ಯ ಮತ ನೀಡುವ ಮೂಲಕ ಅವರನ್ನು ಬೆಂಬಲಿಸಿ ಎಂದು ಎಂಎಲ್‌ಸಿ ಪುಟ್ಟಣ್ಣ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆಯಲ್ಲಿ ಐದನೇ ಬಾರಿ ಕಾಂಗ್ರೆಸ್‌ನಿಂದ ಮರಿತಿಬ್ಬೇಗೌಡರು ಸ್ಪರ್ಧಿಸುತ್ತಿದ್ದು, ಅವರು ಮತ್ತು ನಾನು ಒಟ್ಟುಗೂಡಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪರ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ ಎಂದರು.

ಶಿಕ್ಷಕರ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆ ಇದ್ದು, ಎನ್‌ಪಿಎಸ್ ಜಾರಿಗೆ ಬಂದಿದೆ. ಇದರಿಂದ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವವರಿಗೆ ಪಿಂಚಣಿ ಸಿಗುತ್ತಿಲ್ಲ. 130ಕ್ಕೂ ಅಧಿಕ ದಿನ ಹೋರಾಟ ನಡೆಸಿದರೂ ಯಾವುದೇ ಪ್ರತಿಫಲ ಸಿಗಲಿಲ್ಲ. ಬಿಜೆಪಿ ಸರ್ಕಾರ ಅವರ ಕಷ್ಟದ ಬಗ್ಗೆ ಕ್ರಮವಹಿಸಲಿಲ್ಲ. ಆತ್ಮಹತ್ಯೆಗೆ ಪ್ರಯತ್ನಪಟ್ಟು ಕೆಲವರು ಪ್ರಾಣ ಕಳೆದುಕೊಂಡಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ಕಾಂಗ್ರೆಸ್ ಸರ್ಕಾರದ ಗಮನಕ್ಕೆ ತಂದ ತಕ್ಷಣ ವಿಶೇಷ ಸಮಿತಿ ರಚಿಸಿ ವರದಿ ಸಿದ್ಧಪಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಶಿಕ್ಷಕರ ಸಮಸ್ಯೆಗಳ ಪರ ಶ್ರಮಿಸಲು ಮರಿತಿಬ್ಬೇಗೌಡರಿಗೆ ಮತ ನೀಡುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ನಿವೃತ್ತ ಪ್ರೊ.ಶಂಕರೇಗೌಡ, ಪ್ರೊ.ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಕರ ಸಮಸ್ಯೆಗೆ ಸ್ಪಂದಿಸುವ ಭರವಸೆ

ಮೈಸೂರು, ಮೇ 25(ಜಿಎ)–ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ತಾವು ಪಕ್ಷೇತರರಾಗಿ ಸ್ಪರ್ಧಿಸಿದ್ದು, ಮತದಾರರು ತಮ್ಮನ್ನು ಆಯ್ಕೆ ಮಾಡಿದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವುದಾಗಿ ಅಭ್ಯರ್ಥಿ ನಾಗಮಲ್ಲೇಶ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲಾ ಕಾಲೇಜು, ಪದವಿ ಕಾಲೇಜು, ವಿವಿಗಳಲ್ಲಿ ಖಾಲಿ ಇರುವ ಹುದ್ದೆ ಭರ್ತಿ ಮಾಡಲು ಒತ್ತಡ ಹೇರುವುದು, ಶಿಕ್ಷಕರಿಗೆ ಕಾಲಕಾಲಕ್ಕೆ ನೀಡಬೇಕಾದ ಬಡ್ತಿ, ಕಾಲಮಿತಿ ಬಡ್ತಿ ಸರಿಪಡಿಸಲು ಕ್ರಮ ವಹಿಸುವುದು, ಶಾಲಾ ಕಾಲೇಜುಗಳಿಗೆ ಸುಸಜ್ಜಿತ ಕಟ್ಟಡ ಹಾಗೂ ಮೂಲ ಸೌಲಭ್ಯ ಒದಗಿಸಲು ಕ್ರಮವಹಿಸುವುದೇ ಮೊದಲಾದ ಬೇಡಿಕೆ ಈಡೇರಿಕೆಗೆ ಶ್ರಮಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಚನ್ನಕೇಶವಮೂರ್ತಿ, ಎಂ.ಮಲ್ಲಿಕಾರ್ಜುನ್, ಸಿದ್ದಯ್ಯ, ಎಂ.ಜೆ. ಮಂಜುನಾಥ್, ಲಿಂಗರಾಜು ಇದ್ದರು.

ವಿಧಾನಪರಿಷತ್ ಚುನಾವಣೆಗೆ ಕಾಂಗ್ರೆಸ್‌ನಲ್ಲಿ ತೀವ್ರಗೊಂಡ ಲಾಬಿ

- ಎಸ್‌ಸಿ, ಎಸ್‌ಟಿ, ಕ್ರಿಶ್ಚಿಯನ್, ಮಹಿಳೆ, ಹಿಂದುಳಿದ ವರ್ಗಕ್ಕೆ ಮನ್ನಣೆ
- ಆಯ್ಕೆಯ ರಹಸ್ಯ ಬಹಿರಂಗಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಮೈಸೂರು, ಮೇ25(ಬಿಎಲ್‌ಯು)–ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಸಂಬಂಧ ತಾವು ಅನುಸರಿಸುವ ಮಾನದಂಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕೊನೆಗೂ ಬಹಿರಂಗಪಡಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಈಗಾಗಲೇ ತೀವ್ರ ಲಾಬಿ ಆರಂಭವಾಗಿದ್ದು, ಸಿದ್ದರಾಮಯ್ಯ ಹೋದ, ಬಂದ ಕಡೆಯೆಲ್ಲಾ ಆಕಾಂಕ್ಷಿಗಳು ಬೆನ್ನು ಹತ್ತಿದ್ದಾರೆ.

ಕಳೆದ ಎರಡು ದಿನಗಳಿಂದ ಸಿದ್ದರಾಮಯ್ಯ ಮೈಸೂರಿನಲ್ಲಿ ವಾಸ್ತವ್ಯ ಹೂಡಿದ್ದಾರೆ. ಬೆಂಗಳೂರು, ಬೆಳಗಾಂ, ಚಿತ್ರದುರ್ಗ ಸೇರಿದಂತೆ ಇತರೆಡೆಯಿಂದ ಬಂದಿರುವ ಆಕಾಂಕ್ಷಿಗಳು ಸಿದ್ದರಾಮಯ್ಯ ಭೇಟಿ ಮಾಡಿ ಲಾಬಿ ನಡೆಸುತ್ತಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮೈಸೂರಿನ ರಾಮಕೃಷ್ಣ ನಗರದ ಮನೆಯಲ್ಲಿ ಸಿದ್ದರಾಮಯ್ಯ ಭೇಟಿ ಮಾಡಿ ತಮ್ಮ ಬೆಂಬಲಿಗನ ವಿಧಾನಪರಿಷತ್‌ಗೆ ಆಯ್ಕೆ ಮಾಡುವಂತೆ ಮನವಿ ಮಾಡಿದ್ದರು. ವಿಧಾನಪರಿಷತ್‌ಗೆ ಟಿಕೆಟ್ ನೀಡುವ ತಮ್ಮ ಇಕ್ಕಟ್ಟಿನ ಪರಿಸ್ಥಿತಿಯನ್ನು ಸಿದ್ದರಾಮಯ್ಯ ಇದೇ ವೇಳೆ ಆಕಾಂಕ್ಷಿಗಳಿಗೆ ವಿವರಿಸಿದರು.

ಪರಿಶಿಷ್ಟ ಜಾತಿಗೆ ಒಂದು ಸ್ಥಾನ, ಪರಿಶಿಷ್ಟ ಪಂಗಡಕ್ಕೆ ಒಂದು ಸ್ಥಾನ, ಕ್ರಿಶ್ಚಿಯನ್ ಸಮುದಾಯಕ್ಕೆ ಒಂದು ಸ್ಥಾನ, ಮಹಿಳೆಯರಿಗೆ ಒಂದು ಸ್ಥಾನ ಹಾಗೂ ಹಿಂದುಳಿದ ವರ್ಗದವರಿಗೆ ಒಂದು ಸ್ಥಾನ ನೀಡಬೇಕಿದೆ ಎಂದು ವಿವರಿಸಿದರು.

ಹೀಗಿರುವಾಗ ಎಲ್ಲರೂ ಬಂದು ನನಗೂ ಅವಕಾಶ ಕೊಡಿ ಎಂದು ಕೇಳಿದರೆ ಹೇಗೆ ಕೊಡಲು ಸಾಧ್ಯ, ನನ್ನ ಇಕ್ಕಟ್ಟಿನ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ ಎಂದು ಸಿದ್ದರಾಮಯ್ಯ ಆಕಾಂಕ್ಷಿಗಳಿಗೆ ಪರಿಸ್ಥಿತಿ ಮನದಟ್ಟು ಮಾಡಿದರು.

ಶಿಕ್ಷಣ ಎಲ್ಲಾ ಯಶಸ್ಸಿನ ಬೆನ್ನೆಲುಬು



ಮೈಸೂರು, ಮೇ 25– ಶಿಕ್ಷಣವಿಲ್ಲದ ಜೀವನವು ನಿಷ್ಪ್ರಯೋಜಕ ಮತ್ತು ಅರ್ಥಹೀನ. ಜೀವನವು ಒಂದು ಕಲಿಕೆ, ಅದು ನಿರಂತರವಾಗಿದ್ದು, ಮಾಹಿತಿಯ ಅರಿವು ಯಶಸ್ಸಿನ ಹಾದಿಯನ್ನು ಸೃಷ್ಟಿಸುತ್ತದೆ ಎಂದು ಮೈಸೂರಿನ ಹೆಕ್ಷಾನ್ ಟ್ಯಾಲೆಂಟ್ ಅಡ್ವೈಸರ್ಸ್‌ನ ವ್ಯವಸ್ಥಾಪಕ ಪಾಲುದಾರರಾದ ಶ್ರೀಹರ್ಷ ಕೆ.ಪಿ. ಅಭಿಪ್ರಾಯಪಟ್ಟರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ (ಎಂ.ಕಾಂ) ವಿಭಾಗವು ಮಹಾಜನ ಸ್ನಾತಕೋತ್ತರ ಕೇಂದ್ರ ಹೆಕ್ಷಾನ್ ಟ್ಯಾಲೆಂಟ್ ಅಡ್ವೈಸರ್ಸ್ ಹಾಗೂ ಬೆಂಗಳೂರಿನ ಐ ನರ್ಚರ್ ಮತ್ತು ಗೆಲಿಲಿಯೋ ಪ್ರೈವೇಟ್ ಲಿಮಿಟೆಡ್‌ನ ಸಹಯೋಗದೊಂದಿಗೆ ``CREATIVE & NEW AGE CAREERS" ಕುರಿತು ಆಯೋಜಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಶಿಕ್ಷಣದ ಮಹತ್ವದ ಬಗ್ಗೆ ಮಾತನಾಡಿದರು.


ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಬೆಂಗಳೂರಿನ ಐ ನರ್ಚರ್ ಮತ್ತು ಗೆಲಿಲಿಯೋ ಪ್ರೈವೇಟ್ ಲಿಮಿಟೆಡ್‌ನ ಔಟ್‌ರೀಚ್ ಮ್ಯಾನೇಜರ್ ಕು.ಫರೀನ್ ಫಾತಿಮಾ ಅವರು ಸರಿಯಾದ ವೃತ್ತಿಜೀವನವನ್ನು ಆರಿಸಿಕೊಳ್ಳುವ ಮತ್ತು ಕೃತಕ ಬುದ್ಧಿಮತ್ತೆಯ ಮೂಲಕ ಪ್ರಪಂಚದ ಹೊಸ ರಂಗಕ್ಕೆ ಕಾಲಿಡುವ ಪ್ರಾಮುಖ್ಯತೆ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತಾ ನೇಮಕಾತಿ ಪ್ರಕ್ರಿಯೆ, ಸಂಭಾವನೆ ಮತ್ತು ಉದ್ಯೋಗ ಮಾರುಕಟ್ಟೆ ಒಳಗೊಂಡಿರುವ ಪ್ಯಾಕೇಜ್ ಯೋಜನೆಗಳ ಬಗ್ಗೆ ಮಾತನಾಡಿದರು.

ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಯಾವುದೇ ಕೋರ್ಸ್ ಅನ್ನು ಟರ್ಮಿನಲ್ ಕೋರ್ಸ್ ಎಂದು ಭಾವಿಸಬೇಡಿ ಎಂದರು. ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಅತ್ಯುತ್ತಮವಾಗಿ ಬಳಸಿಕೊಂಡು ತಮ್ಮ ವೃತ್ತಿಜೀವನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಅಂತಿಮ ವರ್ಷದ ವಿದ್ಯಾರ್ಥಿನಿ ಕು.ಶಿಲ್ಪಶ್ರೀ ಪ್ರಾರ್ಥಿಸಿದರೆ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥೆ ಡಾ.ಎಸ್.ಪೂರ್ಣಿಮ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯ ಮತ್ತು ಇಆರ್‌ಪಿ ತಜ್ಞರಾದ ನಾಗೇಶ್ ಜಯರಾಮ್ ಭಾಗವಹಿಸಿದ್ದರು.

ನಿಧನ

ಶ್ರೀನಿವಾಸಗೌಡ



ಮೈಸೂರು, ಮೇ 25– ನಿವೃತ್ತ ಕಾರ್ಯಪಾಲಕ ಇಂಜಿನಿಯರ್, ಮೈಸೂರಿನ ವಿಜಯನಗರ ನಿವಾಸಿ ಎಸ್.ಡಿ.ಶ್ರೀನಿವಾಸಗೌಡ ಅವರು (78) ಶನಿವಾರ ಸಂಜೆ ನಿಧನರಾದರು. ದಿವಂಗತರು ಪತ್ನಿ, ನಾಲ್ವರು ಪುತ್ರಿಯರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ನಿವೃತ್ತ ಡಿಡಿಪಿಐ ಶ್ರೀಮತಿ ಶಾರದಮ್ಮ ಅವರ ಪುತ್ರ ಅರುಣ್‌ನಾಗೇಗೌಡ ಇವರ ಅಳಿಯಂದಿರಲ್ಲಿ ಒಬ್ಬರು. ದಿವಂಗತರ ಪುತ್ರಿಯೊಬ್ಬರು ವಿದೇಶದಲ್ಲಿದ್ದಾರೆ. ನಾಳೆ (ಭಾನುವಾರ) ಮಧ್ಯಾಹ್ನ 2 ಗಂಟೆಗೆ ಮೈಸೂರಲ್ಲಿ ಇವರ ಅಂತ್ಯಕ್ರಿಯೆ ನೆರವೇರಿಸಲು ನಿರ್ಧರಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಧಾನಿ ವಾಸ್ತವ್ಯ ಹೂಡಿದ್ದ ಹೋಟೆಲ್‌ನ 80.60 ಲಕ್ಷ ಬಿಲ್ ಬಾಕಿ

ಜೂ.1ರೊಳಗೆ ಬಿಲ್ ಪಾವತಿಸಲು ಪತ್ರ ಮುಖೇನ ಮನವಿ; ತಪ್ಪಿದರೆ ಕಾನೂನು ಕ್ರಮದ ಎಚ್ಚರಿಕೆ



ಮೈಸೂರು, ಮೇ 25(ಎಂಟಿವೈ)–ಕಳೆದ ವರ್ಷ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ನಡೆದ ಹುಲಿ ಸಂರಕ್ಷಿತ ವಲಯದ 50ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು. ಆಗ ಅವರು ವಾಸ್ತವ್ಯ ಹೂಡಿದ್ದ ರ್‍ಯಾಡಿಸನ್ ಬ್ಲೂ ಪ್ಲಾಜ ಹೋಟೆಲ್‌ನ 80.60 ಲಕ್ಷ ರೂ. ಬಿಲ್ ಬಾಕಿ ಇದ್ದು, ಇದಕ್ಕೆ ಶೇ.18ರಷ್ಟು ಬಡ್ಡಿ ಸೇರಿಸಿ ಜೂ.1ರೊಳಗೆ ಪಾವತಿಸದಿದ್ದರೆ ಕಾನೂನು ಕ್ರಮದ ಎಚ್ಚರಿಕೆಯನ್ನು ಹೋಟೆಲ್ ಆಡಳಿತ ಮಂಡಳಿ ನೀಡಿದೆ.

ಒಂದು ವರ್ಷವಾದರೂ ಪ್ರಧಾನಿ ವಾಸ್ತವ್ಯ ಹೂಡಿದ್ದ ಹೋಟೆಲ್‌ಗೆ ಬಿಲ್ ಪಾವತಿಸದ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಹಾಗೂ ಅರಣ್ಯ ಇಲಾಖೆ ನಿಲುವಿಗೆ ಅಸಮಾಧಾನ ಹೊರ ಹಾಕಿರುವ ಹೋಟೆಲ್ ಆಡಳಿತ ಮಂಡಳಿ ಮೇ 21ರಂದು ಪತ್ರ ಬರೆದು ಬಾಕಿ ಬಿಲ್ ಪಾವತಿಸುವಂತೆ ಕೋರಿದೆ.

ಜೂನ್ 1ರೊಳಗೆ ಬಿಲ್ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸದೇ ಇದ್ದಲ್ಲಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಹೋಟೆಲ್ ಆಡಳಿತ ಮಂಡಳಿ ಮೈಸೂರು ಡಿಸಿಎಫ್‌ಗೆ ಪತ್ರ ಬರೆದು, ಅದರ ಪ್ರತಿಯನ್ನು ಮೈಸೂರು ಜಿಲ್ಲಾಧಿಕಾರಿ, ಎನ್‌ಟಿಸಿಎ ಐಜಿ ಹಾಗೂ ಪ್ರಧಾನ ಮಂತ್ರಿಗಳ ಕಚೇರಿ ಕಾರ್ಯದರ್ಶಿಗೂ ರವಾನಿಸಲಾಗಿದೆ.

ಎನ್‌ಟಿಸಿಎ ಪಾವತಿಸಬೇಕಾಗಿತ್ತು: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ)ವು ಕರ್ನಾಟಕ ಅರಣ್ಯ ಇಲಾಖೆ ಮೂಲಕ ಆಯೋಜಿಸಿದ್ದ ಈ ಹುಲಿ ಯೋಜನೆಯ 50 ವರ್ಷದ ಕಾರ್ಯಕ್ರಮದ ವೆಚ್ಚವನ್ನು ಎನ್‌ಟಿಸಿಎ ಪಾವತಿಸಬೇಕಾಗಿತ್ತು. 2023ರ ಏಪ್ರಿಲ್‌ನಲ್ಲಿ ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಿ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ, ಅಂದಿನ ರಾಜ್ಯ (ಬಿಜೆಪಿ) ಸರ್ಕಾರ ಕಾರ್ಯಕ್ರಮದ ಹೊಣೆ ಹೊತ್ತುಕೊಳ್ಳಲು ಅವಕಾಶ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಅರಣ್ಯ ಇಲಾಖೆಯ ಪಿಸಿಸಿಎಫ್, ಎನ್‌ಟಿಸಿಎಗೆ ಪತ್ರ ಬರೆದು ವಾಸ್ತವ ಸ್ಥಿತಿಯನ್ನು ವಿವರಿಸಿದ್ದರು. ಅಲ್ಲದೆ, ಕಾರ್ಯಕ್ರಮದ ಖರ್ಚು–ವೆಚ್ಚವನ್ನು ಎನ್‌ಟಿಸಿಎ ಭರಿಸಬೇಕೆಂದು ಪತ್ರ ಮುಖೇನ ಮನವಿ ಮಾಡಲಾಗಿತ್ತು.

6.33 ಕೋಟಿ ಖರ್ಚು: ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಎರಡು ದಿನ ನಡೆದ ಕಾರ್ಯಕ್ರಮಕ್ಕೆ ಒಟ್ಟು 6.33 ಕೋಟಿ ವೆಚ್ಚವಾಗಿದೆ. ಅದರಲ್ಲಿ ಈಗಾಗಲೇ 3 ಕೋಟಿ ಬಿಡುಗಡೆ ಮಾಡಲಾಗಿದೆ. ಇನ್ನು ಹೋಟೆಲ್ ಬಿಲ್ 80.60 ಲಕ್ಷ ರೂ. ಸೇರಿದಂತೆ 3.33 ಕೋಟಿ ರೂ. ಪಾವತಿಸಬೇಕಾಗಿದೆ.

ತುಟಿ ಬಿಚ್ಚದ ಎನ್‌ಟಿಸಿಎ: ಕರ್ನಾಟಕದ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಪಿಸಿಸಿಎಫ್ ಕಳೆದ ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಮೂರು ಪತ್ರ ಬರೆದು, ಬಾಕಿ ಹಣ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಆದರೆ, ಎನ್‌ಟಿಸಿಎ ಮಾತ್ರ ರಾಜ್ಯ ಸರ್ಕಾರದಿಂದಲೇ ಹಣ ಪಾವತಿಸುವಂತೆ ಒಮ್ಮೆ ಸೂಚನೆ ನೀಡಿ ಸುಮ್ಮನಾಗಿದೆ. ಕಾರ್ಯಕ್ರಮ ನಡೆದ ಸಂದರ್ಭದಲ್ಲಿ ರಾಜ್ಯದಲ್ಲಿ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಎನ್‌ಟಿಸಿಎ ಕಾರ್ಯಕ್ರಮದ ಖರ್ಚು–ವೆಚ್ಚ ಭರಿಸಬೇಕು ಎಂದು ಮೂರು ಬಾರಿಯೂ ಪತ್ರದಲ್ಲಿ ಉಲ್ಲೇಖಿಸಿದ್ದರೂ ಯಾವುದೇ ಸ್ಪಷ್ಟ ನಿರ್ಧಾರ ಕೈಗೊಳ್ಳದೇ ಇರುವುದು ರಾಜ್ಯ ಅರಣ್ಯ ಇಲಾಖೆಯ ಅಧಿಕಾರಿಗಳು ಪೇಚಿಗೆ ಸಿಲುಕುವಂತೆ ಮಾಡಿದೆ.

ಸೌಹಾರ್ದಯುತ ಇತ್ಯರ್ಥ; ಅರಣ್ಯ ಸಚಿವ ಈಶ್ವರ ಖಂಡ್ರೆ ಭರವಸೆ



ಈಶ್ವರ ಬಿ.ಖಂಡ್ರೆ

ಬೆಂಗಳೂರು, ಮೇ 25(ಎಂಟಿವೈ)–ಹುಲಿ ಸಂರಕ್ಷಿತ ವಲಯದ 50ನೇ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಆತಿಥ್ಯದ ಬಿಲ್ ವಿಚಾರವನ್ನು ಸೌಹಾರ್ದಯುತವಾಗಿ ಬಗೆಹರಿಸುವುದಾಗಿ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ಪ್ರಧಾನಿ ಮೋದಿ ವಾಸ್ತವ್ಯ ಹೂಡಿದ್ದ ಹೋಟೆಲ್ ಆಡಳಿತ ಮಂಡಳಿ ನೀಡಿರುವ ಎಚ್ಚರಿಕಾ ಪತ್ರಕ್ಕೆ ಸಂಬಂಧಿಸಿದಂತೆ ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ವತಿಯಿಂದ 2023ರ ಏಪ್ರಿಲ್‌ನಲ್ಲಿ ಹುಲಿ ಸಂರಕ್ಷಿತ ವಲಯದ 50ನೇ ವರ್ಷದ ಕಾರ್ಯಕ್ರಮ ನಡೆದಾಗ, ವಿಧಾನಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿತ್ತು ಹೀಗಾಗಿ ರಾಜ್ಯ ಸರ್ಕಾರ ಭಾಗಿ ಆಗಿರಲಿಲ್ಲ. ರಾಜ್ಯ ಲಾಂಛನದ ಬಳಕೆಯೂ ಆಗಿರಲಿಲ್ಲ. ಇದು ಸಂಪೂರ್ಣ ಎನ್‌ಟಿಸಿಎ ಕಾರ್ಯಕ್ರಮವಾಗಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮದ ವೆಚ್ಚವನ್ನು ಎನ್‌ಟಿಸಿಎ ಭರಿಸಬೇಕಾಗಿದೆ ಎಂದರು.

ದೇಶದ ಪ್ರಧಾನಿ ರಾಜ್ಯಕ್ಕೆ ಬಂದಾಗ ಅವರ ಆತಿಥ್ಯ ನಿರ್ವಹಣೆಗಾಗಿ ರಚಿಸಲಾಗಿದ್ದ ಸಮಿತಿಯಲ್ಲಿ ನಮ್ಮ ಅರಣ್ಯ ಇಲಾಖೆ ಅಧಿಕಾರಿಗಳು ಇದ್ದರು. ವಾಸ್ತವವಾಗಿ ಈ ಕಾರ್ಯಕ್ರಮಕ್ಕೆ ಆಗುವ ಸಂಪೂರ್ಣ ವೆಚ್ಚ ಭರಿಸುವುದಾಗಿ ಎನ್‌ಟಿಸಿಎ ಹೇಳಿತ್ತು. ಕಾರ್ಯಕ್ರಮಕ್ಕೆ ಒಟ್ಟು 6.33 ಕೋಟಿ ರೂ. ವೆಚ್ಚವಾಗಿದೆ. ಅದರಲ್ಲಿ 3 ಕೋಟಿ ರೂ. ಬಿಡುಗಡೆಯಾಗಿದೆ. ಉಳಿದ 3.33 ಕೋಟಿ ರೂ. ಬಾಕಿ ಬರಬೇಕಿದೆ. ಇದರಲ್ಲಿ ರ್‍ಯಾಡಿಸನ್ ಬ್ಲೂ ಆತಿಥ್ಯ ವೆಚ್ಚ ಸುಮಾರು 80 ಲಕ್ಷ ರೂ. ಸೇರಿದೆ. ಈ ಬಗ್ಗೆ ಇಲಾಖೆ ಅಧಿಕಾರಿಗಳು ಹಲವು ಬಾರಿ ಪತ್ರ ಬರೆದಿದ್ದರೂ, ಫೋನ್ ಮಾಡಿದ್ದರೂ ಎನ್‌ಟಿಸಿಎ (ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ) ಬಾಕಿ ಹಣ ನೀಡಿಲ್ಲ. ಈಗ ವಿಷಯ ತಮ್ಮ ಗಮನಕ್ಕೆ ಬಂದಿದ್ದು, ಸೌಹಾರ್ದಯುತವಾಗಿ ಪರಿಹರಿಸಲು ಪ್ರಯತ್ನಿಸುವುದಾಗಿ ಸ್ಪಷ್ಟಪಡಿಸಿದ್ದಾರೆ.

ಪಿಸಿಸಿಎಫ್ ಗಮನಕ್ಕೆ ತಂದಿದ್ದೇವೆ

ಹುಲಿ ಸಂರಕ್ಷಿತ ಯೋಜನೆಯ 50 ವರ್ಷದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು. ಅವರು ವಾಸ್ತವ್ಯ ಹೂಡಿದ್ದ ಹೋಟೆಲ್ ಆಡಳಿತ ಮಂಡಳಿ ಪತ್ರವೊಂದನ್ನು ಬರೆದಿದ್ದು, ಬಿಲ್ ಮೊತ್ತ 80.60 ಲಕ್ಷ ರೂ. ಹಾಗೂ ಶೇ.18ರಷ್ಟು ಬಡ್ಡಿಯೊಂದಿಗೆ ಜೂ.1ರೊಳಗೆ ಪಾವತಿಸದಿದ್ದರೆ ಕಾನೂನು ಕ್ರಮದ ಬಗ್ಗೆ ಉಲ್ಲೇಖಿಸಿದ್ದಾರೆ. ಪತ್ರ ಬರೆದ ವಿಚಾರವನ್ನು ಪಿಸಿಸಿಎಫ್ ಗಮನಕ್ಕೆ ತಂದಿದ್ದೇನೆ. – **ಡಾ.ಕೆ.ಎನ್.ಬಸವರಾಜ್, ಡಿಸಿಎಫ್, ಮೈಸೂರು**

ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡಲು ಮಧ್ಯ ಪ್ರವೇಶಿಸುವಂತೆ ರಾಜ್ಯಪಾಲರಿಗೆ ವಿಜಯೇಂದ್ರ ಮನವಿ



ಮೈಸೂರು, ಮೇ 25–ರಾಜ್ಯದಲ್ಲಿ ಕುಸಿದಿರುವ ಕಾನೂನು–ಸುವ್ಯವಸ್ಥೆಯನ್ನು ಸರಿದಾರಿಗೆ ತರಲು ರಾಜ್ಯಪಾಲರು ಮಧ್ಯೆ ಪ್ರವೇಶಿಸಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದಲ್ಲಿ ಪೊಲೀಸರು ನಿಷ್ಪಕ್ಷಪಾತವಾಗಿ ಕರ್ತವ್ಯ ನಿರ್ವಹಿಸಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಪರಿಣಾಮವಾಗಿ ರಾಜ್ಯವು ಉಗ್ರರ ಅಡಗುತಾಣವಾಗಿದೆ. ಮಾಫಿಯಾಗಳು, ರೌಡಿಗಳ ಅಟ್ಟಹಾಸ ಮೇರೆ ಮೀರಿದೆ. ಅಕ್ರಮವಾಗಿ ರೇವ್ ಪಾರ್ಟಿಗಳು ಎಗ್ಗಿಲ್ಲದೇ ನಡೆಯುತ್ತಿವೆ. ಕ್ರಮ ಕೈಗೊಳ್ಳಲು ಪೊಲೀಸರು ಮುಂದಾದರೆ ಪೊಲೀಸ್ ಠಾಣೆಗೆ ಬೆಂಕಿ ಹಚ್ಚುವ ಕೆಲಸವನ್ನು ವಿಧ್ವಂಸಕ ಶಕ್ತಿಗಳು ಮಾಡಲು ಮುಂದಾಗಿವೆ. ಇದಕ್ಕೆ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವೇ ಕಾರಣ ಎಂದು ಆರೋಪಿಸಿದ್ದಾರೆ.

ಬಿಹಾರದಲ್ಲಿ ಲಾಲೂ ಪ್ರಸಾದ್ ಯಾದವ್ ಆಡಳಿತ ನಡೆಸಿದ ದಿನಗಳು ಇದೀಗ ಕರ್ನಾಟಕದಲ್ಲಿ ತಲೆ ಎತ್ತುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಸರ್ವ ಜನಾಂಗದ ಶಾಂತಿಯ ತೋಟ ಎಂದು ಕರೆದ ಕುವೆಂಪು ಅವರ ಕಲ್ಪನೆಯನ್ನು ಕೊಲ್ಲಲು ಹೊರಟಿರುವ ಕಾಂಗ್ರೆಸ್ ಸರ್ಕಾರ, ಕರುನಾಡನ್ನು ಅಭದ್ರತೆಯ, ಅಶಾಂತಿಯ ಕೊಂಪೆ ಮಾಡಲು ಹೊರಟಿದೆ. ಪೊಲೀಸರ ನೈತಿಕ ಶಕ್ತಿಯನ್ನು ಸಂಪೂರ್ಣವಾಗಿ ಕುಗ್ಗಿಸುವ ವ್ಯವಸ್ಥಿತ ಜಾಲ ಕೆಲಸ ಮಾಡುತ್ತಿದೆ ಎಂದಿರುವ ಅವರು, ರಾಜ್ಯಪಾಲರು ಮಧ್ಯೆ ಪ್ರವೇಶಿಸಿ ಕಾನೂನು–ಸುವ್ಯವಸ್ಥೆ ಕುರಿತು ರಾಜ್ಯ ಸರ್ಕಾರದಿಂದ ವರದಿ ಪಡೆಯಲಿ. ಅಂತೆಯೇ ಪೊಲೀಸ್ ಠಾಣೆಗಳಿಗೆ ದಾಳಿ ಮಾಡುತ್ತಿರುವ ಪರಿಸ್ಥಿತಿ ಹಿನ್ನೆಲೆಯಲ್ಲಿ ರಾಜ್ಯದ ಕಾನೂನು–ಸುವ್ಯವಸ್ಥೆಯನ್ನು ಸರಿದಾರಿಗೆ ತರಲು ರಾಜ್ಯಪಾಲರು ಮಧ್ಯೆ ಪ್ರವೇಶಿಸುವಂತೆ ಮನವಿ ಮಾಡಿದ್ದಾರೆ.

ಶ್ರೀಗಳಿಂದ ಆಶೀರ್ವಾದ ಪಡೆದ ಮರಿತಿಬ್ಬೇಗೌಡರು



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಮೈಸೂರಿನ ಗಾಂಧಿನಗರದಲ್ಲಿರುವ ಶ್ರೀ ಶಿವಯೋಗಿ ಸ್ವಾಮಿ ಮಠಕ್ಕೆ ಭೇಟಿ ನೀಡಿ, ಜ್ಞಾನಪ್ರಕಾಶ್ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಮಾಜಿ ಮೇಯರ್‌ಗಳಾದ ಪುರುಷೋತ್ತಮ್, ಚಿಕ್ಕಣ್ಣ, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಮುಖಂಡರಾದ ಟಿ.ಎಸ್. ಬಳ್ಳಾರಿ ಗೌಡ, ಇನ್ನಿತರರು ಉಪಸ್ಥಿತರಿದ್ದರು.

ಲಾಭದ ಆಸೆ ತೋರಿಸಿ ಮಹಿಳೆಯಿಂದ 12.93 ಲಕ್ಷ ರೂ. ಸುಲಿಗೆ

ಮೈಸೂರು, ಮೇ 25–ಟ್ರೇಡಿಂಗ್ ಗ್ರೂಪ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ದೊರೆಯುತ್ತದೆ ಎಂಬ ಆಮಿಷವೊಡ್ಡಿ ಮಹಿಳೆಗೆ ಆನ್‌ಲೈನ್ ಮೂಲಕ 12.93 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ಕುವೆಂಪುನಗರ 3ನೇ ಹಂತದ ನಿವಾಸಿ ಎಂ.ನಯನ(33) ವಂಚನೆಗೊಳಗಾದವರಾಗಿದ್ದು, ಇವರನ್ನು ವಂಚಕರು ಟೆಲಿಗ್ರಾಂ ಗ್ರೂಪ್‌ನಲ್ಲಿ ಸೇರಿಸಿದ ನಂತರ, ಟ್ರೇಡಿಂಗ್ ಗ್ರೂಪ್‌ನಲ್ಲಿ ಲಾಭ ದೊರೆಯುತ್ತದೆ ಎಂದು ನಂಬಿಸಿದ್ದಾನೆ. ಅವರು ರವಾನಿಸಿದ ಲಿಂಕ್ ಮೇಲೆ ಕ್ಲಿಕ್ ಮಾಡಿದ ನಯನ, ಟ್ರೇಡಿಂಗ್ ಗ್ರೂಪ್ ಚೆಕ್ ಪಡೆದುಕೊಂಡು, ಮೊದಲಿಗೆ 5 ಸಾವಿರ ರೂ. ಹೂಡಿಕೆ ಮಾಡಿ, 20 ಸಾವಿರ ರೂ. ಲಾಭ ಪಡೆದಿದ್ದಾರೆ.

ಬಳಿಕ 50 ಸಾವಿರ ರೂ. ಹೂಡಿಕೆ ಮಾಡಿದರೆ ಕಂಪನಿ 2 ಲಕ್ಷ ರೂ. ಸೇರಿಸಿ 2.50 ಲಕ್ಷಕ್ಕೆ ಟ್ರೇಡಿಂಗ್ ಮಾಡುವುದಾಗಿಯೂ, ಆಗ ಇನ್ನೂ ಹೆಚ್ಚಿನ ಲಾಭ ದೊರೆಯುತ್ತದೆ ಎಂದು ನಂಬಿಸಿದಾಗ ಅವರು 50 ಸಾವಿರ ರೂ. ವರ್ಗಾವಣೆ ಮಾಡಿದ್ದಾರೆ. ಅವರ ಟ್ರೇಡಿಂಗ್ ಗ್ರೂಪ್ ಅಕೌಂಟ್‌ನಲ್ಲಿ 25 ಲಕ್ಷ ರೂ. ಲಾಭ ಬಂದಿರುವುದಾಗಿ ತೋರಿಸಲ್ಪಟ್ಟಿದೆ. ಆದರೆ ಹಣವನ್ನು ಡ್ರಾ ಮಾಡಲು ಆಗಲಿಲ್ಲ. ಇದರ ಬಗ್ಗೆ ಕೇಳಿದಾಗ ಕಂಪನಿ ಪಾವತಿಸಿರುವ 2 ಲಕ್ಷ ರೂ.ಗಳನ್ನು ವರ್ಗಾಯಿಸಿದರೆ 25 ಲಕ್ಷ ಲಾಭಾಂಶ ದೊರೆಯುತ್ತದೆ ಎಂದು ಹೇಳಲಾಗಿದೆ. ಅವರು 2 ಲಕ್ಷ ರೂ. ವರ್ಗಾಯಿಸಿದ ನಂತರವೂ ವಿವಿಧ ಕಾರಣ ಹೇಳುತ್ತಾ ಒಟ್ಟು 12.93 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಕೆವೈಸಿ ಹೆಸರಲ್ಲಿ ದೋಖಾ: ಮತ್ತೊಂದು ಪ್ರಕರಣದಲ್ಲಿ ಮಹದೇವಪುರ ಗ್ರಾಮದ ಎಸ್.ಲತಾ ಎಂಬುವರ ಮೊಬೈಲ್‌ಗೆ 8106065537 ಸಂಖ್ಯೆಯಿಂದ ಅವರ ಬ್ಯಾಂಕ್ ಅಕೌಂಟ್ ಬ್ಲಾಕ್ ಆಗಿರುವುದಾಗಿಯೂ, ಕೆವೈಸಿ ವಿಚಾರವಾಗಿ ಕರೆ ಮಾಡುವಂತೆಯೂ ಮೆಸೇಜ್ ಬಂದಿದೆ. ಅದರಂತೆ ಅವರು ಕರೆ ಮಾಡಿದಾಗ ಆಧಾರ್, ಮೊಬೈಲ್ ಸಂಖ್ಯೆ ಹಾಗೂ ಓಟಿಪಿ ಪಡೆದು ಅವರ ಬ್ಯಾಂಕ್ ಖಾತೆಯಿಂದ 1.90 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾಯಿಸಿಕೊಳ್ಳಲಾಗಿದೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಬಿಎಸ್‌ಪಿ ಅಭ್ಯರ್ಥಿ ಬೆಂಬಲಿಸಲು ಮನವಿ

ಮೈಸೂರು, ಮೇ 25(ಜಿಎ)–ಈ ಬಾರಿಯ ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಬಿಎಸ್ಪಿ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಡಾ.ಹ.ರಾ.ಮಹೇಶ್ ಅವರನ್ನು ಮತದಾರರು ಬೆಂಬಿಸಬೇಕೆಂದು ಪಕ್ಷದ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ಮನವಿ ಮಾಡಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮೇಲ್ಮನೆಗೆ ಬುದ್ಧಿಜೀವಿಗಳು, ವಿಚಾರವಂತರು, ಶಿಕ್ಷಣ ಕ್ಷೇತ್ರದ ತಜ್ಞರು ಪ್ರವೇಶಿಸುತ್ತಿಲ್ಲ. ಆದ್ದರಿಂದ ಮತದಾರರು ಸಹಾ ಕೆಲವೊಮ್ಮೆ ಜಾತಿ, ಧರ್ಮ, ಆಸೆ ಆಮಿಷಗಳಿಗೆ ಮರುಳಾಗದೇ ಡಾ.ಹ.ರಾ. ಮಹೇಶ್ ಅವರನ್ನು ಆಯ್ಕೆ ಮಾಡಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಅಭ್ಯರ್ಥಿ ಡಾ.ಹ.ರಾ. ಮಹೇಶ್, ಗೋಪಿನಾಥ್, ಎಂ.ಕೃಷ್ಣಮೂರ್ತಿ, ಚಂದ್ರಶೇಖರ್, ಬಸವಣ್ಣ ಉಪಸ್ಥಿತರಿದ್ದರು.



ಕದಂಬ ರಂಗವೇದಿಕೆ, ಕನ್ನಡ–ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕದಂಬ ನಗೆ ನಾಟಕೋತ್ಸವದಲ್ಲಿ ನಾಟಕದ ವ್ಯವಸ್ಥಾಪಕ ಸೈಡ್ ವಿಂಗ್ ಸಂಸ್ಥೆಯ ಶೈಲೇಶ್ ಕುಮಾರ್, ಹಿರಿಯ ರಂಗಕರ್ಮಿ ಮೈಮ್ ರಮೇಶ್ ಅವರಿಗೆ ನೆನಪಿನ ಕಾಣಿಕೆ ನೀಡಲಾಯಿತು. ಪ್ರಾಂಶುಪಾಲ ಮಹದೇವಶೆಟ್ಟಿ, ರಾಜಶೇಖರ ಕದಂಬ ಇದ್ದರು.

ಮೈಲಾರಿ ಹೋಟೆಲ್‌ನಲ್ಲಿ ಬೆಣ್ಣೆ ದೋಸೆ, ಇಡ್ಲಿ; ನಳಪಾಕ್‌ನಲ್ಲಿ ಫಿಲ್ಟರ್ ಕಾಫಿ ಸೇವಿಸಿದ ಸಿದ್ದರಾಮಯ್ಯ



ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಮೈಲಾರಿ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಣ್ಣೆ ದೋಸೆ, ಇಡ್ಲಿ ಸವಿದರು.

ಮೈಸೂರು, ಮೇ25(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಕೂಡ ಮೈಸೂರಿನ ಮೈಲಾರಿ ಹೋಟೆಲ್‌ನಲ್ಲಿ ಬೆಣ್ಣೆ ದೋಸೆ ಸವಿದರು.

ಕಳೆದ ಎರಡು ದಿನಗಳಿಂದ ಮೈಸೂರಿನಲ್ಲೇ ವಾಸ್ತವ್ಯ ಹೂಡಿರುವ ಸಿದ್ದರಾಮಯ್ಯ ನಿನ್ನೆ ನಜರ್‌ಬಾದ್‌ನ ಮೈಲಾರಿ ಹೋಟೆಲ್‌ನಲ್ಲಿ ಉಪಾಹಾರ ಸ್ವೀಕರಿಸಿದ್ದರು.

ಇಂದು ಕೂಡ ತಮ್ಮ ಆಪ್ತರೊಡನೆ ಅಗ್ರಹಾರದಲ್ಲಿ, ಸಯ್ಯಾಜಿರಾವ್ ರಸ್ತೆಯಲ್ಲಿನ ಮೈಲಾರಿ ಹೋಟೆಲ್‌ನಲ್ಲಿ ಸಿದ್ದರಾಮಯ್ಯ ಬೆಣ್ಣೆ ದೋಸೆ ಹಾಗೂ ಇಡ್ಲಿ ಸವಿದರು. ಮೈಸೂರಿನಲ್ಲಿ ಹಲವು ಸ್ಥಳಗಳಲ್ಲಿ ಮೈಲಾರಿ ಹೋಟೆಲ್‌ಗಳಿವೆ. ಆದರೆ ಇಂದು ಸಿದ್ದರಾಮಯ್ಯ ಭೇಟಿ ನೀಡಿದ್ದ ಮೈಲಾರಿ ಹೋಟೆಲ್‌ನ ವಿಶೇಷವೆಂದರೆ; ಕಳೆದ ವಿಧಾನಸಭಾ ಚುನಾವಣೆ ಪ್ರಚಾರ ವೇಳೆ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಸ್ವತಃ ದೋಸೆ ಮಾಡಿ ಸವಿದಿದ್ದರು. ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮರಿಸ್ವಾಮಿ ಕೂಡ ಸಿದ್ದರಾಮಯ್ಯ ಜೊತೆ ಬೆಣ್ಣೆ ದೋಸೆ ರುಚಿ ನೋಡಿದರು. ಮೈಲಾರಿ ಹೋಟೆಲ್‌ನಲ್ಲಿ ತಿಂಡಿ ಮಾಡಿದ ನಂತರ ಸಿದ್ದರಾಮಯ್ಯ, ವಿಶ್ವ ಮಾನವ ಜೋಡಿ ರಸ್ತೆಯಲ್ಲಿನ ನಳಪಾಕ್ ಹೋಟೆಲ್‌ನಲ್ಲಿ ಫಿಲ್ಟರ್ ಕಾಫಿ ಕುಡಿದರು.

ನಾಳೆ ಪೋಸ್ಟ್ ಮಾಸ್ಟರ್ ಹೆಚ್.ಎನ್.ಗುರುನಂಜಪ್ಪ ಅವರಿಗೆ ಬೀಳ್ಕೊಡುಗೆ

ಮೈಸೂರು, ಮೇ 25– ಮೈಸೂರಿನ ರಾಜೀವ್‌ನಗರದಲ್ಲಿರುವ ಅರಸು ಗೆಳೆಯರ ಬಳಗದ ಸಭಾಂಗಣದಲ್ಲಿ ಅಂಚೆ ಇಲಾಖೆ ಸಬ್‌ಪೋಸ್ಟ್‌ಮಾಸ್ಟರ್ ಹೆಚ್.ಎನ್. ಗುರುನಂಜಪ್ಪ ಅವರಿಗೆ ಮೇ 27ರಂದು ಬೆಳಗ್ಗೆ 11 ಗಂಟೆಗೆ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿದೆ. ಜಿಲ್ಲಾ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರಿನ ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್ ಕಾರ್ಯಕ್ರಮ ಉದ್ಘಾಟಿಸುವರು. ಹೆಚ್.ಡಿ.ಕೋಟೆ ಅರಸು ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇಅರಸ್ ಅವರು ಗುರುನಂಜಪ್ಪ ಅವರನ್ನು ಸನ್ಮಾನಿಸುವರು. ಅಂಚೆ ಇಲಾಖೆ ವಿಶ್ರಾಂತ ಹಿರಿಯ ಅಂಚೆ ಅಧೀಕ್ಷಕ ಡಿ.ಶಿವಯ್ಯ, ಅಂಚೆ ತರಬೇತಿ ಕೇಂದ್ರದ ನಿವೃತ್ತ ಉಪ ನಿರ್ದೇಶಕ ಎಸ್.ರಾಜಶೇಖರ್, ನಿವೃತ್ತ ಹಿರಿಯ ಅಂಚೆ ಅಧೀಕ್ಷಕ ಕೆ.ಓ.ಬಯ್ಯ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ರತ್ನ ಹಾಲಪ್ಪಗೌಡ, ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಪ್ರತ್ಯೇಕ ಪ್ರಕರಣ: ವಿದ್ಯುತ್ ಸ್ಪರ್ಶದಿಂದ ಬಾಲಕ ಸೇರಿ ಇಬ್ಬರು ಸಾವು


ಕಿಕ್ಕೇರಿ ಬಳಿ ಗಾಂಯತ್ರಮ್ಮ ಸಾವು


ಹಲಗೂರು ಬಳಿ ಬಾಲಕ ಸಂಜಯ್ ಸಾವು

ಮಂಡ್ಯ, ಮೇ 25– ಜಿಲ್ಲೆಯಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಬಾಲಕ ಸೇರಿ ದಂತೆ ಇಬ್ಬರು ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ.

ಹಲಗೂರು: ಸಮೀಪದ ಮಾರಗೌಡನಹಳ್ಳಿ ಗ್ರಾಮದ ಇಗ್ಗಲೂರು ಎಡದಂಡೆ ನಾಲೆ ಬಳಿ ಕುಮಾರ್ ಎಂಬುವವರಿಗೆ ಸೇರಿದ ಜಮೀನಿನಲ್ಲಿ ಮಾವಿನಕಾಯಿ ಕೀಳಲು ಹೋಗಿ ವಿದ್ಯುತ್ ಸ್ಪರ್ಶಗೊಂಡು ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಮಾರಗೌಡನಹಳ್ಳಿ ಗ್ರಾಮದ ಕುಮಾರಚಾರಿ ಅವರ ಪುತ್ರ ಸಂಜಯ್ (16) ವಿದ್ಯುತ್ ತಂತಿ ತಗುಲಿ ಮೃತಪಟ್ಟ ಬಾಲಕ. ಇಂದು ಮಧ್ಯಾಹ್ನ 4 ಗಂಟೆಯ ಸಮಯದಲ್ಲಿ ನಿಟ್ಟೂರು ಕೋಡಿಹಳ್ಳಿ–ಮಾರಗೌಡನ ಹಳ್ಳಿಯ ಇಗ್ಗಲೂರು ನಾಲೆ ಮಾರ್ಗದ ಮಾರಗೌಡನಹಳ್ಳಿ ಕುಮಾರ್ ಅವರಿಗೆ ಸೇರಿದ ಜಮೀನಿನಲ್ಲಿ ಮಾವಿನಕಾಯಿ ಕೀಳಲು ಹೋಗಿ ವಿದ್ಯುತ್ ತಂತಿ ಸ್ಪರ್ಶಿಸಿ ಸಂಜಯ್ ಮರದ ಮೇಲೆಯೇ ಮೃತಪಟ್ಟಿದ್ದಾನೆ.

11.ಕೆ.ವಿ. ವಿದ್ಯುತ್ ತಂತಿಗೆ ಮಾವಿನ ಮರದ ಕೊಂಬೆ ಸ್ಪರ್ಶಿಸುತ್ತಿದ್ದ ಕಾರಣದಿಂದ ವಿದ್ಯುತ್ ಶಾಕ್ ಹೊಡೆದು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಕ್ಕೇರಿ: ಮತ್ತೊಂದು ಪ್ರಕರಣದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಮಹಿಳೆಯೊಬ್ಬರು ಸಾವನ್ನಪ್ಪಿರುವ ಘಟನೆ ಹೋಬಳಿಯ ಲಕ್ಷ್ಮೀಪುರ ಗ್ರಾಮದಲ್ಲಿ ಶನಿವಾರ ಸಂಭವಿಸಿದೆ.

ಗ್ರಾಮದ ಲೇ.ಕಾಳೇಗೌಡರ ಪತ್ನಿ ಗಾಯಿತ್ರಮ್ಮ(45) ಮೃತ ಮಹಿಳೆ. ಶುಕ್ರವಾರ ರಾತ್ರಿ ಗ್ರಾಮದಲ್ಲಿ ಬಿರುಗಾಳಿ ಸಹಿತ ಮಳೆ ಬಂದಿತ್ತು. ಇಡೀ ರಾತ್ರಿ ವಿದ್ಯುತ್ ಸಂಪರ್ಕವಿಲ್ಲದೆ ಗ್ರಾಮ ಕಗ್ಗತ್ತಲಿನಿಂದ ಕೂಡಿತ್ತು. ಶನಿವಾರ ಬೆಳಿಗ್ಗೆ ಎಂದಿನಂತೆ ಜಮೀನು ಕಡೆ ತೆರಳಿದ್ದಾರೆ. ಜಮೀನಿನಲ್ಲಿ ಹಾದು ಹೋಗಿದ್ದ ವಿದ್ಯುತ್ ತಂತಿ ತುಂಡಾಗಿ ಜಮೀನಿನಲ್ಲಿ ಬಿದ್ದಿತ್ತು. ಇದರ ಅರಿವಿಲ್ಲದೆ ವಿದ್ಯುತ್ ತಂತಿ ತುಳಿದ ಪರಿಣಾಮ ವಿದ್ಯುತ್ ಪ್ರವಹಿಸಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಕಿಕ್ಕೇರಿ ಪೊಲೀಸ್ ಠಾಣೆಗೆ ಮೃತರ ಪುತ್ರಿ ರುಕ್ಮಿಣಿ ದೂರು ನೀಡಿದ್ದಾರೆ. ವಿದ್ಯುತ್ ಇಲಾಖೆಯವರ ಬೇಜವಾಬ್ದಾರಿಯಿಂದ ಈ ಅವಘಡ ಸಂಭವಿಸಿದ್ದು ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸ್ಥಳ ಪರಿಶೀಲನೆ ವೇಳೆ ಇನ್‌ಸ್ಪೆಕ್ಟರ್ ರೇವತಿ, ಸಿಬ್ಬಂದಿಗಳು, ಗ್ರಾಮ ಮುಖಂಡ ಚಂದ್ರು, ಬಬ್ರುವಾಹನ ಹಾಜರಿದ್ದರು.

ಕೆ.ಆರ್.ಪೇಟೆ ಸುತ್ತ–ಮುತ್ತ ಭಾರಿ ಮಳೆ

ಹಲವು ಗ್ರಾಮಗಳಲ್ಲಿ ಕುಸಿದ ಮನೆ ಗೋಡೆಗಳು, ಮೇಕೆ ಸಾವು, ಹಾರಿದ ಮೇಲ್ಚಾವಣಿ

ಕೆ.ಆರ್.ಪೇಟೆ: ತಾಲೂಕಿನಲ್ಲಿ ಕಳೆದ 14 ದಿನಗಳಿಂದ ನಿತ್ಯ ಸಂಜೆ ವೇಳೆ ಸುರಿತ್ತಿರುವ ಬಿರುಗಾಳಿ ಸಹಿತ ಧಾರಾಕಾರ ಮಳೆಗೆ ಚಿಲ್ಲದಹಳ್ಳಿ, ಜಾಗಿನಕೆರೆ, ಹೆಗ್ಗಡಗಳ್ಳಿ ಗ್ರಾಮಗಳಲ್ಲಿ ಹಲವು ಮನೆಗಳ ಗೋಡೆ ಕುಸಿದು ಲಕ್ಷಾಂತರ ರೂ ನಷ್ಟ ಉಂಟಾಗಿರುವ ಬಗ್ಗೆ ವರದಿಯಾಗಿದೆ.

ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರಬಾಚಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಚಿಲ್ಲದಹಳ್ಳಿ ಗ್ರಾಮದ ಲೇಟ್ ಕೃಷ್ಣೇಗೌಡರ ಮಗ ಮಂಜೇಗೌಡ ಅವರಿಗೆ ಸೇರಿದ ಮನೆಯ ಗೋಡೆಯು ಶುಕ್ರವಾರ ರಾತ್ರಿ ಸುರಿದ ಮಳೆಯಿಂದಾಗಿ ಕುಸಿದು ಬಿದ್ದಿದೆ.

ಮನೆಯ ಗೋಡೆಯು ಕುಸಿಯುತ್ತಿರುವ ಸದ್ದು ಕೇಳಿ ಮಂಜೇಗೌಡ, ಇವರ ತಾಯಿ ಲಕ್ಷ್ಮಮ್ಮ ಪತ್ನಿ ಸಣ್ಣತಾಯಮ್ಮ ಅವರು ಮನೆಯಿಂದ ಹೊರ ಬಂದ ಕಾರಣ ಯಾವುದೇ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನಾ ಸ್ಥಳಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸಿಡಿವಿ ಕುಮಾರ್, ಗ್ರಾ.ಪಂ. ಸದಸ್ಯ ಆರ್.ಶ್ರೀನಿವಾಸ್, ಗ್ರಾಮ ಲೆಕ್ಕಾಧಿಕಾರಿ ಸುನಿಲ್, ಮುಖಂಡರಾದ ವೆಂಕಟೇಶ್, ಪಟೇಲ್ ನಾಗೇಗೌಡ, ಮಹೇಂದ್ರ, ರಮೇಶ್ ಇತರರು ಭೇಟಿ ನೀಡಿ ಪರಿಶೀಲನೆ ನಡೆಸಿ ಮನೆಯ ಗೋಡೆ ಕುಸಿದ ಕಾರಣ ಆತಂಕಗೊಂಡಿದ್ದ ಮಂಜೇಗೌಡ ಕುಟುಂಬಕ್ಕೆ ಧೈರ್ಯ ತುಂಬಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಜಾಗಿನಕೆರೆ: ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಜಾಗಿನಕೆರೆ ಗ್ರಾಮದ ಪ್ರಕಾಶ್ ಬಿನ್ ಸುಬ್ಬೆಗೌಡ ಅವರಿಗೆ ಸೇರಿದ ಮನೆಯ ಗೋಡೆ ಕುಸಿದು ಸುಮಾರು ಹತ್ತು



ಸಾವಿರಕ್ಕೂ ಹೆಚ್ಚು ಬೆಲೆ ಬಾಳುವ ಮೇಕೆ ಸ್ಥಳದಲ್ಲಿ ಸಾವನ್ನಪ್ಪಿರುವ ಘಟನೆ ಜರುಗಿದೆ. ಸ್ಥಳಕ್ಕೆ ಸಾರಂಗಿ ಗ್ರಾಮ ಪಂಚಾಯತಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡಿ ಪರಿಹಾರ ಕೊಡಿಸುವ ಬಗ್ಗೆ ಭರವಸೆ ನೀಡಿದ್ದಾರೆ.

ಹೆಗ್ಗಡಹಳ್ಳಿ: ತಾಲೂಕಿನ ಕಸಬಾ ಹೋಬಳಿಯ ಹೆಗ್ಗಡಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಂಜೆ ಸುರಿದ ಬಿರುಗಾಳಿ ಮಳೆಗೆ ರೇಖಾ ಚಂದ್ರು ಮತ್ತು ನೇತ್ರಾವತಿ ಆನಂದ್ ಅವರ ಮನೆ ಮತ್ತು ರಾಸುಗಳ ಕೊಟ್ಟಿಗೆಗಳ ಮೇಲ್ಚಾವಣಿ ಸಂಪೂರ್ಣ ಕುಸಿದು ಬಿದ್ದಿದ್ದರೆ, ಗಂಗಣ್ಣ, ರಂಗಸ್ವಾಮಿ ಮಂಜುನಾಥ್ ಅವರ ವಾಸವಿದ್ದ ಮನೆಗಳ ಮೇಲ್ಚಾವಣಿ ಭಾಗಶಃ ಹಾರಿ ಹೋಗಿದ್ದು ಮನೆಗಳಲ್ಲಿ ವಾಸವಿರುವ ರೈತರಿಗೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ. ಮೂರೂ ಗ್ರಾಮಗಳಲ್ಲಿ ಮನೆಯಿಂದಾಗಿ ಉಂಟಾಗಿರುವ ಹಾನಿಗೆ ಸ್ಥಳೀಯ ಕಂದಾಯ ಅಧಿಕಾರಿಗಳಿಂದ ವರದಿ ಪಡೆದು ಸೂಕ್ತ ಪರಿಹಾರ ನೀಡುವ ಭರವಸೆಯನ್ನು ತಹಸೀಲ್ದಾರ್ ಡಾ.ಲೋಕೇಶ್ ನೀಡಿದ್ದಾರೆ.

ಕಿಕ್ಕೇರಿಯಲ್ಲೂ ಮಳೆಯಿಂದ ಭಾರೀ ಅವಾಂತರ

ಕಿಕ್ಕೇರಿ: ಧಾರಾಕಾರವಾಗಿ ಸುರಿಯುತ್ತಿರುವ ಮಳೆ ರೈತರಿಗೆ ಹರ್ಷದಾಯಕವಾದರೂ ಅಲ್ಲಲ್ಲಿ ಅವಾಂತರವನ್ನು ಸೃಷ್ಟಿಸಿದೆ. ಪಟ್ಟಣದ ಮಂದಗೆರೆ ರಸ್ತೆ ಸಂಪೂರ್ಣ ಹಾಳಾಗಿ ಪಾದಚಾರಿಗಳು, ವಾಹನ ಸವಾರರು ಓಡಾಡಲಾರದಷ್ಟು ಅಧ್ವಾನವಾಗಿದೆ.

ಮಳೆ ಆರ್ಭಟಕ್ಕೆ ಹಳೆ ಮನೆ, ಹಳೆ ಹೆಂಚಿನ ಮೇಲ್ಚಾವಣಿ ಮನೆಗಳು ಒಂದೊಂದಾಗಿ ಕುಸಿಯುವಂತಾಗುತ್ತಿವೆ. ಸತತವಾಗಿ ವಾರದಿಂದ ಬಿಡದೆ ಸುರಿಯುತ್ತಿರುವ ಮಳೆಗೆ ಭಾರಿ ಗಾತ್ರದ ಮಣ್ಣಿನ ಮನೆಯ ಗೋಡೆಗಳು ಆರ್ದ್ರತೆಯಿಂದ ನೆಲಕ್ಕೆ ಉರುಳುತ್ತಿವೆ.

ಮಲ್ಲೇನಹಳ್ಳಿ ಗ್ರಾಮಕ್ಕೆ ಸಂಪರ್ಕವಾಗಿದ್ದ ರಸ್ತೆಗೆ ಅಡ್ಡಲಾಗಿ ಬೃಹತ್ ಗಾತ್ರದ ಮರ ಬಿದ್ದಿದೆ. ರಸ್ತೆ ಸಂಚಾರ ಅಸ್ತವ್ಯಸ್ತವಾಗಿ


ಕೆಲಕಾಲ ಗ್ರಾಮಸ್ಥರು ಓಡಾಡಲು ಪರದಾಡಿದರು. ಸಂಬಂಧಪಟ್ಟ ಅಧಿಕಾರಿಗಳು ಆಗಮಿಸಿ ಗ್ರಾಮಸ್ಥರ ಸಹಕಾರದಲ್ಲಿ ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ

ತವರಿನಲ್ಲಿ ಮರಿತಿಬ್ಬೇಗೌಡರಿಗೆ ಹೆಚ್ಚಿನ ಮುನ್ನಡೆ ಕೊಡಬೇಕು

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮನವಿ


ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಸಚಿವ ಎನ್.ಚಲುವರಾಯಸ್ವಾಮಿ.

ಮಂಡ್ಯ,ಮೇ 25– ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ನಾಲ್ಕು ಜಿಲ್ಲೆಗಳಲ್ಲಿ ಉತ್ತಮ ವಾತಾವರಣವಿದ್ದು, ಶಿಕ್ಷಕರು ನಮ್ಮ ಜೊತೆ ಇದ್ದಾರೆ. ಅದರಂತೆ ತವರು ಜಿಲ್ಲೆಯಲ್ಲಿ ಅತಿ ಹೆಚ್ಚು ಮತಗಳ ಮುನ್ನಡೆ ಕೊಡಿಸಲು ಕಾರ್ಯಕರ್ತರು ಶ್ರಮ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದ ಕರ್ನಾಟಕ ಸಂಘದ ಕೆವಿಎಸ್ ಭವನದಲ್ಲಿ ನಡೆದ ಕಾಂಗ್ರೆಸ್‌ನ ವಿವಿಧ ಬ್ಲಾಕ್ ಘಟಕಗಳ ಮುಂಚೂಣಿ ನಾಯಕರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲ ತಾಲೂಕುಗಳ ಮತದಾರರನ್ನು ಭೇಟಿ ಮಾಡಿ ನಮ್ಮ ಸರ್ಕಾರದ ಜನಪರ ಯೋಜನೆಗಳನ್ನು ತಿಳಿಸಬೇಕು ಎಂದು ಕರೆ ನೀಡಿದರು.

ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಮತದಾರರ ಮನವೊಲಿಸುವ ಪ್ರಯತ್ನ ಮಾಡಬೇಕು. ಜೊತೆಗೆ ಮತದಾನದ ದಿನ ಮತಕೇಂದ್ರದ ಬಳಿ ಕನಿಷ್ಠ 100 ಮಂದಿ ಇದ್ದು, ಸಂಜೆವರೆಗೂ ಮತದಾರರ ಮನವೊಲಿಸುವ ಕೆಲಸ ಮಾಡುವ ಜವಾಬ್ದಾರಿಯನ್ನು ನಿರ್ವಹಿಸಬೇಕು. ಮರಿತಿಬ್ಬೇಗೌಡರಿಗೆ ಅವರದ್ದೇ ಆದ ಒಂದು ತಂಡ ಇದೆ. ಗಂಭೀರವಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಪಕ್ಷದ ಚಿಹ್ನೆ ಕೊಟ್ಟು ನಿಲ್ಲಿಸಿದ್ದೇವೆ. ಮರಿತಿಬ್ಬೇಗೌಡರು ಆಯ್ಕೆಯಾದರೆ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ ಎಂದು ತಿಳಿಸಿದರು.

ಚುನಾವಣೆ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಮರಿತಿಬ್ಬೇಗೌಡರು ಕ್ಷೇತ್ರದಲ್ಲಿ ಸಮರ್ಥರಿದ್ದಾರೆ. ನಮ್ಮ ಪಕ್ಷ ಮತ್ತು ಅವರ ಒಡನಾಟದಲ್ಲಿರುವ ಮತದಾರರು ಬಹಳಷ್ಟು ಹೋರಾಟ ಮಾಡುತ್ತಿದ್ದಾರೆ. ಮರಿತಿಬ್ಬೇಗೌಡರು ಮೊದಲು ಕಾಂಗ್ರೆಸ್‌ನಲ್ಲಿಯೇ ಇದ್ದರು. ನಂತರ ಜೆಡಿಎಸ್‌ಗೆ ಹೋಗಿ ಮತ್ತೆ ಕಾಂಗ್ರೆಸ್‌ಗೆ ಬಂದಿದ್ದಾರೆ. ಅಂದಿನಿಂದ ಮದ್ದೂರು ಹಾಗೂ ಮಳವಳ್ಳಿಯ ಕ್ಷೇತ್ರದ ರಾಜಕೀಯ ಪರಿಸ್ಥಿತಿಯಲ್ಲಿ ವ್ಯತ್ಯಾಸವಾಯಿತು ಎಂದರು.

ಜಿಲ್ಲೆಯಲ್ಲಿ ಸದೃಢವಾದ ಕಾಂಗ್ರೆಸ್ ಕಟ್ಟಲು ಕೆಲಸ ಮಾಡಿದ್ದೇವೆ. ಲೋಕಸಭಾ ಫಲಿತಾಂಶ ನೂರಕ್ಕೆ ನೂರಷ್ಟು ನಮ್ಮ ಪರ ಬರುವ ವಿಶ್ವಾಸವಿದೆ. ಆದರೂ ಕಾಂಗ್ರೆಸ್ ಕಾರ್ಯಕರ್ತರ ದನಿ ಕಡಿಮೆಯಾಗಿದೆ ಎಲ್ಲೋ ಒಂದು ಕಡೆ ಭಯ ಇರಬಹುದು. ಏನೇ ಆದರೂ ಲೋಕಸಭಾ ಚುನಾವಣೆಯ ಫಲಿತಾಂಶ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಪಿ.ರವಿಕುಮಾರ್‌ಗೌಡ, ಮಾಜಿ ಶಾಸಕರಾದ ಎಂ.ಶ್ರೀನಿವಾಸ್, ಎಚ್.ಬಿ.ರಾಮು, ಅಪ್ಪಾಜಿಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಬಿ.ಎಲ್.ದೇವರಾಜು, ಎಚ್.ಕೆ.ರುದ್ರಪ್ಪ, ಅಂಜನಾಶ್ರೀ ಕಾಂತ್, ಸಿ.ಕೆನಾಗರಾಜು, ಅಶೋಕ್, ಕೀಲಾರ ಜಯರಾಂ, ಬೆಳ್ಳೂರು ಶಿವರಾಂ ಸೇರಿದಂತೆ ಮತ್ತಿತರರಿದ್ದರು.

ಮಳೆಯಿಂದ ಮನೆ ಕುಸಿತ: ಕುಟುಂಬ ಪಾರು



ಶ್ರೀರಂಗಪಟ್ಟಣ, ಮೇ 25– ಶುಕ್ರವಾರ ತಡರಾತ್ರಿ ಸುರಿದ ಭಾರಿ ಬಿರುಗಾಳಿ ಸಹಿತ ಮಳೆಗೆ ಮನೆ ಗೋಡೆ ಕುಸಿತಗೊಂಡು ಮನೆಯಲ್ಲಿ ಮಲಗಿದ್ದವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ಗೌರಿಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಲೇಟ್ ಶ್ರೀನಿವಾಸು ಎಂಬುವರ ಪತ್ನಿ ಚಿಕ್ಕ ಕರಗಮ್ಮ ಎಂಬುವವರಿಗೆ ಸೇರಿದ ಮನೆ ಮಳೆಯಿಂದಾಗಿ ಸಂಪೂರ್ಣ ಕುಸಿತಗೊಂಡಿದೆ. ಮನೆಯಲ್ಲಿದ್ದ ಪಾತ್ರೆ, ದವಸ–ಧಾನ್ಯ ಸೇರಿದಂತೆ ಇತರೆ ಪದಾರ್ಥಗಳು ಮಣ್ಣು ಪಾಲಾಗಿದೆ. ಬಡ ಕುಟುಂಬ ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಮಳೆ ಗಾಳಿ ಬೀಸಿದ್ದರಿಂದ ಮನೆಗೋಡೆ ಬಿರುಕುಗೊಂಡು ಒಂದೊಂದಾಗಿ ಕುಸಿಯುತ್ತಿದಂತೆ ಮಲಗಿದ್ದವರು ಎದ್ದು ಹೊರಬಂದು ಅಕ್ಕಪಕ್ಕದ ಜನರನ್ನು ಕೂಗಿ ಸಹಾಯಕ್ಕೆ ಕರೆದಿದ್ದಾರೆ.

ನಂತರ ಅಕ್ಕಪಕ್ಕದವರು ಬಂದು ಮನೆ ಸ್ಥಿತಿ ನೋಡಿ ಮರುಕದಿಂದ ತಮ್ಮ ಮನೆಗಳಲ್ಲಿ ಇರುವಂತೆ ಆಶ್ರಯ ನೀಡಿದ್ದಾರೆ. ಇದೀಗ ಮನೆ ಗೋಡೆ ಸಹಿತ ಮನೆಯ ತೊಲೆ ಜಂತಿ ಮರಗಳು ಮುರಿದಿದ್ದು, ಕಂದಾಯ ಅಧಿಕಾರಿಗಳು, ಗ್ರಾಪಂ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ ಯಾರೊಬ್ಬರೂ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದು ಗ್ರಾಮಸ್ಥರು ಆಪಾದಿಸಿದ್ದಾರೆ. ಜೊತೆಗೆ ಮನೆ ಕಳೆದುಕೊಂಡಿರುವ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು, ಮೇ 25– ಡಾ.ವಿ.ಗಿರೀಶ್ ನಾಯಕ್ ಅವರ ಮಾರ್ಗದರ್ಶನದಲ್ಲಿ ಹೆಚ್.ಎಸ್. ಕೃತಿಕಾ ಅವರು ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸುಂದ್ರಮ್ಮ ನಿಧನ



ಭಾರತೀನಗರ, ಮೇ 25– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದ ನಿವಾಸಿ ಲೇ॥ಪುಟ್ಟಸ್ವಾಮಿ ಅವರ ಪತ್ನಿ ಸುಂದ್ರಮ್ಮ (60) ಅನಾರೋಗ್ಯದಿಂದ ಶನಿವಾರ ಸಂಜೆ ನಿಧನ ಹೊಂದಿದ್ದಾರೆ.

ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ತಮ್ಮ ಜಮೀನಿನಲ್ಲಿ ಭಾನುವಾರ ಬೆಳಿಗ್ಗೆ 10.30ಕ್ಕೆ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮಟ್ಕಾ ಜೂಜಾಟದಲ್ಲಿ ವಿಚಾರಣೆಗೆ ಕರೆತಂದ ವ್ಯಕ್ತಿ ಸಾವು

ಚನ್ನಗಿರಿ ಪೊಲೀಸ್ ಠಾಣೆ ಧ್ವಂಸಗೊಳಿಸಿದ ಉದ್ರಿಕ್ತ ಗುಂಪು

● 11 ಪೊಲೀಸರಿಗೆ ಗಾಯ; ಹಲವು ಪೊಲೀಸ್ ವಾಹನ ಜಖಂ ● ಠಾಣೆ ಮೇಲೆ ದಾಳಿ ನಡೆಸಿದ ಹತ್ತು ಮಂದಿ ಪೊಲೀಸ್ ವಶಕ್ಕೆ



ದಾವಣಗೆರೆ, ಮೇ 25– ಮಟ್ಕಾ ಜೂಜಾಟ ಪ್ರಕರಣದ ವಿಚಾರಣೆಗೆಂದು ಕರೆತಂದಿದ್ದ ವ್ಯಕ್ತಿಯೊಬ್ಬ ಪೊಲೀಸ್ ವಶದಲ್ಲಿದ್ದಾಗಲೇ ಮೃತಪಟ್ಟ ಹಿನ್ನೆಲೆಯಲ್ಲಿ ಪೊಲೀಸರೇ ಹೊಡೆದು ಕೊಂದಿದ್ದಾರೆಂದು ಆರೋಪಿಸಿ ದುಷ್ಕರ್ಮಿಗಳು ಪೊಲೀಸ್ ಠಾಣೆಯ ಮೇಲೆ ಕಲ್ಲು ತೂರಿ, ಪೊಲೀಸ್ ವಾಹನಗಳನ್ನು ಜಖಂಗೊಳಿಸಿದ ಘಟನೆ ದಾವಣಗೆರೆ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಈ ಘಟನೆಯಲ್ಲಿ 11 ಮಂದಿ ಪೊಲೀಸರು ಗಾಯಗೊಂಡಿದ್ದು, ಹಲವಾರು ಪೊಲೀಸ್ ವಾಹನಗಳು ಜಖಂಗೊಂಡಿವೆ. ಠಾಣೆ ಮೇಲೆ ಕಲ್ಲು ತೂರಾಟ ನಡೆಸಿ, ದಾಂಧಲೆ ಮಾಡಿದ 10 ಮಂದಿಯನ್ನು ಇಂದು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಚನ್ನಗಿರಿ ಪಟ್ಟಣದ ಟಿಪ್ಪು ನಗರದ ನಿವಾಸಿ, ಬಡಿಗೆ ಕೆಲಸಗಾರ ಆದಿಲ್(32 ವರ್ಷ) ಮೃತ ವ್ಯಕ್ತಿ. ಮಟ್ಕಾ ಚೀಟಿ ಬರೆಯುತ್ತಿದ್ದ ಶಂಕೆಯಿಂದ ಪೊಲೀಸರು ಆದಿಲ್‌ನನ್ನು ಮಧ್ಯಾಹ್ನ ಠಾಣೆಗೆ ಕರೆ ತಂದು, ವಿಚಾರಣೆಗೊಳಪಡಿಸಿ, ಸಂಜೆ ಒಳಗಾಗಿ ವಶದಲ್ಲಿದ್ದ ಆದಿಲ್‌ನನ್ನು ಕೋರ್ಟ್‌ಗೆ ಹಾಜರುಪಡಿಸಲು ಪೊಲೀಸರು ಮುಂದಾಗಿದ್ದರು ಎನ್ನಲಾಗಿದೆ. ಈ ಹಂತದಲ್ಲಿ ಆದಿಲ್ ಕುಸಿದು ಬಿದ್ದಿದ್ದಾನೆ. ತಕ್ಷಣವೇ ಪೊಲೀಸರು ಚಿಕಿತ್ಸೆಗೆಂದು ಆಸ್ಪತ್ರೆಗೆ ಕರೆದೊಯ್ದಾಗ ಆತ ಸಾವನ್ನಪ್ಪಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ.

ಅತ್ತ ಆದಿಲ್‌ನ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಕುಟುಂಬ ಸದಸ್ಯರು ಆದಿಲ್ ಸಾವನ್ನಪ್ಪಿದ ಸುದ್ದಿ ತಿಳಿದು ಆಸ್ಪತ್ರೆ ಬಳಿ ದೌಡಾಯಿಸಿದ್ದಾರೆ. ಆದಿಲ್ ಸಾವನ್ನಪ್ಪಿದ್ದಾನೆಂಬ ವಿಚಾರ ಒಬ್ಬರಿಂದ ಒಬ್ಬರಿಗೆ, ಸೋಷಿಯಲ್ ಮೀಡಿಯಾಗಳಲ್ಲಿ ಹರಿದಾಡಿ, ಸುಮಾರು 500ಕ್ಕೂ ಹೆಚ್ಚು ಜನರು ಚನ್ನಗಿರಿ ಪೊಲೀಸ್ ಠಾಣೆಯ ಮುಂದೆ ಜಮಾಯಿಸಿದ್ದರು.

ಬಡಿಗೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ಆದಿಲ್‌ನನ್ನು ಮಟ್ಕಾ ಕೇಸ್ ವಿಚಾರಣೆಗೆಂದು ಠಾಣೆಗೆ ಕರೆದೊಯ್ದು, ಅಮಾನುಷವಾಗಿ, ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದರಿಂದ ಆತ ಸಾವನ್ನಪ್ಪಿದ್ದಾನೆ ಇದು ಸಹಜವಾದ ಸಾವಲ್ಲ. ಪೊಲೀಸ್ ವಶದಲ್ಲಿದ್ದಾಗ ಪೊಲೀಸ್ ಠಾಣೆಯಲ್ಲೇ ಆದಿಲ್ ಸಾವನ್ನಪ್ಪಿದ್ದಾನೆ. ಆದರೆ, ಪೊಲೀಸರು ಅದನ್ನೆಲ್ಲಾ ಮರೆಮಾಚಲು ಚನ್ನಗಿರಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ ಎಂದು ಠಾಣೆ ಬಳಿ ಒಂದು ಸಮಾಜದ ಮುಖಂಡರು, ಕುಟುಂಬದವರು ಆಕ್ರೋಶ ವ್ಯಕ್ತಪಡಿಸಿದರು.

ಠಾಣೆ ಮುಂದೆ ನೂರಾರು ಜನರು ಮೃತ ಆದಿಲ್ ಶವದ ಸಮೇತ ಪ್ರತಿಭಟಿಸುತ್ತಿದ್ದ ವಿಚಾರ ತಿಳಿದು, ಮತ್ತಷ್ಟು ಜನರು ಠಾಣೆ ಬಳಿ ಜಮಾಯಿಸಿದ್ದಾರೆ. ಠಾಣೆ ಮುಂದೆ ಪ್ರತಿಭಟಿಸುವ ಜೊತೆಗೆ ಆದಿಲ್ ಸಾವಿಗೆ ಕಾರಣರಾದ ಅಧಿಕಾರಿ, ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಎಸ್‌ಪಿ, ಐಜಿಪಿ ಸ್ಥಳಕ್ಕೆ ಧಾವಿಸಬೇಕು ಎಂದು ಪಟ್ಟುಹಿಡಿದರು. ಸ್ಥಳ ಬಿಟ್ಟು ಕದಲುವುದಿಲ್ಲ ಎಂದ ಪ್ರತಿಭಟನಾಕಾರರು ತಡರಾತ್ರಿವರೆಗೂ ಚನ್ನಗಿರಿ ಪೊಲೀಸ್ ಠಾಣೆಯ ಮುಂದೆ ಅಪಾರ ಸಂಖ್ಯೆಯಲ್ಲಿ ಸೇರಿದ್ದರು. ಆದಿಲ್ ಸಾವಿಗೆ ತೀವ್ರ ಆಕ್ರೋಶ ವ್ಯಕ್ತವಾಯಿತು. ಒಂದು ಗುಂಪು ಚನ್ನಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿ, ಐದು ಪೊಲೀಸ್ ಜೀಪ್, ಎರಡು ಖಾಸಗಿ ವಾಹನ ಜಖಂಗೊಳಿಸಿದೆ. ಅಲ್ಲದೇ ಪೊಲೀಸ್ ಜೀಪ್ ಉರುಳಿಸಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲು ಯತ್ನಿಸಿದೆ. ಅಷ್ಟರಲ್ಲಿ ಪೊಲೀಸರು ಅಲರ್ಟ್ ಆಗಿದ್ದಾರೆ. ಗುಂಪು ಚದುರಿಸಲು ಲಾಠಿ ಚಾರ್ಜ್ ಮಾಡಿದ ಪೊಲೀಸರು. ಬಳಿಕ ಇಡೀ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಗಲಭೆಕೋರರ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮರಿತಿಬ್ಬೇಗೌಡ ಪರ ಮತ ಯಾಚನೆ




ಮೈಸೂರು,ಮೇ 25(ಪಿಎಂ)– ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಶನಿವಾರ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಮತಯಾಚಿಸಿದರು.

ಕೆಆರ್ ಕ್ಷೇತ್ರ ವ್ಯಾಪ್ತಿಯ ಕುವೆಂಪುನಗರದ ಕಾಗಿನೆಲೆ ಮಹಾಶಿಕ್ಷಣ ಸಂಸ್ಥೆ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಉಪನ್ಯಾಸಕ ಬಂಧುಗಳಲ್ಲಿ ಮತ ಯಾಚಿಸಿದರು. ಈ ವೇಳೆ ಎಂ.ಕೆ. ಸೋಮಶೇಖರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ನುಡಿದಂತೆ ನಡೆದಿದ್ದಾರೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಸುಶಿಕ್ಷಿತರು ಸಹ ಮರಿತಿಬ್ಬೇಗೌಡರನ್ನು ಬೆಂಬಲಿಸಿದರೆ ಸಿದ್ದರಾಮಯ್ಯನವರ ಜನಪರ ಆಡಳಿತಕ್ಕೆ ಕೈಜೋಡಿಸಿದಂತಾಗುತ್ತದೆ ಎಂದರು.

ಹೆಚ್.ಎ.ವೆಂಕಟೇಶ್ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಎಲ್ಲಾ ಅವಧಿಯಲೂ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡಿದೆ. ಮರಿತಿಬ್ಬೇಗೌಡರನ್ನು ಬೆಂಬಲಿಸಿದರೆ ಶಿಕ್ಷಕರ ಹಿತಕ್ಕಾಗಿ ಅವರು ಕಟಿಬದ್ಧರಾಗಿ ದುಡಿಯುತ್ತಾರೆ ಎಂದು ಹೇಳಿದರು. ಕೆಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮುಖಂಡರಾದ ವಿಶ್ವನಾಥ್(ವಿಶ್ವ), ರವಿಶಂಕರ್, ಆನಂದ್, ಉಪನ್ಯಾಸಕರಾದ ಡಾ.ಕೆ.ಕೆ. ವಿಶಾಲಾಕ್ಷಿ, ದಿವ್ಯ, ಶರತ್ ಕುಮಾರ್, ಪ್ರೇಮ್ ಕುಮಾರ್ ಮತ್ತಿತರರು ಹಾಜರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ವಿವೇಕಾನಂದರ ಪರ ಪ್ರಚಾರಕ್ಕೆ ಮಂಡ್ಯದಲ್ಲಿ ಚುನಾವಣಾ ಕಚೇರಿ ಆರಂಭ


ಮಂಡ್ಯದಲ್ಲಿ ತಾಲೂಕು ಚುನಾವಣಾ ಕಚೇರಿ ಉದ್ಘಾಟಿಸಿದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು, ಕರಪತ್ರ ನೀಡುವ ಮೂಲಕ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚಿಸಿದರು


ಮಂಡ್ಯದ ಪಿಇಎಸ್ ಶಿಕ್ಷಣ ಸಂಸ್ಥೆಯಲ್ಲಿ ಮತಯಾಚಿಸಿದ ವೇಳೆ ಜಿ.ಟಿ.ದೇವೇಗೌಡರನ್ನು ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು.

ಮಂಡ್ಯ, ಮೇ 25– ವಿಧಾನಪರಿಷತ್ ಚುನಾವಣೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಗೆಲುವಿಗೆ ಕಾರ್ಯತಂತ್ರ ರೂಪಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ತಾಲೂಕು ಚುನಾವಣಾ ಕಚೇರಿಯನ್ನು ಆರಂಭಿಸಲಾಗಿದೆ.

ಮಂಡ್ಯದ ವಿದ್ಯಾನಗರದಲ್ಲಿ ತೆರೆಯಲಾಗಿರುವ ತಾಲೂಕು ಚುನಾವಣಾ ಕಚೇರಿಯನ್ನು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರಾದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಇದೇ ವೇಳೆ ಸಭೆಯಲ್ಲಿ ಮಾತನಾಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಕೆ.ವಿವೇಕಾನಂದ ಅವರ ಗೆಲುವಿಗೆ ಪ್ರತಿಯೊಬ್ಬರೂ ಶ್ರಮಿಸಬೇಕು. ಮತದಾರರನ್ನು ಭೇಟಿಯಾಗಿ ಬೆಂಬಲ ಕೋರಬೇಕು. ಹೆಚ್ಚು ಅಂತರದೊಂದಿಗೆ ಗೆಲುವು ಸಾಧಿಸಲು ಎಲ್ಲರ ಸಹಕಾರ ಬಹಳ ಮುಖ್ಯ ಎಂದರು.

ಈ ವೇಳೆ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ, ಮಂಡ್ಯ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರು, ಬಿಜೆಪಿ ಪಕ್ಷದ ಶ್ರೀರಂಗಪಟ್ಟಣ ಮಂಡಲ ಅಧ್ಯಕ್ಷ ಅಭಿನವ ಭಾರತಿ ಸಂಸ್ಥೆಯ ಅಧ್ಯಕ್ಷ ಶಿವಮೂರ್ತಿ, ಆರ್‌ಎಸ್‌ಎಸ್ ಮುಖಂಡ ರಾಜು, ಎಬಿವಿಪಿಯ ನಾಗೇಂದ್ರರಾವ್, ಖಾಸಗಿ ಅನುದಾನ ರಹಿತ ಶಾಲಾ ಕಾಲೇಜುಗಳ ಕರ್ನಾಟಕ ರಾಜ್ಯ ಅಧ್ಯಕ್ಷ ನಾಗರಾಜು ಸೇರಿದಂತೆ ಹಲವು ಮುಖಂಡರು, ಶಿಕ್ಷಕರು, ಅಧ್ಯಾಪಕರು ಉಪಸ್ಥಿತರಿದ್ದರು.

ಮತಯಾಚನೆ: ನಗರದ ಪಿಇಎಸ್ ಶಿಕ್ಷಣ ಸಂಸ್ಥೆಗೆ ಜಿ.ಟಿ.ದೇವೇಗೌಡರು ಭೇಟಿ ನೀಡಿ, ಕೆ.ವಿವೇಕಾನಂದ ಪರ ಮತಯಾಚಿಸಿದರು. ಸಂಸ್ಥೆಯ ಅಧ್ಯಕ್ಷ ವಿಜಯಾನಂದ ಹಾಗೂ ಶಿಕ್ಷಕರೊಂದಿಗೆ ಸಮಾಲೋಚನೆ ನಡೆಸಿ, ಶಿಕ್ಷಕರ ಹಿತದೃಷ್ಟಿಯಿಂದ ಮೈತ್ರಿ ಅಭ್ಯರ್ಥಿಗೆ ಮೊದಲ ಪ್ರಾಶಸ್ತ್ಯದ ಮತ ನೀಡುವಂತೆ ಮನವಿ ಮಾಡಿದರು.

ಬಳಿಕ ಮಾಂಡವ್ಯ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ, ಸಂಸ್ಥೆಯ ಅಧ್ಯಕ್ಷ ಶಿವಲಿಂಗಯ್ಯ ಹಾಗೂ ಶಿಕ್ಷಕ ವೃಂದದ ಬೆಂಬಲ ಕೋರಿದರು. ಮಂಡ್ಯ ಜೆಡಿಎಸ್ ಜಿಲ್ಲಾಧ್ಯಕ್ಷ ರಮೇಶ್, ಅಭ್ಯರ್ಥಿ ಕೆ.ವಿವೇಕಾನಂದ, ಮಂಡ್ಯ ಡೈರಿ ಮಾಜಿ ಅಧ್ಯಕ್ಷ, ಜೆಡಿಎಸ್ ಮುಖಂಡ ರಾಮಚಂದ್ರ, ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಜೊತೆಯಲ್ಲಿದ್ದರು.

ಆಗ್ನೇಯ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ನಾರಾಯಣಸ್ವಾಮಿ ಪರ ಜಿಟಿಡಿ ಪ್ರಚಾರ


ತುಮಕೂರಿನಲ್ಲಿ ಆಗ್ನೇಯ ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಪ್ರಚಾರ ಸಭೆಯಲ್ಲಿ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಭಾಗವಹಿಸಿದ್ದರು.

ತುಮಕೂರು, ಮೇ.25– ವಿಧಾನಪರಿಷತ್ ಆಗ್ನೇಯ ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿಕೂಟ(ಎನ್‌ಡಿಎ)ದ ಅಭ್ಯರ್ಥಿ ವೈ.ಎ.ನಾರಾಯಣಸ್ವಾಮಿ ಪರ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತಬೇಟೆ ನಡೆಸಿದರು.

ಇಲ್ಲಿನ ಶಿರಾ ಗೇಟ್ ರಸ್ತೆಯ ಸ್ನೇಹ ಸಂಗಮ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿ.ಟಿ.ದೇವೇಗೌಡರು ಮಾತನಾಡಿ, ರಾಜ್ಯದ ಆರು ವಿಧಾನಪರಿಷತ್ ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳ ಗೆಲುವಿಗೆ ಉಭಯ ಪಕ್ಷದ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಸಭೆಯಲ್ಲಿ ಮಾಜಿ ಸಚಿವರಾದ ಸಿ.ಟಿ.ರವಿ, ನಾಡಗೌಡ, ಅಭ್ಯರ್ಥಿ ವೈ.ಎನ್.ನಾರಾಯಣಸ್ವಾಮಿ, ಶಾಸಕರಾದ ಸುರೇಶ್‌ಗೌಡ, ಜ್ಯೋತಿ ಗಣೇಶ್, ವಿಧಾನಪರಿಷತ್ ಸದಸ್ಯರಾದ ತಿಪ್ಪೇಸ್ವಾಮಿ, ಚಿದಾನಂದ ಗೌಡರು, ಬಿಜೆಪಿ ಜಿಲ್ಲಾಧ್ಯಕ್ಷ ಹೆಬ್ಬಾಕ ರವಿ, ಜೆಡಿಎಸ್ ಜಿಲ್ಲಾಧ್ಯಕ್ಷ ಅಂಜನಪ್ಪ, ಮಾಜಿ ಶಾಸಕ ಶಿವಶಂಕರ್ ಸೇರಿದಂತೆ ಉಭಯ ಪಕ್ಷಗಳ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಡಾ.ಯತೀಂದ್ರ, ಡಾ.ವಿಜಯಕುಮಾರ್‌ಗೆ ಎಂಎಲ್‌ಸಿ ಸ್ಥಾನ ನೀಡುವಂತೆ ಆಗ್ರಹ

ಮೈಸೂರಿನಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ನಿರ್ಣಯ



ಮೈಸೂರು, ಮೇ 25(ಬಿಎಲ್‌ಯು)– ಮೈಸೂರು ಜಿಲ್ಲೆಯವರಾದ ಮಾಜಿ ಶಾಸಕ ಡಾ.ಯತೀಂದ್ರ ಹಾಗೂ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡುವಂತೆ ಮೈಸೂರಿನಲ್ಲಿ ಇಂದು ನಡೆದ ದುಂಡು ಮೇಜಿನ ಸಭೆ ಆಗ್ರಹಿಸಿದೆ.

ನಗರದ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಪ್ರಗತಿಪರ ಸಂಘಟನೆಗಳ ವೇದಿಕೆ ಸಂಯುಕ್ತವಾಗಿ ದುಂಡು ಮೇಜಿನ ಸಭೆ ಆಯೋಜಿಸಿದ್ದವು.

ಪ್ರಧಾನಮಂತ್ರಿ ನರೇಂದ್ರ ಮೋದಿ ನಿರ್ಗಮನ ಸೂರ್ಯ ಚಂದ್ರರಷ್ಟೆ ಸತ್ಯವಾಗಿದೆ. ನಮ್ಮ ದೇಶಕ್ಕೆ ಬುದ್ಧಿವಂತ ನಾಯಕರ ಅವಶ್ಯವಿದೆ. ಡಾ.ಯತೀಂದ್ರ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಎನ್ನುವುದಕ್ಕಿಂತ ಶಾಸಕರಾಗಿದ್ದ ಸಮಯದಲ್ಲಿ ಸದನದ ಒಳಗೆ ಹಾಗೂ ಹೊರಗೆ ಜನಪರ ಹೋರಾಟ ಮಾಡಿದ್ದಾರೆ. ಡಾ.ವಿಜಯ ಕುಮಾರ್ ಕೂಡ ಕಾಂಗ್ರೆಸ್‌ಗೆ ಗೌರವ ತಂದು ಕೊಡುವ ಹಾಗೆ ಕೆಲಸ ಮಾಡಿದ್ದು, ಇಬ್ಬರನ್ನು ವಿಧಾನಪರಿಷತ್ ಆಯ್ಕೆ ಮಾಡಬೇಕು ಎಂದು ಪ್ರಗತಿಪರ ಚಿಂತಕ ಪ್ರೊ.ಮಹೇಶ್ ಚಂದ್ರಗುರು ಆಗ್ರಹಿಸಿದರು.

ತರುವಾಯ ಮಾತನಾಡಿದ ಪ್ರೊ.ಕಾಳೇಗೌಡ ನಾಗವಾರ, ಈಗಿರುವ ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸ್ ಸಂವಿಧಾನ ಪರವಾಗಿದೆ. ಈ ಹಿನ್ನೆಲೆಯಲ್ಲಿ ನಾವೆಲ್ಲಾ ಕಾಂಗ್ರೆಸ್ ಬೆಂಬಲಿಸುತ್ತಿದ್ದೇವೆ. ಡಾ.ಯತೀಂದ್ರ ಹಾಗೂ ಡಾ.ವಿಜಯಕುಮಾರ್ ಜನರ ಪರವಾಗಿ ಒಳ್ಳೆಯ ಕೆಲಸ ಮಾಡುತ್ತಿದ್ದು, ಇಬ್ಬರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿದರು. ಡಾ.ಯತೀಂದ್ರ ಹಾಗೂ ಡಾ.ವಿಜಯಕುಮಾರ್ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಬೇಕೆಂದು ದುಂಡು ಮೇಜಿನ ಸಭೆಯಲ್ಲಿ ಒಂದಂಶದ ನಿರ್ಣಯ ಕೈಗೊಳ್ಳಲಾಯಿತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ನಿರ್ಣಯ ಪತ್ರ ಕಳುಹಿಸಲು ತೀರ್ಮಾನಿಸಲಾಯಿತು. ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ಲೇಖಕ ನಾ.ದಿವಾಕರ್, ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಸಭೆಯಲ್ಲಿ ಹಾಜರಿದ್ದರು.

ಉತ್ತಮ ಜೀವನ ಶೈಲಿ ದೀರ್ಘಾಯುಷ್ಯಕ್ಕೆ ಕಾರಣವಾಗಬಹುದು

● ಹಿರಿಯ ವೈದ್ಯ ಡಾ.ಸಿ.ಡಿ.ಶ್ರೀನಿವಾಸಮೂರ್ತಿ ಕಿವಿಮಾತು ● ಹಿತ–ಮಿತ ಆಹಾರ; ನಿಯಮಿತ ವ್ಯಾಯಾಮ ಉತ್ತಮ ಆರೋಗ್ಯಕ್ಕೆ ಅವಶ್ಯ

ಮೈಸೂರು, ಮೇ 25(ಎಂಕೆ)– ಮನುಷ್ಯನಿಗೆ ವಯಸ್ಸಾಗುವುದು ಸ್ವಾಭಾವಿಕ ಹಾಗೂ ನೈಸರ್ಗಿಕ ಪ್ರಕ್ರಿಯೆ. ಡಿವಿಜಿಯವರ 'ಗೌರವಿಸು ಜೀವನವ, ಗೌರವಿಸುವ ಚೇತನವ' ನುಡಿಯಂತೆ ಆರೋಗ್ಯಕರ ಹಾಗೂ ನೆಮ್ಮದಿಯ ಉತ್ತಮ ಜೀವನ ಶೈಲಿ ದೀರ್ಘಾಯುಷ್ಯಕ್ಕೆ ಕಾರಣವಾಗಬಹುದು ಎಂದು ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ.ಸಿ.ಡಿ. ಶ್ರೀನಿವಾಸಮೂರ್ತಿ ಹೇಳಿದರು.



ಸರಸ್ವತಿಪುರಂನಲ್ಲಿರುವ ಕಾಮಾಕ್ಷಿ ಆಸ್ಪತ್ರೆ ಸಭಾಂಗಣದಲ್ಲಿ 'ವಯಸ್ಸಾಗುವಿಕೆ ಮತ್ತು ದೀರ್ಘಾಯುಷ್ಯ' ಕುರಿತು ಆಸ್ಪತ್ರೆ ಹಿರಿಯ ವೈದ್ಯರಾದ ಡಾ.ಸಿ.ಡಿ.ಶ್ರೀನಿವಾಸಮೂರ್ತಿ ವಿಶೇಷ ಉಪನ್ಯಾಸ ನೀಡಿದರು. ಚಿತ್ರದಲ್ಲಿ(ಕುಳಿತಿರುವವರಲ್ಲಿ ಎಡದಿಂದ) ಕಾಮಾಕ್ಷಿ ಆಸ್ಪತ್ರೆ ಹಿರಿಯ ಶಸ್ತ್ರಚಿಕಿತ್ಸಾ ತಜ್ಞ ಡಾ.ಪಿ.ಜಿ.ನರಸಿಂಹನ್, ಮ್ಯಾನೇಜಿಂಗ್ ಟ್ರಸ್ಟಿ ಮಹೇಶ್ ಶೆಣೈ, 'ಮೈಸೂರು ಮಿತ್ರ' ಹಾಗೂ ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞ ಡಾ.ಕುಮಾರ್ ಮತ್ತಿತರರನ್ನು ಕಾಣಬಹುದು.

ಜೀವನವನ್ನು ಗೌರವಿಸಿ...

ಅನುವಂಶೀಯತೆಯಿಂದಲೂ ನಮ್ಮ ಆಯುಸ್ಸು ಹೆಚ್ಚಾಗಿರುವ ಸಾಧ್ಯತೆಗಳಿವೆ. ಆದರೆ ಅನುವಂಶೀಯತೆ ಜೊತೆಗೆ ಉತ್ತಮ ಹಾಗೂ ಆರೋಗ್ಯಕರ ಜೀವನ ಶೈಲಿಯಿಂದ ದೀರ್ಘಾಯುಷ್ಯ ಪ್ರಾಪ್ತಿಯಾಗುವುದು. ಜೀವನವನ್ನು ಗೌರವಿಸುವುದು, ಜೀವನ ಚೇತನವನ್ನು ಗೌರವಿಸಿದರೆ ದೀರ್ಘಕಾಲದವರೆಗೆ ಸಂತೋಷಕರ, ನೆಮ್ಮದಿಯ ಜೀವನ ಸಾಗಿಸಬಹುದು.

– ಡಾ.ಸಿ.ಡಿ.ಶ್ರೀನಿವಾಸ್ ಮೂರ್ತಿ, ಹಿರಿಯ ವೈದ್ಯರು, ಕಾಮಾಕ್ಷಿ ಆಸ್ಪತ್ರೆ

ನಗರದ ಸರಸ್ವತಿಪುರಂನಲ್ಲಿರುವ ಕಾಮಾಕ್ಷಿ ಆಸ್ಪತ್ರೆ ಸಭಾಂಗಣದಲ್ಲಿ 'ವಯಸ್ಸಾಗುವಿಕೆ ಮತ್ತು ದೀರ್ಘಾಯುಷ್ಯ' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ವಯಸ್ಸಾಗುವಿಕೆ ಸ್ವಾಭಾವಿಕ ಹಾಗೂ ನೈಸರ್ಗಿಕವಾಗಿ ನಡೆಯುವ ಪ್ರಕ್ರಿಯೆ ಆಗಿದೆ. ಆದರೆ ದೀರ್ಘಕಾಲದವರೆಗೆ ಆರೋಗ್ಯಕರ ಜೀವನ ಸಾಗಿಸಲು ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಅತೀ ಮುಖ್ಯವಾಗಿದೆ ಎಂದರು.

ವಯಸ್ಸಾದಂತೆ ದೈಹಿಕ ಮತ್ತು ಮಾನಸಿಕವಾಗಿ ಶಕ್ತಿ ಕಡಿಮೆಯಾಗುವುದು ಸಹಜ ಪ್ರಕ್ರಿಯೆಯಾದರೂ ದೀರ್ಘಾಯುಷ್ಯಕ್ಕೆ ಆರೋಗ್ಯಕರ ಮತ್ತು ಸಂತೋಷದಾಯಕವಾದ ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು. ಸ್ವಾತಂತ್ರ್ಯಕ್ಕೂ ಮುನ್ನ ಅಂದರೆ 1928ರ ಅವಧಿಯಲ್ಲಿ ಮನುಷ್ಯನ ಆಯುಸ್ಸು ತುಂಬಾ ಕಡಿಮೆ ಇತ್ತು. ಆದರೆ ಇಂದು ಮನುಷ್ಯನ ಆಯುಸ್ಸು ಸರಾಸರಿ 72 ವರ್ಷವಾಗಿದೆ. ಅದರಲ್ಲಿಯೂ ಚೀನಾ, ಜಪಾನ್‌ನಂತಹ ದೇಶಗಳಲ್ಲಿ ನೂರು ವರ್ಷಗಳು ಹಾಗೂ ಅದಕ್ಕಿಂತ ಹೆಚ್ಚು ವರ್ಷ ಬದುಕುತ್ತಾರೆ. ಇದಕ್ಕೆ ಅವರು ಅಳವಡಿಸಿಕೊಂಡಿರುವ ಜೀವನ ಶೈಲಿ, ಆಹಾರ ಕ್ರಮ ಪ್ರಮುಖ ಕಾರಣವಾಗಿದೆ ಎಂದು ತಿಳಿಸಿದರು.

ಖಚಿತ ದಾಖಲೆಗಳ ಪ್ರಕಾರ ಗರಿಷ್ಠ 120 ವರ್ಷಗಳ ಕಾಲ ಬದುಕಿದವರ ಮಾಹಿತಿ ಇದೆ. ಅದಕ್ಕಿಂತಲೂ ಹೆಚ್ಚು ವರ್ಷ ಬದುಕಿದವರಿದ್ದರೂ ಅವರ ಬಗ್ಗೆ ಖಚಿತ ಮಾಹಿತಿಗಳು ದೊರೆತಿಲ್ಲ. ಮುಖ್ಯವಾಗಿ ವಯಸ್ಸಾದಂತೆ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಇಲ್ಲವಾದರೆ ಇರುವಷ್ಟು ಆಯುಸ್ಸು ಖಿನ್ನತೆಯಿಂದ ಬಳಲಬೇಕಾಗುತ್ತದೆ. ಕೆಲವೊಮ್ಮೆ ನಮ್ಮ ದೇಹಕ್ಕೆ ವಯಸ್ಸಾಗಿದ್ದರೂ ದೇಹದ ಅಂಗಾಂಗಗಳ ಕಾರ್ಯ ಚಟುವಟಿಕೆ ಉತ್ತಮವಾಗಿರುತ್ತದೆ. ಇದಕ್ಕೆ ಕಾರಣ ಜೀವನ ಶೈಲಿ ಎಂದು ತಿಳಿಸಿದರು.

ಆಯುಸ್ಸು ವೃದ್ಧಿಯಾಗಲು ಯೋಗ, ವ್ಯಾಯಾಮ, ಪೌಷ್ಟಿಕ ಆಹಾರ ಸೇವನೆ ಅತ್ಯಂತ ಅವಶ್ಯವಾಗಿದೆ. ವಯಸ್ಸಾದ ಬಳಿಕ ಪೌಷ್ಟಿಕಾಂಶವುಳ್ಳ ಮಿತ ಹಾಗೂ ಕಡಿಮೆ ಕ್ಯಾಲೋರಿಯ ಆಹಾರ ಸೇವನೆ, ಲಘು ವ್ಯಾಯಾಮ(20–30 ನಿಮಿಷ ವಾಕಿಂಗ್)ವನ್ನು ಪ್ರತಿನಿತ್ಯ ಮಾಡಬೇಕು. ಸಕ್ಕರೆ ಅಂಶ ಹೆಚ್ಚಾಗಿರುವ ಆಹಾರ ಪದಾರ್ಥಗಳನ್ನು ಹಾಗೂ ಉಪ್ಪಿನಾಂಶವನ್ನು ಸಾಧ್ಯವಾದಷ್ಟು ಕಡಿಮೆ ಬಳಕೆ ಮಾಡಬೇಕು. ನಾರಿನಾಂಶ ಹೆಚ್ಚಾಗಿರುವ ಸೊಪ್ಪು–ತರಕಾರಿಗಳ ಸೇವನೆ ಹಿತಕರ. ನಿತ್ಯ ಒಂದೂವರೆಯಿಂದ 2 ಲೀಟರ್ ನೀರು ಕುಡಿಯುವುದು ಕಡ್ಡಾಯವಾಗಿರಬೇಕು. ಆಹಾರದಲ್ಲಿ ನಾರಿನ ಜೊತೆಗೆ ಪ್ರೋಟೀನ್ ಅಂಶವೂ ಇರಬೇಕು ಎಂದು ಕಿವಿಮಾತು ಹೇಳಿದರು.

ಒಂಟಿತನ ಸಲ್ಲದು: ಪೋಷಕರು ದೂರಾದರೆ ಅದರ ಪರಿಣಾಮ ಮಕ್ಕಳ ಮೇಲೆ ಬೀರುತ್ತದೆ. ವಯಸ್ಸಾದ ಬಳಿಕ ಒಂಟಿಯಾಗಿರುವುದು ಸರಿಯಲ್ಲ. ಇದರಿಂದ ಮಾನಸಿಕ ಖಿನ್ನತೆಗೆ ಒಳಗಾಗುವ ಸಾಧ್ಯತೆ ಹೆಚ್ಚು. ಭಾರತೀಯ ಅವಿಭಕ್ತ ಕುಟುಂಬ ಪದ್ಧತಿಯಂತೆ ಮಕ್ಕಳು, ಮೊಮ್ಮಕ್ಕಳೊಂದಿಗೆ ಸಂತೋಷದಿಂದ ಇದ್ದಷ್ಟು ಆರೋಗ್ಯ ಮತ್ತು ಆಯುಸ್ಸು ವೃದ್ಧಿಸುತ್ತದೆ. ಜೊತೆಗೆ ಸಂಗೀತ ಕೇಳುವುದು, ಗಾರ್ಡನಿಂಗ್ ಮಾಡುವುದು ಸೇರಿದಂತೆ ಯಾವುದಾದರೊಂದು ಚಟುವಟಿಕೆಯಲ್ಲಿ ತಲ್ಲೀನರಾಗಿದ್ದರೆ ಚಿಂತೆಗಳನ್ನು ಮರೆತು ಸುಖಕರ ಜೀವನ ಸಾಗಿಸಬಹುದು ಎಂದರು.

ಉಪವಾಸ ಅನುಕೂಲಕರ!: ಭಾರತೀಯ ಸಂಸ್ಕೃತಿಯಲ್ಲಿ ವಾರಕ್ಕೊಮ್ಮೆ ಉಪವಾಸ ಮಾಡುವ ಪದ್ಧತಿಗಳಿದ್ದವು. ಏಕಾದಶಿ, ಚೌತಿ ಸೇರಿದಂತೆ ಇನ್ನಿತರೆ ಹಬ್ಬ ಹಾಗೂ ವಿಶೇಷ ದಿನಗಳಲ್ಲಿ ಉಪವಾಸ ಮಾಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಉಪವಾಸ ಮಾಡುವುದು, ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ವಾರಕ್ಕೊಮ್ಮೆ ಉಪವಾಸ ಮಾಡುವುದರಿಂದ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ದೇಹವನ್ನು ಯಾವಾಗಲೂ ಕಾಯಿಲೆಗಳಿಂದ ಮುಕ್ತವಾಗಿರುವಂತೆ ಎಚ್ಚರವಹಿಸಬೇಕು ಎಂದು ತಿಳಿಸಿದರು.

'ಮೈಸೂರು ಮಿತ್ರ' ಹಾಗೂ ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಕಾಮಾಕ್ಷಿ ಆಸ್ಪತ್ರೆಯ ಹಿರಿಯ ಶಸ್ತ್ರಚಿಕಿತ್ಸಾ ತಜ್ಞ ಡಾ.ಪಿ.ಜಿ.ನರಸಿಂಹನ್, ಮ್ಯಾನೇಜಿಂಗ್ ಟ್ರಸ್ಟಿ ಮಹೇಶ್ ಶೆಣೈ, ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಡಾ.ಪ್ರಕಾಶ್ ಕೆ.ಪ್ರಭು, ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞ ಡಾ.ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ವೈ.ಟಿ ಮತ್ತು ಮಾಧುರಿ ತಾತಾಚಾರಿಯವರ ಭ್ರಮರ ಟ್ರಸ್ಟ್‌ನಿಂದ ವಿದ್ವಾನ್ ಕೇಶವ್ ಮೋಹನ್‌ಕುಮಾರ್‌ಗೆ

'ಪ್ರೊ.ಜಿ.ಟಿ.ನಾರಾಯಣರಾವ್ ಅತ್ಯುತ್ತಮ ಯುವ ವಾದ್ಯಗಾರ ಪ್ರಶಸ್ತಿ' ಪ್ರದಾನ

ವಿಜ್ಞಾನ, ಸಂಗೀತ ಸಾಹಿತ್ಯದ ಸಾಕಾರರೂಪ ಪ್ರೊ.ಜಿ.ಟಿ.ನಾರಾಯಣರಾವ್; ಗಾನಭಾರತಿ ಸಂಸ್ಥೆಯ ಅಧ್ಯಕ್ಷೆ ಡಾ.ರಮಾ ಬೆನ್ನೂರು ಬಣ್ಣನೆ





ವಿದ್ವಾನ್ ಕೇಶವ್ ಮೋಹನ್‌ಕುಮಾರ್‌ಗೆ 'ಪ್ರೊ.ಜಿ.ಟಿ.ನಾರಾಯಣರಾವ್ ಅತ್ಯುತ್ತಮ ಯುವ ವಾದ್ಯಗಾರ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ಭ್ರಮರ ಟ್ರಸ್ಟ್‌ನ ಟ್ರಸ್ಟಿ ಆರ್.ಜ್ಯೋತಿಯವರ ಪುತ್ರಿ ಪದ್ಮಶ್ರೀ, ಭ್ರಮರ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಮಾಧುರಿ ತಾತಾಚಾರಿ, ಗಾನಭಾರತಿ ಸಂಸ್ಥೆಯ ಅಧ್ಯಕ್ಷೆ ಡಾ.ರಮಾ ಬೆನ್ನೂರು, ಶ್ರೀಕೃಷ್ಣಗಾನ ಸಭಾದ ಅಧ್ಯಕ್ಷ ಶ್ರೀಧರ ರಾಜ್ ಅರಸ್, ಭ್ರಮರ ಟ್ರಸ್ಟ್‌ನ ಟ್ರಸ್ಟಿ ಆರ್.ಜ್ಯೋತಿ ಚಿತ್ರದಲ್ಲಿದ್ದಾರೆ. ವಿದ್ವಾನ್ ರಾಜಗೋಪಾಲ್ ಭಾಗವತ್ ಮತ್ತು ತಂಡ ಸಂಗೀತ ಕಛೇರಿ (ಬಲಚಿತ್ರ) ನಡೆಸಿಕೊಟ್ಟಿತು.

ಮೈಸೂರು,ಮೇ 25(ಪಿಎಂ)– ವಿಜ್ಞಾನ ಸಾಹಿತ್ಯ ಮಾತ್ರವಲ್ಲದೆ, ಶಾಸ್ತ್ರೀಯ ಸಂಗೀತ ಸಾಹಿತ್ಯದಲ್ಲೂ ಪ್ರಸಿದ್ಧ ಲೇಖಕರಾಗಿ 'ಜಿಟಿಎನ್' ಎಂದೇ ಜನಪ್ರಿಯರಾದ ಪ್ರೊ.ಜಿ.ಟಿ.ನಾರಾಯಣರಾವ್ ಸ್ಮರಣಾರ್ಥ ವೈ.ಟಿ ಮತ್ತು ಮಾಧುರಿ ತಾತಾಚಾರಿಯವರ ಭ್ರಮರ ಟ್ರಸ್ಟ್ ವತಿಯಿಂದ ಕೊಡಮಾಡುವ 'ಪ್ರೊ. ಜಿ.ಟಿ. ನಾರಾಯಣರಾವ್ ಅತ್ಯುತ್ತಮ ಯುವ ವಾದ್ಯಗಾರ ಪ್ರಶಸ್ತಿ'ಯನ್ನು ವಿದ್ವಾನ್ ಕೇಶವ್ ಮೋಹನ್‌ಕುಮಾರ್ ಅವರಿಗೆ ಶನಿವಾರ ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಶ್ರೀಕೃಷ್ಣಗಾನ ಸಭಾದ ಆಳ್ವಾರ್ ಕಲಾಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಬಳಿಕ ಮಾತನಾಡಿದ ಕೇಶವ್ ಮೋಹನ್ ಕುಮಾರ್, ಜಿಟಿಎನ್ ಸ್ಮರಣಾರ್ಥ ಪ್ರಶಸ್ತಿ ನೀಡಿದ್ದಕ್ಕೆ ಭ್ರಮರ ಟ್ರಸ್ಟ್‌ಗೆ ಧನ್ಯವಾದ ಹೇಳುತ್ತೇನೆ. ಜಿಟಿಎನ್ ಕೊಡುಗೆ ಬಗ್ಗೆ ಸಾಕಷ್ಟು ಕೇಳಿದ್ದೇನೆ. ಸಂಗೀತ ಪ್ರೇಮಿಗಳಾಗಿದ್ದ ಅವರು ಕಲಾವಿದರನ್ನು ಪ್ರೋತ್ಸಾಹಿಸಿದ್ದಾರೆ. ಅಂತಹ ಮಹಾನ್ ವ್ಯಕ್ತಿಯ ಹೆಸರಿನಲ್ಲಿ ಪ್ರಶಸ್ತಿ ಪಡೆದಿರುವುದು ನನ್ನ ಸೌಭಾಗ್ಯವೇ ಸರಿ ಎಂದರು.

ನನ್ನ ಗುರುಗಳಾದ ವಿದ್ವಾನ್ ಹೆಚ್.ಕೆ. ನರಸಿಂಹಮೂರ್ತಿ ಅವರಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ. ಏಕೆಂದರೆ ನಾನು ಏನಾದರೂ ಸಾಧನೆ ಮಾಡಿದ್ದರೆ ಅದಕ್ಕೆ ಅವರು ಕೊಟ್ಟ ಪ್ರೇರಣೆಯೇ ಕಾರಣ. ಸಂಗೀತ ಎಂಬುದು ಶ್ರೇಷ್ಠ ಕಲೆ. ಸಂಗೀತ ಎಂಬ ಮಹಾಸಾಗರದಲ್ಲಿ ಹೆಚ್ಚು ಅಭ್ಯಾಸ ಮಾಡಿದಷ್ಟು ನಮಗೆ ಸಂಗೀತದಲ್ಲಿ ಇನ್ನೂ ಕಲಿಯುವುದಿದೆ ಎಂಬ ಅರಿವು ಪ್ರತಿದಿನ ಮೂಡುತ್ತಿರುತ್ತದೆ. ಏಕೆಂದರೆ ಕಲೆ ಎನ್ನುವುದು ಕಲಾವಿದನಿಗಿಂತ ಮಿಗಿಲಾದದು ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕುವೆಂಪುನಗರದ ಗಾನಭಾರತಿ ಸಂಸ್ಥೆಯ ಅಧ್ಯಕ್ಷೆ ಡಾ.ರಮಾ ಬೆನ್ನೂರು ಮಾತನಾಡಿ, ಜಿಟಿಎನ್ ನೆನಪು ನನಗೆ ಯಾವಾಗಲೂ ಉತ್ಸಾಹ ನೀಡುತ್ತದೆ. ಅವರು ಶಿಸ್ತಿನ ಸಾಕಾರರೂಪ ಆಗಿದ್ದರು. ಪ್ರೀತಿ, ದಯೆ ಮತ್ತು ಅನುಕಂಪ ಅವರಲ್ಲಿ ಮಡುಗಟ್ಟಿತ್ತು. ಸಂಗೀತ ಅವರ ಉಸಿರಾದರೆ, ಸಾಹಿತ್ಯ ಅವರ ಒಡಲಾಗಿತ್ತು. ವಿಜ್ಞಾನ ಅವರ ವೃತ್ತಿಯಾಗಿತ್ತು. ಈ ಮೂರರಲ್ಲೂ ಅವರು ಮಾಡಿದ ಸಾಧನೆ, ಏರಿದ ಎತ್ತರ ಬಹುಶಃ ಮತ್ಯಾರಿಗೂ ಸಾಧ್ಯವಿಲ್ಲವೇನೋ ಎಂದರು.

ಜಿಟಿಎನ್ ಅವರು ಸಮಯ ಪರಿಪಾಲನೆಯಲ್ಲಿ ಕಟ್ಟುನಿಟ್ಟಾಗಿದ್ದರು. ಯಾವುದೇ ಕಾರ್ಯಕ್ರಮವಾದರೂ ನಿಗದಿತ ಸಮಯಕ್ಕೆ ಪ್ರಾರಂಭ ಆಗದಿದ್ದರೆ ಅವರ ಸಿಟ್ಟಿಗೆ ಗುರಿಯಾಗಬೇಕಾಗುತ್ತಿತ್ತು. ಸಂಗೀತದಲ್ಲಿ ಅವರಿಗೆ ಅಪಾರ ಜ್ಞಾನವಿತ್ತು. ಯಾವುದೇ ರಾಗವಾಗಲೀ, ಯಾವುದೇ ಕೃತಿಯ ಸಾಹಿತ್ಯವಾಗಲೀ ಕೇಳುತ್ತಿದ್ದಂತೆ ಥಟ್ ಎಂದು ಹೇಳುತ್ತಿದ್ದರು. ಅವರ ಸಾಹಿತ್ಯ ಸೇವೆ ಅಪಾರವಾದದು. ನಾನು ಕೊಡವ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಯಾರದೇ ಪುಸ್ತಕ ಓದಿದಾಗ ನಿಮಗೆ ಮೆಚ್ಚುಗೆ ಆದಲ್ಲಿ ಕೂಡಲೆ ಲೇಖಕರಿಗೆ ಪತ್ರ ಬರೆದು ಅಭಿನಂದಿಸಿ ಎಂದು ನನಗೆ ಕಿವಿಮಾತು ಹೇಳಿದ್ದರು. ಅವರು ವಿಜ್ಞಾನ, ಸಂಗೀತ ಸಾಹಿತ್ಯದ ಸಾಕಾರರೂಪ ಎಂದು ಸ್ಮರಿಸಿದರು.

ಶ್ರೀಕೃಷ್ಣಗಾನ ಸಭಾದ ಅಧ್ಯಕ್ಷ ಶ್ರೀಧರ ರಾಜ್ ಅರಸ್ ಮಾತನಾಡಿ, ನಮ್ಮ ಎಲ್ಲಾ ಕಾರ್ಯಕ್ರಮಗಳಿಗೂ ಜಿಟಿಎನ್ ಸಾಮಾನ್ಯವಾಗಿ ಬರುತ್ತಿದ್ದರು. ಜಿಟಿಎನ್ ಬಗ್ಗೆ ನನಗೆ ಅತ್ಯಂತ ಅಭಿಮಾನವಿದೆ. ಅವರು ನನ್ನೊಂದಿಗೆ ಬಹಳ ಪ್ರೀತಿಯಿಂದ ಸಂಗೀತದ ಬಗ್ಗೆ ಚರ್ಚೆ ಮಾಡುತ್ತಿದ್ದರು. 'ಸ್ಟಾರ್ ಆಫ್ ಮೈಸೂರ್'ನಲ್ಲಿ ವಾರಕ್ಕೊಂದು ಅವರ ಲೇಖನ ಬರುತ್ತಿತ್ತು. 'ಸಂಗೀತವೆಂದರೆ ಸಂಗೀತ ತಜ್ಞರಿಗೂ ಖುಷಿ ಕೊಡಬೇಕು. ಸಂಗೀತದ ಬಗ್ಗೆ ಜ್ಞಾನವಿಲ್ಲದ ಸಾಮಾನ್ಯ ವ್ಯಕ್ತಿಗೂ ಖುಷಿ ಕೊಡಬೇಕು' ಎಂದು ಅವರು ಹೇಳುತ್ತಿದ್ದರು. ಅಂತಹ ಮೇರು ವ್ಯಕ್ತಿತ್ವದ ಹೆಸರಿನಲ್ಲಿ ಪ್ರಶಸ್ತಿ ಕೊಡುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಸಂತಸ ವ್ಯಕ್ತಪಡಿಸಿದರು.

ಭ್ರಮರ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಮಾಧುರಿ ತಾತಾಚಾರಿ ಮಾತನಾಡಿ, ಮೈಸೂರಿನಲ್ಲಿ ಜಿಟಿಎನ್ ಅವರ ಬಗ್ಗೆ ಗೊತ್ತಿಲ್ಲ ಎನ್ನುವವರು ಯಾರೂ ಇಲ್ಲ. ಅವರ ಸ್ಮರಣಾರ್ಥ ನಮ್ಮ ಟ್ರಸ್ಟ್‌ನಿಂದ ಪ್ರತಿ ವರ್ಷ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ವಿದ್ವಾನ್ ರಾಜಗೋಪಾಲ್ ಭಾಗವತ್ (ಗಾಯನ), ವಿದ್ವಾನ್ ಎಂ.ಕೇಶವ ಮೋಹನ್‌ಕುಮಾರ್ (ಪಿಟೀಲು), ವಿದ್ವಾನ್ ಪಿ.ಎಸ್.ಶ್ರೀಧರ್ (ಮೃದಂಗ) ಮತ್ತು ವಿದ್ವಾನ್ ವಿ.ಎಸ್. ರಮೇಶ್ (ಮೋರ್ಚಿಂಗ್) ಅವರಿಂದ ದತ್ತಿ ಸಂಗೀತ ಕಛೇರಿ ಕಾರ್ಯಕ್ರಮ ನಡೆಯಿತು. ಪ್ರೊ.ಜಿ.ಟಿ.ನಾರಾಯಣರಾವ್ ಅವರ ಪುತ್ರ ಅನಂತವರ್ಧನ, ಸೊಸೆ ರುಕ್ಮಿಣಿ, ಭ್ರಮರ ಟ್ರಸ್ಟ್‌ನ ಟ್ರಸ್ಟಿ ಆರ್. ಜ್ಯೋತಿ, ಬಿಎಸ್‌ಎಸ್ ವಿದ್ಯೋದಯ ಶಾಲೆ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್ ಮತ್ತಿತರರು ಹಾಜರಿದ್ದರು.

ಮಮತಾ ಬ್ಯಾನರ್ಜಿಯಿಂದ ಹಿಂದುಳಿದ ವರ್ಗಗಳಿಗೆ ಅನ್ಯಾಯ ಆರೋಪ

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಪ್ರತಿಭಟನೆ



ಮೈಸೂರು, ಮೇ 25(ಜಿಎ)–ನ್ಯಾಯಾಲಯದ ತೀರ್ಪನ್ನು ಪಾಲಿಸದೇ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿ ಮೈಸೂರು ಜಿಲ್ಲೆ ಗ್ರಾಮಾಂತರ ಹಿಂದುಳಿದ ವರ್ಗಗಳ ಮೋರ್ಚಾದ ವತಿಯಿಂದ ನಗರದ ನ್ಯಾಯಾಲಯ ಮುಂಭಾಗವಿರುವ ಗಾಂಧಿ ಪುತ್ಥಳಿ ಮುಂದೆ ಪ್ರತಿಭಟನೆ ನಡೆಸಲಾಯಿತು.

'ಓಬಿಸಿಗೆ ಮೀಸಲಾದ ಮೀಸಲಾತಿಯನ್ನು ಮುಸ್ಲಿಂಮರಿಗೆ ಕೊಡಲು ಹೊರಟಿರುವ ತೃಣಮೂಲ ಕಾಂಗ್ರೆಸ್‌ಗೆ ಧಿಕ್ಕಾರ ಧಿಕ್ಕಾರ', 'ಮುಸ್ಲಿಂ ಓಲೈಕೆಗಾಗಿ ಓಬಿಸಿ ಮೀಸಲಾತಿ ವಿಚಾರದಲ್ಲಿ ದ್ರೋಹ ಬಗೆದ ಮಮತಾ ಬ್ಯಾನರ್ಜಿಗೆ ಧಿಕ್ಕಾರ ಧಿಕ್ಕಾರ', 'ಓಬಿಸಿ ಮೀಸಲಾತಿ ವಿರೋಧಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟಕ್ಕೆ ಧಿಕ್ಕಾರ' ಎಂದು ಪ್ಲೇಕಾರ್ಡ್‌ಗಳನ್ನು ಹಿಡಿದು ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಮಮತ ಬ್ಯಾನರ್ಜಿ ಅವರು ಮುಸ್ಲಿಂಮರನ್ನು ಓಬಿಸಿಗೆ ಸೇರಿಸುತ್ತೇವೆಂದು ನ್ಯಾಯಾಲಯ ತೀರ್ಪಿನ ವಿರುದ್ಧ ಹೇಳಿಕೆ ನೀಡಿರುವುದು ಖಂಡನೀಯ. ನ್ಯಾಯಾಲಯಕ್ಕಿಂತ ದೊಡ್ಡವರು ಯಾರೂ ಇಲ್ಲ. ನ್ಯಾಯಾಲಯಕ್ಕೆ ಗೌರವ ನೀಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ನಗರ ಓಬಿಸಿ ಮೋರ್ಚಾ ಅಧ್ಯಕ್ಷ ಮೈಪ್ರ.ರಾಜೇಶ್, ಕೆ.ಸೋಮಶೇಖರರಾಜು, ಸತೀಶ್, ನಂಜಪ್ಪ ಮಣಿ, ಎಸ್.ಟಿ. ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಎಂ.ಕೆ.ಶಂಕರ್, ನಾರಾಯಣ ಲೋಲಪ್ಪ, ಕೃಷ್ಣನಾಯಕ, ಮಂಜು, ಗೋವಿಂದ ಮತ್ತಿತರರಿದ್ದರು.

ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ: ಸಿದ್ದರಾಮಯ್ಯ Vs ಕುಮಾರಸ್ವಾಮಿ ಟಾಕ್ ಫೈಟ್

ವಿಡಿಯೋ ವೈರಲ್ ಅಪರಾಧವಲ್ಲ ಎಂಬ ಸಿಎಂಗೆ ಸೆಕ್ಷನ್ ಉಲ್ಲೇಖಿಸಿ ಕುಮಾರಸ್ವಾಮಿ ತಿರುಗೇಟು

● ವಿಧಾನಸೌಧವನ್ನು ಟೈಮ್ ಪಾಸ್ ಕ್ಲಬ್ ಮಾಡಿಕೊಂಡಿದ್ದೀರಾ ● ನಿಮಗೆ ಈ ಪರಿ ಅಜ್ಞಾನವೇ ಎನ್ನುವುದು ಸೋಜಿಗ
● ನೀವೇ ಬಾಯಿ ಮುಚ್ಚಿಕೊಳ್ಳುವ ಪರಿಸ್ಥಿತಿ ಬಂದಿದೆ ● ಪೆನ್‌ಡ್ರೈವ್ ಪ್ರಕರಣದಲ್ಲಿ ನಿಮ್ಮ ನಡವಳಿಕೆ ಪ್ರಶ್ನಾರ್ಹ



ಮೈಸೂರು, ಮೇ25(ಬಿಎಲ್‌ಯು)– ವಿಡಿಯೋ ವೈರಲ್ ಮಾಡಬಾರದು ಎಂದು ಯಾವ ಸೆಕ್ಷನ್‌ನಲ್ಲಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ. ಅಶ್ಲೀಲ ವಿಡಿಯೋ ವೈರಲ್ ಮಾಡಿದರೆ ಯಾವ ಸೆಕ್ಷನ್‌ನಲ್ಲಿ ಪ್ರಕರಣ ದಾಖಲಿಸಬಹುದು ಎಂಬ ಸೆಕ್ಷನ್‌ಗಳ ಸಂಪೂರ್ಣ ಮಾಹಿತಿ ನೀಡಿ ಸಿದ್ದರಾಮಯ್ಯಗೆ ಟಾಂಗ್ ನೀಡಿದ್ದಾರೆ.

ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಕುಮಾರಸ್ವಾಮಿ, ಸೆಕ್ಷನ್‌ಗಳ ಮಾಹಿತಿಯುಳ್ಳ ಎಸ್‌ಐಟಿ ಪತ್ರಿಕಾ ಹೇಳಿಕೆಯನ್ನು ಟ್ಯಾಗ್ ಮಾಡಿ ಸಿದ್ದರಾಮಯ್ಯರ ಕಾಲೆಳೆದಿದ್ದಾರೆ. ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ ಸಂಬಂಧ ಯಾವುದೇ ವಿಡಿಯೋಗಳನ್ನು ಯಾರೇ ಆಗಲಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚುವುದು ಮಾಹಿತಿ ತಂತ್ರಜ್ಞಾನ ಕಾಯ್ದೆ ಕಲಂ 67(ಎ) ಐಟಿ ಆಕ್ಟ್ ಹಾಗೂ ಕಲಂ 228ಎ(1), 292 ಐಪಿಸಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ. ಖಾಸಗಿ ಮೆಸೇಜಿಂಗ್ ಆ್ಯಪ್‌ಗಳ ಮೂಲಕ ವಿಡಿಯೋ ಹಂಚುವುದನ್ನು ಪತ್ತೆ ಹಚ್ಚುವುದು ಸಾಧ್ಯವಿದ್ದು, ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಬಲಿಪಶು ಮಹಿಳೆಯರ ಘನತೆ ಹಾಗೂ ಗೌಪ್ಯತೆಗೆ ಕುಂದುಂಟು ಮಾಡುವುದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ರಾಜ್ಯ ಸರ್ಕಾರ ರಚನೆ ಮಾಡಿರುವ ಎಸ್‌ಐಟಿ ನೀಡಿರುವ ಪತ್ರಿಕಾ ಹೇಳಿಕೆಯನ್ನು ಕುಮಾರಸ್ವಾಮಿ ಉಲ್ಲೇಖಿಸಿ ಸಿದ್ದರಾಮಯ್ಯಗೆ ತಿರುಗೇಟು ನೀಡಿದ್ದಾರೆ.

ನಿಮ್ಮ ಘನತೆವೆತ್ತ ಅವಗಾಹನೆಗೆ ಎಸ್‌ಐಟಿ ಹೊರಡಿಸಿರುವ ಪತ್ರಿಕಾ ಪ್ರಕಟಣೆಯನ್ನು ಇಲ್ಲಿ ಲಗತ್ತಿಸಿದ್ದೇನೆ. ದಯಮಾಡಿ ಓದಿಕೊಳ್ಳಿ. ಅರ್ಥ ಮಾಡಿಕೊಳ್ಳಿ, ನೀವು ಕೇಳಿದ ಎಲ್ಲಾ ಸೆಕ್ಷನ್‌ಗಳು ಅದರಲ್ಲೇ ಇವೆ. ಒಂದಲ್ಲಾ, ಹತ್ತಾರು ಸಲ ಓದಿ ಮನನ ಮಾಡಿಕೊಳ್ಳಿ ಎಂದು ಕುಮಾರಸ್ವಾಮಿ ಸಿದ್ದರಾಮಯ್ಯಗೆ ಗಂಭೀರ ಸಲಹೆ ನೀಡಿದ್ದಾರೆ.

ನೊಂದ ಮಹಿಳೆಯರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹಂಚುವುದು ಮುಖ್ಯವಲ್ಲ. ಅದು ಅಪರಾಧ ಕೂಡ ಅಲ್ಲ, ಅಶ್ಲೀಲ ವಿಡಿಯೋಗಳನ್ನು ವೈರಲ್ ಮಾಡಿದ್ದು ದೊಡ್ಡ ಅಪರಾಧ ಎನ್ನುವುದು ಯಾವ ಸೆಕ್ಷನ್‌ನಲ್ಲಿ ಉಲ್ಲೇಖಿಸಿದ್ದಾರೆ. ಕುಮಾರಸ್ವಾಮಿ ಪ್ರಕಾರ ಯಾವುದಾದರೂ ಹೊಸ ಸೆಕ್ಷನ್ ಇದ್ದರೆ ಹೇಳಲಿ ಎಂದು ಮೈಸೂರಿನಲ್ಲಿ ಸಿದ್ದರಾಮಯ್ಯ ನೀಡಿರುವ ಹೇಳಿಕೆಗೆ ಕುಮಾರಸ್ವಾಮಿ ಸೆಕ್ಷನ್‌ಗಳ ಸಮೇತ ಟಾಂಗ್ ನೀಡಿದ್ದಾರೆ. ನೊಂದ ಮಹಿಳೆಯರ ವಿಡಿಯೋ ಹಂಚುವುದು ಅಪರಾಧ ಎಂದು ಯಾವ ಸೆಕ್ಷನ್‌ನಲ್ಲಿ ಇದೆ ಅಂತ ಒಂದನೇ ಕ್ಲಾಸ್ ಮಗುವಿನಂತೆ ಕೇಳಿದ್ದೀರಾ. ನಿಮ್ಮ ಸರ್ಕಾರದಲ್ಲಿರುವ, ನೀವೇ ಆದೇಶಿಸಿ ರಚನೆ ಮಾಡಿರುವ ಎಸ್‌ಐಟಿ ಹೊರಡಿಸಿರುವ ಪತ್ರಿಕಾ ಪ್ರಕಟಣೆ, ರೂಪಿಸಿರುವ ಕಾನೂನುಬದ್ಧ ನಿಯಮಗಳು, ಸಾಕ್ಷಾತ್ ಸಿಎಂ ಆಗಿರುವ ನಿಮ್ಮ ಗಮನಕ್ಕೆ ಬಂದಿರಲಿಲ್ಲವೆಂದರೆ ಹೇಗೆ ಎಂದು ಪ್ರಶ್ನಿಸಿದ್ದಾರೆ. ನೀವು ಸರ್ಕಾರ ನಡೆಸುತ್ತೀರೊ ಅಥವಾ ವಿಧಾನಸೌಧವನ್ನು ಟೈಮ್ ಪಾಸ್ ಕ್ಲಬ್ ಮಾಡಿಕೊಂಡಿದ್ದೀರಾ ಎಂದು ಕುಮಾರಸ್ವಾಮಿ ಮರು ಪ್ರಶ್ನಿಸಿದ್ದಾರೆ. ಕ್ಷಣಕ್ಕೊಂದು ಮಾತು, ಘಳಿಗೆಗೊಂದು ಹೇಳಿಕೆ; ನೀವು ಕರ್ನಾಟಕದ ಮುಖ್ಯಮಂತ್ರಿ ಕುರ್ಚಿ ಮೇಲೆ ಕೂತಿದ್ದೀರೊ ಅಥವಾ ಊಸರವಳ್ಳಿ ಏನಾದರೂ ಕೂತಿದೆಯೋ ಎಂಬುವುದು ನನಗೆ ಅನುಮಾನ. ಇಷ್ಟು ಬಣ್ಣಗೇಡಿ ವರ್ತನೆಯನ್ನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ ಎಂದು ಹೇಳಿದ್ದಾರೆ. ನಿಜ, ನೀವು ಸ್ವಯಂ ಘೋಷಿತ ಸಂವಿಧಾನ ತಜ್ಞರು. ಪ್ರಖ್ಯಾತ ಮಾಜಿ ವಕೀಲರು, ಹಾಲಿ ಮುಖ್ಯಮಂತ್ರಿಗಳು, ಆದರೂ ನಿಮ್ಮ ಪ್ರಶ್ನೆಗೆ ಉತ್ತರ ಕೊಡುವುದು ನನ್ನ ಧರ್ಮ. ಆದರೆ ನಿಮಗೆ ಈ ಪರಿ ಅಜ್ಞಾನವೇ ಎನ್ನುವುದು ಸೋಜಿಗ ಎಂದು ಲೇವಡಿ ಮಾಡಿದ್ದಾರೆ. ಮಾತೆತ್ತಿದರೆ ನಾನು ಲಾಯರ್ ಗಿರಿ ಮಾಡುತ್ತಿದ್ದೆ, ಸುಮ್ನೆ ಕೂತ್ಕಳ್ಳಿ ಎಂದು ಎಲ್ಲರ ಬಾಯಿ ಮುಚ್ಚಿಸುತ್ತಿದ್ದ ನೀವು, ಈಗ ನೀವೇ ಬಾಚಿ ಮುಚ್ಚಿಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ಗೇಲಿ ಮಾಡಿದ್ದಾರೆ.

ದಯಮಾಡಿ ನೀವು ವಕೀಲಿಕೆ ಮಾಡಬೇಡಿ. ಕಾನೂನಿನ ಬಗ್ಗೆ ಸಾಸಿವೆ ಕಾಳಿನಷ್ಟು ತಿಳುವಳಿಕೆ ಇಲ್ಲದವರೊಬ್ಬರು ನಾನು ವಕೀಲಿಕೆ ಮಾಡುತ್ತಿದ್ದೆ ಎಂದು ಹೇಳಿಕೊಳ್ಳುವುದು ಗೌರವಾನ್ವಿತ ವಕೀಲ ಸಮುದಾಯಕ್ಕೆ ಮಾಡುವ ಅಪಚಾರ. ತಮಗೆ ಇನ್ನಾದರೂ ಶಿಷ್ಟಾಚಾರ ಇರಲಿ ಎಂದು ಸಿದ್ದರಾಮಯ್ಯಗೆ ಕುಮಾರಸ್ವಾಮಿ ವ್ಯಂಗ್ಯೋಕ್ತಿಯಲ್ಲಿ ಕಿವಿಮಾತು ಹೇಳಿದ್ದಾರೆ.

ನಿಮ್ಮನ್ನು ಅವಮಾನಿಸುತ್ತಿದ್ದೇನೆ ಎಂದು ಅನ್ಯತಾ ಭಾವಿಸಬೇಡಿ ಎಂದು ಹೇಳಿರುವ ಕುಮಾರಸ್ವಾಮಿ, ವಯಸ್ಸಿನಲ್ಲಿ ಹಿರಿಯರು, ಹೆಚ್ಚು ಅನುಭವಸ್ಥರು, ಆದರೆ ಪೆನ್ ಡ್ರೈವ್ ಪ್ರಕರಣದಲ್ಲಿ ನಿಮ್ಮ ನಡವಳಿಕೆ ಪ್ರಶ್ನಾರ್ಹವಾಗಿದೆ ಎಂದು ತಿಳಿಸಿದ್ದಾರೆ.

ಅಮಾಯಕ ಹೆಣ್ಣು ಮಕ್ಕಳ ಮಾನವನ್ನು ಓಟಿಗಾಗಿ ಒತ್ತೆ ಇಟ್ಟ ಕ್ರಿಮಿನಲ್‌ಗಳನ್ನು ಪಕ್ಕದಲ್ಲಿ ಕೂರಿಸಿಕೊಂಡು ಮಾತನಾಡುತ್ತಿದ್ದೀರಾ. ಸಂವಿಧಾನಬದ್ಧವಾಗಿ ಗೌಪ್ಯತೆಯ ಪ್ರಮಾಣವಚನ ಸ್ವೀಕರಿಸಿ ಸಂವಿಧಾನ ದ್ರೋಹಿ ಕೃತ್ಯ ಎಸಗಿರುವ ವ್ಯಕ್ತಿ ನಿಮ್ಮ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದಾರೆ. ಇದಕ್ಕಿಂತ ನಿರ್ಲಜ್ಜತೆ ಉಂಟೆ ಎಂದು ಕುಮಾರಸ್ವಾಮಿ ಆಕ್ರೋಶದಿಂದ ಪ್ರಶ್ನಿಸಿದ್ದಾರೆ.

ನೀವು ನಿಮ್ಮ ಇಡೀ ಕಾಂಗ್ರೆಸ್ ಪಕ್ಷ ಸಿಡಿ ಶಿವು ರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದೀರಾ. ನಿಮ್ಮ ಇಡೀ ಕ್ಯಾಬಿನೆಟ್ ಆ ವ್ಯಕ್ತಿಯ ಹಿತಾಸಕ್ತಿಗೆ, ಆತ ರೂಪಿಸಿರುವ ಒಳಸಂಚಿನಲ್ಲಿ ಭಾಗಿಯಾಗಿದೆ. ನಿಮ್ಮದು ಕ್ಯಾಬಿನೆಟ್ ಆಫ್ ಕರ್ನಾಟಕ ಅಲ್ಲ, ಕ್ಯಾಬಿನೆಟ್ ಆಫ್ ಕಾನ್ಸ್‌ಪೈರಸಿ ಎಂದು ಬಹಳ ನೋವಿನಿಂದ ಈ ಮಾತು ಹೇಳುತ್ತಿದ್ದೇನೆ ಎಂದು ಕುಮಾರಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಹೇಳಿದ್ದಾರೆ.

ವಿಡಿಯೋ ವೈರಲ್ ಮಾಡುವುದು ದೊಡ್ಡ ಅಪರಾಧ ಎಂದು ಯಾವ ಕಾನೂನಿನಲ್ಲಿದೆ!

ಮೈಸೂರು, ಮೇ25(ಬಿಎಲ್‌ಯು)–ರೇಪ್‌ಗಿಂತ ವಿಡಿಯೋ ಹಂಚಿಕೆ ಮಾಡಿರುವುದು ದೊಡ್ಡ ಅಪರಾಧ ಎಂದು ಯಾವ ಕಾನೂನಿನಲ್ಲಿ ಇದೆ ಅಂತ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಅತ್ಯಾಚಾರಕ್ಕಿಂತ ವಿಡಿಯೋ ಹಂಚಿಕೆ ಮಾಡಿರುವುದು ದೊಡ್ಡ ಅಪರಾಧ ಎಂಬ ಕುಮಾರಸ್ವಾಮಿ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

ವಿಡಿಯೋ ಹಂಚಿಕೆ ಅಪರಾಧ ಎಂದು ಕುಮಾರಸ್ವಾಮಿ ಏನಾದರೂ ಐಪಿಸಿ ಸೆಕ್ಷನ್ ಹೇಳಿದ್ದಾರಾ, ಅದು ಭಾರತೀಯ ದಂಡ ಸಂಹಿತೆಯಲ್ಲಿದೆಯಾ ಅಥವಾ ಇವರೇ ಬರೆದುಕೊಂಡ ಕಾನೂನಿನಲ್ಲಿ ಇದೆಯಾ ಎಂದು ಸಿದ್ದರಾಮಯ್ಯ ಸರಣಿ ಪ್ರಶ್ನೆಗಳನ್ನು ಹಾಕಿದರು.

ಹಾಗೆಂದ ಮಾತ್ರಕ್ಕೆ ವಿಡಿಯೋ ವಿತರಣೆ ಮಾಡಿರುವುದು ಸರಿ ಎಂದು ನಾನು ಸಮರ್ಥನೆ ಮಾಡಿಕೊಂಡಿಲ್ಲ. ವಿಡಿಯೋದಲ್ಲಿ ಮಹಿಳೆಯರ ಮುಖ ಬ್ಲರ್ ಮಾಡದೆ ಇರುವುದು ಸರಿ ಎಂದು ಕೂಡ ನಾನು ಹೇಳುತ್ತಿಲ್ಲ. ಆದರೆ ರೇಪ್‌ಗಿಂತ ವಿಡಿಯೋ ಹಂಚಿಕೆ ಮಾಡಿರುವುದು ಮಹಾ ಅಪರಾಧ ಎಂದು ಹೇಳಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ತಮ್ಮ ಮಗ ರಾಕೇಶ್

ಹೆಚ್.ಡಿ.ಕುಮಾರಸ್ವಾಮಿಗೆ ಸಿಎಂ ಸಿದ್ದರಾಮಯ್ಯ ಪ್ರಶ್ನೆ



ಸಾವಿನ ವಿಚಾರ ತಂದ ಕುಮಾರಸ್ವಾಮಿಗೆ ಇದೇ ವೇಳೆ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ನನ್ನ ಮಗನ ಸಾವಿನ ವಿಚಾರಕ್ಕೂ, ಪ್ರಜ್ವಲ್ ರೇಪ್ ಪ್ರಕರಣಕ್ಕೂ ತಾಳೆ ಹಾಕುವುದು ಮೂರ್ಖತನ ಎಂದು ಟಾಂಗ್ ನೀಡಿದರು.

ನನ್ನ ಮಗ 2016 ರಲ್ಲಿ ಮೃತಪಟ್ಟಿದ್ದಾನೆ. 8 ವರ್ಷಗಳ ಹಿಂದೆ ನಡೆದ ವಿಚಾರವನ್ನು ಪ್ರಜ್ವಲ್ ರೇಪ್ ಪ್ರಕರಣಕ್ಕೆ ಲಿಂಕ್ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಪ್ರಜ್ವಲ್ ರೇಪ್ ಮಾಡಿ ಓಡಿ ಹೋಗಿದ್ದಾನೆ. ಹೀಗಿರುವಾಗ ನನ್ನ ಮಗ ರಾಕೇಶ್ ಸಾವಿಗೂ ಪ್ರಜ್ವಲ್ ರೇಪ್ ಪ್ರಕರಣಕ್ಕೂ ಏನು ಸಂಬಂಧ? ಈ ಮೂಲಕ ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ ಸಂಬಂಧ ಸಿದ್ದರಾಮಯ್ಯ ಹಾಗೂ ಹೆಚ್.ಡಿ. ಕುಮಾರಸ್ವಾಮಿ ನಡುವಿನ ವಾಕ್ಸಮರ ತಾರಕಕ್ಕೇರಿದೆ. ದಾವಣಗೆರೆ ಯುವಕನ ಸಾವು ಲಾಕಪ್‌ಡೆತ್‌ನಿಂದ ಸಂಭವಿಸಿಲ್ಲ. ಆತನಿಗೆ ಮೂರ್ಛೆ ರೋಗ ಇತ್ತು. ಆ ಕಾರಣದಿಂದ ಮೃತಪಟ್ಟಿದ್ದಾನೆ. ಆದರೂ ಎಫ್‌ಐಆರ್ ಹಾಕದೆ ಪೊಲೀಸ್ ಠಾಣೆಗೆ ಕರೆ ತಂದಿರುವುದು ಸರಿಯಲ್ಲ. ಈ ತಪ್ಪಿಗಾಗಿ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲು ಆದೇಶ ನೀಡಿದ್ದೇನೆ. ಆದರೆ ಅದು ಲಾಕಪ್ ಡೆತ್ ಅಲ್ಲ ಎಂದು ಸಿದ್ದರಾಮಯ್ಯ ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಮೊಸರಲ್ಲಿ ಕಲ್ಲು ಹುಡುಕಬಾರದು: ಪ್ರಜ್ವಲ್ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಸಂಬಂಧ ರಾಜ್ಯ ಸರ್ಕಾರ ಪತ್ರ ಬರೆಯುವುದು ವಿಳಂಬವಾಯಿತು ಎಂಬ ಕೇಂದ್ರ ವಿದೇಶಾಂಗ ಸಚಿವ ಜೈಶಂಕರ್ ಹೇಳಿಕೆಗೆ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಪ್ರಧಾನಮಂತ್ರಿ ನರೇಂದ್ರ ಮೋದಿಗೆ ನಾನು ಕಳೆದ 15 ದಿನದ ಹಿಂದೆಯೇ ಪತ್ರ ಬರೆದಿದ್ದೇನೆ. ಈ ಸಂಬಂಧ ಎಸ್‌ಐಟಿ ಕೂಡ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ.

ಎರಡು ಬಾರಿ ಪತ್ರ ಬರೆದಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆಯಿತು, ನಾನು ಪತ್ರ ಬರೆಯುವುದು ವಿಳಂಬವಾಯಿತು ಎಂಬುದನ್ನು ಒಪ್ಪಿಕೊಳ್ಳುವೆ. ಆದರೆ ಈಗಲಾದರೂ ಕ್ರಮ ಕೈಗೊಳ್ಳಬಹುದಲ್ಲ. ಸುಮ್ಮನೆ ಕಾಲ ಕಳೆಯುವುದನ್ನು ಬಿಡಬೇಕು. ಮೊಸರಲ್ಲಿ ಕಲ್ಲು ಹುಡುಕಬಾರದು ಎಂದು ಸಿದ್ದರಾಮಯ್ಯ ಕಿಡಿಕಾರಿದರು.

ಕೊಡಗಿನಲ್ಲಿ ಎರಡು ಕಾಡಾನೆ ಸಾವು

ಕಾಫಿ ತೋಟಗಳಲ್ಲಿ ಕಳೇಬರಗಳು ಪತ್ತೆ





ಮಡಿಕೇರಿ, ಮೇ 25– ಕೊಡಗು ಜಿಲ್ಲೆಯ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಕಾಫಿ ತೋಟದೊಳಗೆ 2 ಕಾಡಾನೆಗಳು ಸಾವನ್ನಪ್ಪಿದ್ದು, ಕಳೇಬರಗಳು ಪತ್ತೆಯಾಗಿವೆ. ಸುಂಟಿಕೊಪ್ಪ ಸಮೀಪದ 7ನೇ ಹೊಸಕೋಟೆ ಬಳಿಯ ಕಾಫಿ ತೋಟವೊಂದರಲ್ಲಿ ಅಂದಾಜು 20 ವರ್ಷ ಪ್ರಾಯದ ಆನೆಯೊಂದರ ಕಳೇಬರ ಪತ್ತೆಯಾಗಿದೆ. ಘಟನಾ ಸ್ಥಳಕ್ಕೆ ಮಡಿಕೇರಿ ಡಿಎಫ್‌ಓ ಭಾಸ್ಕರ್, ಎಸಿಎಫ್ ಗೋಪಾಲ್, ಆರ್‌ಎಫ್‌ಓ ರತನ್, ಡಿಆರ್‌ಎಫ್‌ಓ ದೇವಯ್ಯ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳದಲ್ಲೇ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿ ಹೂಳಲಾಯಿತು. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಕಾಡಾನೆ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಶಾಲನಗರ ತಾಲೂಕಿನ ತ್ಯಾಗತ್ತೂರು ಗ್ರಾಮದ ನಿವಾಸಿ ಗಿರೀಶ್ ಅವರಿಗೆ ಸೇರಿದ ಕಾಫಿ ತೋಟದಲ್ಲಿ ಅಂದಾಜು 20 ವರ್ಷ ಪ್ರಾಯದ ಗಂಡಾನೆ ಮೃತಪಟ್ಟಿರುವುದು ತಡವಾಗಿ ಬೆಳಕಿಗೆ ಬಂದಿದೆ. ಕಾರ್ಮಿಕರು ಕಾಫಿ ತೋಟದೊಳಗೆ ಕೆಲಸಕ್ಕೆ ತೆರಳುವ ಸಂದರ್ಭ ಕಾಡಾನೆ ಕಳೇಬರ ಕಂಡು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಒಂದು ವಾರದ ಹಿಂದೆಯೇ ಅನಾರೋಗ್ಯದಿಂದಾಗಿ ಕಾಡಾನೆ ಸಾವನ್ನಪ್ಪಿರಬಹುದೆಂದು ಶಂಕಿಸಲಾಗಿದೆ.

ವನ್ಯಜೀವಿ ಅರಣ್ಯ ಅಧಿಕಾರಿ ಡಾ.ಚಿಟ್ಟಿಯಪ್ಪ ಅವರು ಕಾಡಾನೆ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಗುಂಡಿ ತೋಡಿ ಹೂಳಲಾಯಿತು. ಸ್ಥಳಕ್ಕೆ ಮಡಿಕೇರಿ ಡಿಸಿಎಫ್ ಶಂಕರ್, ಸೋಮವಾರಪೇಟೆ ತಾಲೂಕು ಎಸಿಎಫ್ ಎ.ಎ.ಗೋಪಾಲ್, ವಲಯ ಅರಣ್ಯ ಅಧಿಕಾರಿ ರತನ್ ಕುಮಾರ್, ಉಪವಲಯ ಅರಣ್ಯ ಅಧಿಕಾರಿ ಸುಬ್ರಾಯ, ಅರಣ್ಯ ಇಲಾಖೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆನೆಗಳ ಸಾವಿನ ಬಗ್ಗೆ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು ವರದಿಗಳು ಬಂದ ನಂತರ ಅವುಗಳ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕರಾಟೆ ಇಂಡಿಯಾ ಆರ್ಗನೈಜೇಷನ್ ತಾಂತ್ರಿಕ ಆಯೋಗದ ಜಂಟಿ ಅಧ್ಯಕ್ಷರಾಗಿ ಅರುಣ್ ಮಾಚಯ್ಯ ನೇಮಕ

ಪೊನ್ನಂಪೇಟೆ, ಮೇ 25– ವಿಶ್ವ ಕರಾಟೆ ಮಂಡಳಿ, ಕಾಮನ್ ವೆಲ್ತ್ ಕರಾಟೆ ಮಂಡಳಿ ಮತ್ತು ಏಷ್ಯನ್ ಕರಾಟೆ ಒಕ್ಕೂಟದ ಅಧೀನದಲ್ಲಿರುವ ಕರಾಟೆ ಇಂಡಿಯಾ ಆರ್ಗನೈಜೇಷನ್ (ಕೆಐಒ)ನ ತಾಂತ್ರಿಕ ಆಯೋಗದ ನೂತನ ಜಂಟಿ ಅಧ್ಯಕ್ಷರಾಗಿ ದೇಶದ ಹೆಸರಾಂತ ಕರಾಟೆ ಪಟು ಕೊಡಗಿನ ಸಿ.ಎಸ್.ಅರುಣ್ ಮಾಚಯ್ಯ ನೇಮಕಗೊಂಡಿದ್ದಾರೆ.

ವಿಶ್ವ ಶಿಟೋರಿಯೋ ಕರಾಟೆ ಮಂಡಳಿಯ ಸ್ಟ್ಯಾಂಡಿಂಗ್ ನಿರ್ದೇಶಕರು, ಅಖಿಲ ಭಾರತ ಶಿಟೋರಿಯೋ ಕರಾಟೆ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಚೆಪ್ಪುಡಿರ ಎಸ್.ಅರುಣ್ ಮಾಚಯ್ಯ ಕರಾಟೆ ಇಂಡಿಯಾ ಆರ್ಗನೈಜೇಷನ್‌ನ ಅತ್ಯುನ್ನತ ಹುದ್ದೆಗೇರಿದ ಪ್ರಥಮ ಕನ್ನಡಿಗರಾಗಿದ್ದಾರೆ.

ಈ ಕುರಿತು ಕರಾಟೆ ಇಂಡಿಯಾ ಆರ್ಗನೈಜೇಷನ್ ಅಧ್ಯಕ್ಷ ಭರತ್ ಶರ್ಮಾ ಅವರ ಅನುಮೋದನೆಯೊಂದಿಗೆ ನೇಮಕಾತಿ ಆದೇಶ ಹೊರಡಿಸಿರುವ ಕರಾಟೆ ಇಂಡಿಯಾ ಆರ್ಗನೈಜೇಷನ್‌ನ ಸೆಕ್ರೆಟರಿ ಜನರಲ್ ಸಂಜೀವ್ ಕುಮಾರ್ ಜಂಗ್ರ, ಅರುಣ್ ಮಾಚಯ್ಯ ಅವರು ಕಳೆದ ಐದು ದಶಕಗಳಿಂದ ಕರಾಟೆಯಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸಿ ಮಹತ್ತರವಾದ ಜವಾಬ್ದಾರಿ ವಹಿಸಲಾಗಿದ್ದು, ಅದನ್ನು ಅವರು ಸಮರ್ಥವಾಗಿ ನಿರ್ವಹಿಸಲಿದ್ದಾರೆ ಎಂಬ ಅಚಲ ವಿಶ್ವಾಸ ಹೊಂದಲಾಗಿದೆ ಎಂದು ಹೇಳಿದ್ದಾರೆ.

ಇವರೊಂದಿಗೆ ಕರ್ನಾಟಕ ಕರಾಟೆ ತಂಡದ ಮಾಜಿ ನಾಯಕ, ವಿಶ್ವ ಕರಾಟೆ ಒಕ್ಕೂಟದ ಹಲವಾರು ಚಾಂಪಿಯನ್‌ಶಿಪ್‌ಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ, ಕರ್ನಾಟಕ ರಾಜ್ಯ ಕರಾಟೆ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿಯಾಗಿರುವ ಭಾರ್ಗವ್ ರೆಡ್ಡಿ ಅವರನ್ನು ಕರಾಟೆ ಇಂಡಿಯಾ ಆರ್ಗನೈಜೇಷನ್‌ನ ಅಥ್ಲೆಟಿಕ್ ಆಯೋಗದ ನೂತನ ಅಧ್ಯಕ್ಷರಾಗಿಯೂ ನೇಮಕಗೊಳಿಸಲಾಗಿದೆ ಎಂದು ನೇಮಕಾತಿ ಆದೇಶದಲ್ಲಿ ತಿಳಿಸಿದ್ದಾರೆ.



ಕರಾಟೆ ಇಂಡಿಯಾ ಆರ್ಗನೈಜೇಷನ್‌ನ ಅಥ್ಲೆಟಿಕ್ ಆಯೋಗದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಭಾರ್ಗವ್ ರೆಡ್ಡಿ ಅವರೊಂದಿಗೆ ಅರುಣ್ ಮಾಚಯ್ಯ

ವಿಶ್ವ ಶಿಟೋರಿಯೋ ಕರಾಟೆ ಮಂಡಳಿಯ ಏಷ್ಯಾ ಮತ್ತು ಪೆಸಿಫಿಕ್ ಖಂಡದ ನಿರ್ದೇಶಕರಾಗಿ ವಿಶ್ವಮಟ್ಟದಲ್ಲಿ ಏಷ್ಯಾ ಮತ್ತು ಪೆಸಿಫಿಕ್ ಖಂಡವನ್ನು ಪ್ರತಿನಿಧಿಸುತ್ತಿರುವ ಅರುಣ್ ಮಾಚಯ್ಯ, ಇದಲ್ಲದೆ ಪ್ರಸ್ತುತ ಅಖಿಲ ಭಾರತ ಶಿಟಾರಿಯೋ ಕರಾಟೆ ಸಂಸ್ಥೆಯ ಮತ್ತು ದಕ್ಷಿಣ ಭಾರತ ಕರಾಟೆ ಫೆಡರೇಷನ್ ಅಧ್ಯಕ್ಷರಾಗಿ, ಕರಾಟೆ ಇಂಡಿಯಾ ಆರ್ಗನೈಜೇಷನ್ ಹಿರಿಯ ಉಪಾಧ್ಯಕ್ಷರಾಗಿ, ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಅಂತರರಾಷ್ಟ್ರೀಯ ಕರಾಟೆ ತೀರ್ಪುಗಾರರಾಗಿರುವ ಸಿ.ಎಸ್. ಅರುಣ್ ಮಾಚಯ್ಯ ಅವರು ಕರಾಟೆಯಲ್ಲಿ 8ನೇ ಡ್ಯಾನ್ ಬ್ಲಾಕ್‌ಬೆಲ್ಟ್ ಪದವೀಧರಾಗಿದ್ದಾರೆ. 2022ರಲ್ಲಿ ಲಂಡನ್‌ನ ಬರ್ಮಿಂಗ್ ಹ್ಯಾಮ್‌ನಲ್ಲಿ ನಡೆದ ಕಾಮನ್ವೆಲ್ತ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಅರುಣ್ ಮಾಚಯ್ಯ, ಈ ಹಿಂದೆ ವಿಶ್ವದ ಹಲವೆಡೆ ನಡೆದ ಹಲವು ಅಂತರರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.

ಜ್ಞಾನವನ್ನು ಎಲ್ಲಾ ಜನರಿಗೂ ತಲುಪಿಸುವುದೇ ಶಿಕ್ಷಕರ ಕರ್ತವ್ಯ



ವಿರಾಜಪೇಟೆ, ಮೇ 25– ಜ್ಞಾನವನ್ನು ಜನರಿಗೆ ತಲುಪಿಸುವುದು ಶಿಕ್ಷಕರ ಕರ್ತವ್ಯ. ಎಲ್ಲಾ ಕ್ಷೇತ್ರಗಳಿಗಿಂತ ಶಿಕ್ಷಕರ ವೃತ್ತಿಗೆ ಹೆಚ್ಚು ಗೌರವವಿದೆ ಎಂದು ಬೆಂಗಳೂರಿನ ಆರ್.ವಿ.ಶಿಕ್ಷಕರ ತರಬೇತಿ ಕಾಲೇಜಿನ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಪಿ.ಬಿ.ಕೆ. ಕಿಶೋರ್ ಅಭಿಪ್ರಾಯಪಟ್ಟಿದ್ದಾರೆ.

ವಿರಾಜಪೇಟೆ ಸರ್ವೋದಯ ಶಿಕ್ಷಕರ ತರಬೇತಿ ಸಂಸ್ಥೆ ಪೂರ್ವ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಶಿಕ್ಷಕರು ತಮ್ಮ ವೃತ್ತಿ ಪ್ರೀತಿಸುವುದರೊಂದಿಗೆ ವೃತ್ತಿ ಬಗ್ಗೆ ಹೆಮ್ಮೆ ಪಡುವ ಮೂಲಕ ದೃಢವಾದ ಆತ್ಮ ವಿಶ್ವಾಸವನ್ನು ಹೊಂದಬೇಕು. ಶಿಕ್ಷಕರಿಗೆ ವೃತ್ತಿಯ ಮೇಲೆ ಬದ್ಧತೆ ಅಗತ್ಯ. ಉತ್ತಮ ಶಿಕ್ಷಕರೆಂದರೆ ಉತ್ತಮ ಭೋದನೆ ಮಾಡವಂತವರು ಎಂದರು.

ಮೈಸೂರಿನ ಆರ್.ಐ.ಇ. ಕಾಲೇಜಿನ ಪ್ರಾಧ್ಯಾಪಕ ಡಾ.ಸೋಮಶೇಖರ್ ವಿಶೇಷ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಶಿಕ್ಷಣ ಎಂಬುದು ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಬಹುಮುಖ್ಯ. ಶಿಕ್ಷಕ ವೃತ್ತಿಯಲ್ಲಿ ಹೊಸ ಆವಿಷ್ಕಾರಗಳು ತುಂಬಿರಬೇಕು. ನೂತನ ವಿನ್ಯಾಸಗಳೊಂದಿಗೆ ವೃತ್ತಿಯನ್ನು ವಿನೂತನಗೊಳಿಸಲು ಶಿಕ್ಷಕರು ಪ್ರಯತ್ನಿಸಬೇಕು. ಶಿಕ್ಷಕನ ಪಾತ್ರ ಜವಾಬ್ದಾರಿಯಿಂದಿರಬೇಕು. ನಾವು ಪಡೆದ ಶಿಕ್ಷಣವನ್ನು ಬೇರೆಯವರಿಗೆ ನೀಡುವುದು ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಶಿಕ್ಷಕನು ತಾನೊಬ್ಬ ಸಂಘಟನಾ ಚಾತುರ್ಯವಿರುವ ನಾಯಕ ಎಂಬ ಪ್ರಜ್ಞೆ ಇಟ್ಟುಕೊಳ್ಳಬೇಕು ಎಂದರು.

ಸರ್ವೋದಯ ಶಿಕ್ಷಣ ಸಂಸ್ಥೆ ಕೋಶಾಧಿಕಾರಿ ವಾಸಂತಿ ಶರತ್‌ಚಂದ್ರ ಅಧ್ಯಕ್ಷತೆ ವಹಿಸಿದ್ದರು, ವಿದ್ಯಾ ಸಂಸ್ಥೆಯ ಅಧ್ಯಕ್ಷೆ ಸಿ.ಜಿ.ಸೂರ್ಯಕುಮಾರಿ ಉಪಸ್ಥಿತರಿದ್ದು ಮಾತನಾಡಿದರು, ಪ್ರಾಂಶುಪಾಲೆ ಡಾ.ಎಂ.ವಾಣಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಮಲ ಪ್ರಾರ್ಥಿಸಿದರೆ, ನಾಝಿರಾ ವಂದಿಸಿದರು.

ಹಳಿ ತಪ್ಪುತ್ತಿರುವ ಸೂರ್ಲಬ್ಬಿಯ ವಿದ್ಯಾರ್ಥಿನಿ ಹತ್ಯೆ ತನಿಖೆ

ಸಿಐಡಿ ತನಿಖೆಗೆ ಗರ್ವಾಲೆ ಕೊಡವ ಸಮಾಜ, ಏಳ್‌ನಾಡ್ ಕೊಡವ ಸಂಘಗಳ ಆಗ್ರಹ

ಮಡಿಕೇರಿ, ಮೇ 25– ಸೋಮವಾರಪೇಟೆ ತಾಲೂಕಿನ ಸೂರ್ಲಬ್ಬಿಯ ಕುಂಬಾರಗಡಿಗೆಯಲ್ಲಿ ಇತ್ತೀಚೆಗೆ ನಡೆದ ಶಾಲಾ ವಿದ್ಯಾರ್ಥಿನಿ ಮೀನಾ(16) ಹತ್ಯೆ ಪ್ರಕರಣದ ತನಿಖೆ ಸಮರ್ಪಕವಾಗಿ ನಡೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಬೇಕೆಂದು ಗರ್ವಾಲೆ ಕೊಡವ ಸಮಾಜ ಮತ್ತು ಬೆಂಗಳೂರಿನ ಏಳ್‌ನಾಡ್ ಕೊಡವ ಸಂಘಗಳು ಆಗ್ರಹಿಸಿವೆ. ಸುದ್ದಿಗೋಷ್ಠಿಯಲ್ಲಿ ಏಳ್‌ನಾಡ್ ಕೊಡವ ಸಂಘದ ಅಧ್ಯಕ್ಷರಾದ ಮಂಡೀರ ಬೋಪಯ್ಯ ಮಾತನಾಡಿ, ಕುಂಬಾರಗಡಿಗೆಯ ನಿವಾಸಿ ವಿದ್ಯಾರ್ಥಿನಿ ಮೀನಾಳ ಹತ್ಯೆಗೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸರಿಂದ ಸಮರ್ಪಕ ತನಿಖೆ ನಡೆಯುತ್ತಿಲ್ಲ ಬದಲಾಗಿ ತನಿಖೆಯ ಹಾದಿ ತಪ್ಪಿಸುವ ಕೆಲಸ ಆಗುತ್ತಿದೆ ಎಂದು ಆರೋಪಿಸಿದರು.

ಸಂಶಯಾಸ್ಪದ ತನಿಖೆ: ಗರ್ವಾಲೆ ಕೊಡವ ಸಮಾಜ ನಿರ್ದೇಶಕರಾದ ಸರ್ಕಂಡ ಸೋಮಯ್ಯ ಮಾತನಾಡಿ, ಕತ್ತನ್ನು ಕಡಿದು ವಿದ್ಯಾರ್ಥಿನಿಯನ್ನು ಹತ್ಯೆ ಮಾಡಿರುವ ಘಟನೆ ಇಡೀ ಮನುಕುಲವೇ ತಲೆ ತಗ್ಗಿಸುವ ಕೃತ್ಯವೆಂದು ಬೇಸರ ವ್ಯಕ್ತಪಡಿಸಿದರು. ಘಟನೆ ನಡೆದ ಬಳಿಕ ಪೊಲೀಸರಿಂದ ನಡೆದ ತನಿಖಾ ಕಾರ್ಯ ಹಲವು ಸಂಶಯಗಳನ್ನು ಹುಟ್ಟು ಹಾಕಿದೆ. ಆರೋಪಿ ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದರೂ ಕೂಡ ಪೊಲೀಸರು ತಾವೇ ಬಂಧಿಸಿರುವುದಾಗಿ ಹೇಳುತ್ತಿದ್ದಾರೆ. ಸ್ಥಳ ಮಹಜರು ನಡೆಸುವ ಸಂದರ್ಭ ಪೊಲೀಸರಿಗೆ ದುಷ್ಕೃತ್ಯಕ್ಕೆ ಬಳಸಿದ ಮಾರಕಾಯುಧ ಸಿಕ್ಕಿತ್ತು ಅನತಿ ದೂರದಲ್ಲಿಯೆ ಮೀನಾಳ ರುಂಡವಿದ್ದರು ಅದನ್ನು ಆ ವೇಳೆಯೇ ಪತ್ತೆ ಮಾಡಲು ಏತಕ್ಕೆ ಸಾಧ್ಯವಾಗಿಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

ಜೊತೆಗಾರರ ವಿಚಾರಣೆಯಾಗಲಿ: ದುಷ್ಕೃತ್ಯ ಎಸಗಿದ ಆರೋಪಿಯನ್ನು ವಾಹನದಲ್ಲಿ ಕರೆತಂದ ವ್ಯಕ್ತಿ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿದ್ದು, ಸ್ಥಳೀಯ ಪ್ರಭಾವಿಯಾಗಿದ್ದಾನೆ. ಈತನ ವಾಹನವನ್ನು ಪೊಲೀಸರು ವಶಕ್ಕೆ ಪಡೆದಿದ್ದರು ಆರೋಪಿಯೊಂದಿಗೆ ಇದ್ದ ವ್ಯಕ್ತಿ ಇಂದಿಗೂ ಸೂಕ್ತ ವಿಚಾರಣೆಯಿಲ್ಲದೆ ಹೊರಗಿದ್ದಾನೆಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಕೊಲೆ ಕೃತ್ಯ ಎಸಗಿದ ಆರೋಪಿಯೊಂದಿಗೆ ಇದ್ದವರನ್ನು ಕೂಡ ಬಂಧಿಸಿ ಸೂಕ್ತ ವಿಚಾರಣೆ ಮತ್ತು ತನಿಖೆ ನಡೆಸುವುದು ಅತ್ಯವಶ್ಯವೆಂದರು. ಕೃತ್ಯ ನಡೆದ ಸ್ಥಳದಲ್ಲಿದ್ದ ಕೆಲವರು ಅಲ್ಲಿಂದ ಪರಾರಿಯಾಗಿದ್ದಾರೆ. ಆ ವ್ಯಕ್ತಿಗಳು ತಪ್ಪು ಮಾಡಿಲ್ಲ ಎಂದಾದಲ್ಲಿ ದುಷ್ಕೃತ್ಯ ನಡೆದ ಸಂದರ್ಭ ಪೊಲೀಸರಿಗೆ ಅಥವಾ ಸ್ಥಳೀಯರಿಗೆ ಮಾಹಿತಿಯನ್ನು ಏಕೆ ನೀಡಿಲ್ಲವೆಂದು ಪ್ರಶ್ನಿಸಿದ ಅವರು, ಹಲವು ವಿಚಾರಗಳು ಅನುಮಾನಕ್ಕೆ ಆಸ್ಪದವನ್ನು ನೀಡುತ್ತಿದೆ. ಈ ನಿಟ್ಟಿನಲ್ಲಿ ನಡೆಯದಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಸಂಘಟನೆಗಳ ಮುಖಂಡರು.

ಶಿಕ್ಷಣದಿಂದ ಮಾತ್ರ ಸಮಾಜದ ಅಭಿವೃದ್ಧಿ

ಮಡಿಕೇರಿ, ಮೇ 25–ಶಿಕ್ಷಣದಿಂದ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಮೊಗೇರ ಸೇವಾ ಸಮಾಜದ ಜಿಲ್ಲಾ ಗೌರವ ಸಲಹೆಗಾರ ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಸದಸ್ಯ ಪಿ.ಎಂ. ರವಿ ಹೇಳಿದರು. ಸೋಮವಾರಪೇಟೆಯ, ಬಜೆಗುಂಡಿ ಮೊಗೇರ ಸೇವಾ ಸಮಾಜ ಮತ್ತು ಕುಸುಬೂರು ಮೊಗೇರ ಗ್ರಾಮ ಸಮಿತಿಯ ವತಿಯಿಂದ ಕುಸುಬೂರಿನಲ್ಲಿ ಮೊಗೇರ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜವು ಬಲಿಷ್ಠವಾಗಬೇಕಾದರೆ ಶಿಕ್ಷಣವು ಪ್ರಮುಖವಾಗಿದ್ದು, ಪೋಷಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ನೀಡುವಲ್ಲಿ ಶ್ರಮವಹಿಸಬೇಕೆಂದರು. ಪ್ರಸ್ತುತ ದಿನಗಳಲ್ಲಿ ಮೊಗೇರ ಸಮುದಾಯದವರು ಎಲ್ಲಾ ಕ್ಷೇತ್ರದಲ್ಲೂ ಮುಂದೆ ಬರುತ್ತಿದ್ದು, ಸಮಾಜದ ಅಭಿವೃದ್ಧಿಗೆ ಎಲ್ಲರ ಕೊಡುಗೆ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಮಾಜ ಬಾಂಧವರು ಕೈಜೋಡಿಸುವಂತೆ ಮನವಿ ಮಾಡಿದರು. ವಿದ್ಯಾರ್ಥಿಗಳಿಗೆ ಮಕ್ಕಳಿಗೆ ಸರಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದೇವೆ ಎಂಬ ಕೀಳರಿಮೆ ಬೇಡ. ಸರ್ಕಾರಿ ಶಾಲೆಯಲ್ಲೂ ಗುಣಮಟ್ಟದ ಶಿಕ್ಷಣ ಸಿಗುತ್ತಿದ್ದು, ಸರ್ಕಾರದ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ ಗ್ರಾಮ ಶಾಖೆಯ ಅಧ್ಯಕ್ಷ ಹೆಚ್.ಬಿ.ರಾಮಚಂದ್ರ ಮಾತನಾಡಿ, ಪೋಷಕರು ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಗಮನ ಹರಿಸುವಂತೆ ಸಲಹೆ ನೀಡಿದರು.

ಜಲ ಸಂರಕ್ಷಣೆಗಾಗಿ ವಿದ್ಯಾರ್ಥಿಗಳಿಂದ ಮೆರವಣಿಗೆ...



ನೀರನ್ನು ಉಳಿಸಬೇಕು, ಅಂತರ್ಜಲ ಮಟ್ಟ ಹೆಚ್ಚಿಸುವ ಮೂಲಕ ಜಲಸಂರಕ್ಷಣೆ ಮಾಡಬೇಕು ಎಂದು ವಿರಾಜಪೇಟೆಯ ಪಂಜಾರುಪೇಟೆಯಲ್ಲಿರುವ ಸರ್ವೋದಯ ಮಹಾವಿದ್ಯಾಲಯದ ಬಿಎಡ್ ವಿದ್ಯಾರ್ಥಿಗಳು ನಗರದ ಮುಖ್ಯ ಬೀದಿಯಲ್ಲಿ ಮೆರವಣಿಗೆ ನಡೆಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಮೆರವಣಿಗೆ ಸಂದರ್ಭ ವಿದ್ಯಾಸಂಸ್ಥೆಯ ಭೋದಕ ವರ್ಗದ ಡಿ.ಪದ್ಮಲತಾ, ಕೆ.ಎನ್.ರಾಜಶೇಖರ್ ಹಾಗೂ ವಿದ್ಯಾರ್ಥಿಗಳು ಇದ್ದರು.

ನಾಳೆಯಿಂದ ಮೆಂದರೆಯಲ್ಲಿ ಪುನರ್ವಸತಿಗಾಗಿ ಸರ್ವೇ ಕಾರ್ಯ

●ಉಪವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಮೂರು ದಿನ ಸರ್ವೇ ●ಪಾಲಾರ್‌ನಲ್ಲಿ ಪುನರ್ವಸತಿ ಕಲ್ಪಿಸಲು ಚಿಂತನೆ

ಚಾಮರಾಜನಗರ, ಮೇ 25– ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮದ ಸಮೀಪವಿರುವ ಮೆಂದರೆ ಗ್ರಾಮಸ್ಥರಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಮೇ 27ರಿಂದ ಸರ್ವೇ ಕಾರ್ಯ ನಡೆಯಲಿದೆ.

ಇತ್ತೀಚೆಗೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಹಾಗೂ ಅಧಿಕಾರಿಗಳು ಮೆಂದರೆ ಗ್ರಾಮಕ್ಕೆ ಭೇಟಿ ನೀಡಿದ್ದ ವೇಳೆ ಗ್ರಾಮಸ್ಥರು ತಮಗೆ ಪುನರ್ವಸತಿ ಕಲ್ಪಿಸುವಂತೆ ಮನವಿ ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿರುವ ಜಿಲ್ಲಾಧಿಕಾರಿಗಳು ಮೆಂದರೆ ಗ್ರಾಮದಲ್ಲಿ ಜಂಟಿ ಸರ್ವೇ ನಡೆಸಲು ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿ ಅವರ ಉಸ್ತುವಾರಿಯಲ್ಲಿ ಇದೇ 27ರಂದು ಸರ್ವೇ ಕಾರ್ಯ ಆರಂಭವಾಗಲಿದೆ.



ಮೆಂದರೆ ಗ್ರಾಮದ ಒಂದು ನೋಟ

ಮೂರು ದಿನಗಳ ಕಾಲ ಸರ್ವೇ: ಮೇ 27ರಿಂದ ಮೂರು ದಿನಗಳ ಕಾಲ ಮೆಂದರೆ ಗ್ರಾಮದಲ್ಲಿ ಸರ್ವೇ ಕಾರ್ಯ ನಡೆಸಲು ಅಧಿಕಾರಿಗಳು ಸಜ್ಜುಗೊಂಡಿದ್ದು, ಗ್ರಾಮದಲ್ಲಿ ಎಷ್ಟು ಕುಟುಂಬಗಳಿವೆ. ವಿದ್ಯಾವಂತರು, ಅವಿದ್ಯಾವಂತರು ಎಷ್ಟು ಮಂದಿ ಇದ್ದಾರೆ. ಎಲ್ಲರೂ ಯಾವ ವೃತ್ತಿ ಮಾಡುತ್ತಿದ್ದಾರೆ. ಪ್ರತಿಯೊಬ್ಬರಿಗೂ ಸ್ವಂತ ಮನೆ, ಜಮೀನು, ಜಾನುವಾರುಗಳು ಇರುವುದರ ಬಗ್ಗೆ ಮಾಹಿತಿ ಕಲೆ ಹಾಕಲಿದ್ದಾರೆ. ಅಲ್ಲದೇ ಆಧಾರ್ ಕಾರ್ಡ್, ಮೊಬೈಲ್ ನಂಬರ್, ಗುರುತಿನ ಚೀಟಿ ಸೇರಿದಂತೆ 24 ಪ್ರಮುಖ ಅಂಶಗಳನ್ನು ಗುರುತಿಸಲು ಈಗಾಗಲೇ ಕಮಿಟಿ ರಚನೆ ಮಾಡಲಾಗಿದೆ ಎಂದು ಉಪವಿಭಾಗಾಧಿಕಾರಿ ಶಿವಮೂರ್ತಿ ಇತ್ತೀಚೆಗೆ ಕೊಳ್ಳೇಗಾಲದಲ್ಲಿ ಅಧಿಕಾರಿಗಳ ಸಭೆ ನಡೆಸಿ ತಿಳಿಸಿದರು.

ಸರ್ವೇ ನಡೆಸಿದ ನಂತರ ಕಮಿಟಿ ಸದಸ್ಯರು ನೀಡುವ ವರದಿಯ ಆಧಾರದಡಿಯಲ್ಲಿ ಎಲ್ಲಾ ಮಾಹಿತಿಯನ್ನು ಕ್ರೋಢಿಕರಿಸಿ ಮತ್ತೊಮ್ಮೆ ಗ್ರಾಮದಲ್ಲಿ ಗ್ರಾಮಸಭೆ ನಡೆಸಿ, ಸ್ಥಳಾಂತರಕ್ಕೆ ಗ್ರಾಮಸ್ಥರ ಅಭಿಪ್ರಾಯ ಸಂಗ್ರಹ ಮಾಡಲಾಗುವುದು. ಜೂನ್ ಮೊದಲ ವಾರ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಅಂತಿಮ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗುವುದು ಎಂದು ಉಪವಿಭಾಗಾಧಿಕಾರಿ ಮಾಹಿತಿ ನೀಡಿದ್ದಾರೆ.

ಪಾಲಾರ್‌ನಲ್ಲಿ ಪುನರ್ವಸತಿಗೆ ಒತ್ತಾಯ: ಪಾಲಾರ್‌ನಲ್ಲಿ ಈಗಾಗಲೇ 90 ಸೋಲಿಗ ಕುಟುಂಬಗಳು ವಾಸಿಸುತ್ತಿವೆ. ಇವರೆಲ್ಲರೂ ಮೆಂದರೆಯಲ್ಲಿರುವ ಸೋಲಿಗರ ಸಂಬಂಧಿಕರು, ಕುಟುಂಬದವರಾಗಿದ್ದಾರೆ. ಹಾಗಾಗಿ, ಅದೇ ಸ್ಥಳಕ್ಕೆ ಸ್ಥಳಾಂತರ ಮಾಡುವಂತೆ ಮೆಂದರೆ ಗ್ರಾಮಸ್ಥರು ಜಿಲ್ಲಾಡಳಿತವನ್ನು ಒತ್ತಾಯಿಸುತ್ತಿದ್ದಾರೆ.

ಸಮುದಾಯದ ಬದುಕಿಗೆ ನೆರವಾಗಿ: ಮೆಂದರೆಯಲ್ಲಿ ಶೇ. 60ರಷ್ಟು ಸೋಲಿಗ ಕುಟುಂಬಗಳಿವೆ. 300ಕ್ಕೂ ಹೆಚ್ಚು ಜನಸಂಖ್ಯೆ ಇದೆ. ಇವರಿಗೆ ಪುಟ್ಟ ಮನೆಗಳನ್ನು ಬಿಟ್ಟು ಬೇರೇನೂ ಇಲ್ಲ. ಕೂಲಿಯೇ ಜೀವನಾಧಾರ. ಸ್ಥಳೀಯವಾಗಿ ಕೂಲಿ ಸಿಗದಿದ್ದರೆ, ನೆರೆಯ ತಮಿಳುನಾಡಿಗೆ ಹೋಗಿ ಕೆಲಸ ಮಾಡುತ್ತಾರೆ. ಅರಣ್ಯ ಹಕ್ಕು ಕಾಯ್ದೆಯ ಅಡಿಯಲ್ಲಿ ಜಮೀನು ನೀಡಬೇಕು ಎಂಬ ಕೂಗು ಹಲವು ವರ್ಷಗಳಿಂದ ಕೇಳಿ ಬರುತ್ತಿದೆ. ಈ ಸಂಬಂಧ ಎಲ್ಲ ಕುಟುಂಬಗಳವರೂ ಅರ್ಜಿ ಹಾಕಿದ್ದರು. ಆದರೆ, ದಾಖಲೆಗಳು ಇಲ್ಲ ಎಂಬ ಕಾರಣಕ್ಕೆ ವಿಳಂಬವಾಗಿತ್ತು.

ಪ್ರಸ್ತುತ ದಾಖಲೆಗಳನ್ನು ಸಿದ್ಧಪಡಿಸಲಾಗಿದ್ದು, ಪಾಲಾರ್‌ನಲ್ಲಿ ಪುನರ್ವಸತಿ ಕಲ್ಪಿಸಬೇಕು ಎಂಬ ಬೇಡಿಕೆ ಇಟ್ಟಿದ್ದಾರೆ. ಜಿಲ್ಲಾಡಳಿತ ಇದಕ್ಕೆ ಸ್ಪಂದಿಸಬೇಕು. ಅರಣ್ಯ ಹಕ್ಕು ಕಾಯ್ದೆಯ ಅಡಿಯಲ್ಲಿ ಭೂಮಿ ನೀಡಿ ಸಮುದಾಯದವರ ಬದುಕಿಗೆ ನೆರವಾಗಬೇಕು ಎಂದು ಸೋಲಿಗ ಮುಖಂಡ ಮಾದಯ್ಯ ತಿಳಿಸಿದರು.

ಹನೂರಲ್ಲಿ ಒಂದೇ ರಾತ್ರಿ ಎರಡು ಮನೆ, ದೇವಸ್ಥಾನದಲ್ಲಿ ಕಳವು

ಹನೂರು,ಮೇ.25– ಪಟ್ಟಣದ ಮೂರನೇ ವಾರ್ಡಿನ ಸೊಪ್ಪಿನಕೇರಿ ಹಾಗೂ ದೇವಾಂಗಪೇಟೆ ಬಡಾವಣೆಯಲ್ಲಿರುವ ಎರಡು ಮನೆಗಳು ಹಾಗೂ ಚೌಡೇಶ್ವರಿ ದೇವಾಲಯದ ಬಾಗಿಲು ಮುರಿದು, ಹುಂಡಿ ಒಡೆದು ಕಳವು ಮಾಡಿರುವ ಘಟನೆ ಜರುಗಿದೆ.

ಮೂರನೇ ವಾರ್ಡಿನ ಸೊಪ್ಪನಕೇರಿ ಬಡಾವಣೆಯ ಗೋವಿಂದರಾಜು ಅವರ ಮನೆಬೀಗ ಮುರಿದು 69 ಸಾವಿರ ನಗದು, 10 ಗ್ರಾಂ ಚಿನ್ನಾಭರಣ, ದೇವಾಂಗಪೇಟೆ ಸರಸ್ವತಿಯವರ ಮನೆ ಬೀಗ ಮುರಿದು 20 ಸಾವಿರ ನಗದು, ಒಂದು ಜೊತೆ ಚಿನ್ನದ ಓಲೆಯನ್ನು ಖದೀಮರು ಕಳವು ಮಾಡಿದ್ದಾರೆ ಅಲ್ಲದೇ ದೇವಾಂಗಪೇಟೆಯ ಚೌಡೇಶ್ವರಿ ದೇವಸ್ಥಾನದ ಬೀಗವನ್ನು ಮುರಿದು, ಹುಂಡಿ ಹೊತ್ತೊಯ್ದು ಅದರಲ್ಲಿದ್ದ ಹಣ ದೋಚಿದ ನಂತರ ಅದೇ ಬಡಾವಣೆಯಲ್ಲಿ ಹುಂಡಿಯನ್ನು ಬಿಸಾಡಿ ಪರಾರಿಯಾಗಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಘಟನೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.



ಹನೂರಿನ ಚೌಡೇಶ್ವರಿ ದೇವಸ್ಥಾನದ ಬಳಿ ಪೊಲೀಸರು ಪರಿಶೀಲನೆ ನಡೆಸುತ್ತಿರುವುದು.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಪರ ಪುಟ್ಟರಂಗಶೆಟ್ಟಿ ಪ್ರಚಾರ

ಚಾಮರಾಜನಗರ,ಮೇ.25– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡರಿಗೆ ಪ್ರಥಮ ಪ್ರಾಶಸ್ತ್ಯ ಮತಗಳನ್ನು ನೀಡಿ, ಐದನೇ ಬಾರಿಗೆ ಅವರು ವಿಧಾನ ಪರಿಷತ್ ಪ್ರವೇಶ ಮಾಡಲು ಅವಕಾಶ ಮಾಡಿಕೊಡಿ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಮನವಿ ಮಾಡಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೆಎಸ್‌ಎಸ್ ಮಹಿಳಾ ಕಾಲೇಜುಗಳಿಗೆ ತೆರಳಿ ಅಲ್ಲಿನ ಶಿಕ್ಷಕ ಮತದಾರರನ್ನು ಭೇಟಿ ಮಾಡಿ, ಕರಪತ್ರಗಳನ್ನು ನೀಡಿ, ಕಾಂಗ್ರೆಸ್ ಬೆಂಬಲಿಸುವಂತೆ ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಆಡಳಿತ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಅನುಭವಿಗಳು, ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದ ಬಗ್ಗೆ ಅಪಾರವಾಗಿ ತಿಳಿದುಕೊಂಡಿರುವ ಉತ್ತಮ ಸಂಸದೀಯ ಪಟುಗಳಾದ ಮರಿತಿಬ್ಬೇಗೌಡರು ನಿಮ್ಮೆಲ್ಲರ ಪ್ರತಿನಿಧಿಯಾಗಿ ಮೇಲ್ಮನೆಗೆ ಹೋಗುವುದು ಸೂಕ್ತ. ಈಗಾಗಲೇ ನಾಲ್ಕು ಬಾರಿ ಆಯ್ಕೆಯಾಗಿ ನಿಮ್ಮೆಲ್ಲರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಿದ್ದಾರೆ. ಈ ಬಾರಿಯು ಅವರನ್ನು ಪರಿಷತ್‌ಗೆ ಕಳುಹಿಸಿಕೊಟ್ಟರೆ, ನಿಮ್ಮೆಲ್ಲರ ಧ್ವನಿಯಾಗಿ ಕೆಲಸ ಮಾಡುವ ಜೊತೆಗೆ ಆಡಳಿತ ಪಕ್ಷದ ಸದಸ್ಯರಾಗಿರುವ ಕಾರಣದಿಂದ ಹೆಚ್ಚಿನ ಸೇವೆ ಮಾಡಲು ಸದಾವಕಾಶ ಮಾಡಿಕೊಟ್ಟಂತೆ ಆಗುತ್ತದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಿಕ್ಷಕರ ಪರವಾಗಿದ್ದು, ಈ ಹಿಂದಿನ ಚುನಾವಣೆಯಲ್ಲಿ ಘೋಷಣೆ ಮಾಡಿರುವಂತೆ ಹಳೇ ಪಿಂಚಣಿ ಪದ್ಧತಿಯನ್ನು ಮರು ಜಾರಿ ಮಾಡಲು ಮುಂದಾಗಿದ್ದಾರೆ. ಜೊತೆಗೆ ಮರಿತಿಬ್ಬೇಗೌಡರು ನಾಲ್ಕು ಬಾರಿ ಆಯ್ಕೆಯಾಗಿ ಶಿಕ್ಷಕರ ಸಮಸ್ಯೆಗಳ ಬಗ್ಗೆ ಅತಿಹೆಚ್ಚು ತಿಳಿದುಕೊಂಡಿದ್ದಾರೆ. ಅವರು ಪರಿಷತ್‌ನಲ್ಲಿ ಕೇಳಿರುವ ಪ್ರಶ್ನೆಗಳು ಹಾಗು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹರಿಸುವ ಬಹಳಷ್ಟು ಕಾರ್ಯಕ್ರಮಗಳ ಕುರಿತು ಕಿರು ಹೊತ್ತಿಗೆಯನ್ನೇ ಬಿಡುಗಡೆ ಮಾಡಿದ್ದಾರೆ. ಹೀಗಾಗಿ ಶಿಕ್ಷಕರು ಮತ್ತೊಮ್ಮೆ ಮರಿತಿಬ್ಬೇಗೌಡರಿಗೆ ಮತ ನೀಡಿ, ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್, ಮುಖಂಡರಾದ ರವಿ, ಆಯೂಬ್ ಖಾನ್, ಸ್ವಾಮಿ, ಕಾಲೇಜಿನ ಪ್ರಾಂಶುಪಾಲರಾದ ಚಂದ್ರಮ್ಮ, ಮಹದೇವಸ್ವಾಮಿ, ದೇವರಾಜು, ಉಪನ್ಯಾಸಕರ ವೃಂದದವರು ಇದ್ದರು.



ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮತಯಾಚಿಸಿದರು.

ಚಾ.ನಗರದಲ್ಲಿ ಮಾತೃ ದಿನಾಚರಣೆ

ಚಾಮರಾಜನಗರ, ಮೇ.25– ತಾಯಿ ಎನ್ನುವ ಪದ ಬಹಳ ಶ್ರೇಷ್ಠವಾದದು, ಮಕ್ಕಳ ಬೆಳವಣಿಗೆಗೆ ತಾಯಿಯ ಪಾತ್ರ ಅಮೂಲ್ಯವಾದುದು ಎಂದು ಬ್ರಾಹ್ಮೀ ಮಹಿಳಾ ಸಂಘದ ಕಾರ್ಯದರ್ಶಿ ಲಕ್ಷ್ಮಿ ವಾಸುದೇವರಾವ್ ತಿಳಿಸಿದರು.

ನಗರದ ಶ್ರೀರಾಮ ಮಂದಿರದಲ್ಲಿ ಬ್ರಾಹ್ಮೀ ಮಹಿಳಾ ಸಂಘದಿಂದ ನಡೆದ ಮಾತೃ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ತಾಯಿಯಂದಿರನ್ನು ಸನ್ಮಾನಿಸಿ ಅವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಗೌರವ ಅಧ್ಯಕ್ಷೆ ವತ್ಸಲಾ ರಾಜಗೋಪಾಲ್ ಮಾತನಾಡಿದರು ಈ ವೇಳೆ ರಾಧಾ ಶೇಷಾಚಲ, ರಮ್ಯ ಶ್ರೀಧರ್, ಉಮಾ ಹೆಗ್ಡೆ, ಪಾರ್ವತಿ ಸುದರ್ಶನ್, ರೇಖ, ಲಲಿತಾಂಭ, ವಿಜಯ, ಸರೋಜಮ್ಮ, ನಾಗರತ್ನ, ನಂದಿನಿ, ಸವಿತ, ಶೋಭ ಸತ್ಯ, ಹಾಗೂ ರಾಯರ ಮಠದ ಪವನಚಾರ್ ಉಪಸ್ಥಿತರಿದ್ದರು.

ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ಸಲಹೆ

ಚಾಮರಾಜನಗರ,ಮೇ.25– 'ಅನ್ನದಾತ ಸುಖೀ ಭವ' ಎಂದು ಹೇಳುತ್ತಾರೆ. ಆದರೆ ಇಂದಿನ ಕೆಲವು ರೈತರು ಒತ್ತಡದಿಂದಾಗಿ ದುಶ್ಚಟಗಳಿಗೆ ಸಿಲುಕಿ ತಮ್ಮ ಜೀವನ ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಮೌಂಟ್ ಅಬು ರಾಜಸ್ಥಾನ ಗ್ರಾಮೀಣ ಸೇವಾ ವಿಭಾಗದ ಅಂತರಾಷ್ಟ್ರೀಯ ಅಧ್ಯಕ್ಷ ರಾಜಯೋಗಿ ಬ್ರಹ್ಮಾಕುಮಾರ ರಾಜು ಭಾಯೀಜೀಯವರು ವಿಷಾದ ವ್ಯಕ್ತಪಡಿಸಿದರು.

ಅಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಕಾಶ ಭವನದಲ್ಲಿ ಏರ್ಪಡಿಸಲಾಗಿದ್ದ ಶಾಶ್ವತ ಯೋಗಿಕ ಬೇಸಾಯದ ಬಗ್ಗೆ ರೈತರನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ರೈತರು ತಮ್ಮ ಜೀವನವನ್ನು ಸುಖಮಯ ಮಾಡಿಕೊಳ್ಳಲು ತಮ್ಮ ಪರಿವಾರಕ್ಕಾದರೂ ಬೇಕಾಗುವಷ್ಟು ವಿಷಮುಕ್ತ ಬೇಸಾಯ ಅಥವ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಮಣ್ಣಿನಲ್ಲಿ ಸತ್ವ ಬೀಜದ ಸತ್ವ ಬೆಳೆಯ ಸತ್ವವನ್ನು ಹೆಚ್ಚಿಸಲು, ಬಳಕೆದಾರರ ಆರೋಗ್ಯವನ್ನು ಹೆಚ್ಚಿಸಲು ಕೊಟ್ಟಿಗೆ ಗೊಬ್ಬರವನ್ನು ಹೆಚ್ಚು ಉಪಯೋಗಿಸುವಂತೆ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ತಾಂತ್ರಿಕ ಅಧಿಕಾರಿ ಡಾ. ಪೂಂಪನಗೌಡ ರೈತರಿಗೆ ಕರೆ ನೀಡಿದರು.

ರಾಜಯೋಗ ಶಿಕ್ಷಣ ತಜ್ಞ ಬ್ರಹ್ಮಾಕುಮಾರ ಪ್ರಾಣೇಶ್ ಜೀ ಮಾತನಾಡಿ, ಕೀಟನಾಶಕ ಸಿಂಪಡಣೆಯಿಂದ ದವಸ ಧಾನ್ಯದಲ್ಲಿರುವ ಪೌಷ್ಟಿಕಾಂಶ, ಮಣ್ಣಿನಲ್ಲಿರುವ ಪೌಷ್ಟಿಕಾಂಶ ಕಡಿಮೆಯಾಗುತ್ತದೆ. ಇದರಿಂದ ಹೃದಯಾಘಾತದಂತಹ ಕಾಯಿಲೆಗಳಿಗೆ ಎಡೆಮಾಡಿಕೊಡುತ್ತದೆ ಎಂದರು. ರೈತ ಹೋರಾಟ ಸಂಘದ ಅಧ್ಯಕ್ಷ ಪ್ರಕಾಶ್ ಮಾತನಾಡಿ, ಸಂಸ್ಥೆಯವರು ರೈತರ ಬಗ್ಗೆ ಕಾಳಜಿ ಇಟ್ಟುಕೊಂಡು ಸಾವಯವ ಕೃಷಿ, ಶಾಶ್ವತ ಯೋಗಿಕ ಕೃಷಿಗೆ ಹೆಚ್ಚು ಒತ್ತು ನೀಡುತ್ತಿರುವುದು ಶ್ಲಾಘನೀಯ ಎಂದರು.



ಶಾಶ್ವತ ಯೋಗಿಕ ಬೇಸಾಯ ಕಾರ್ಯಕ್ರಮವನ್ನು ರಾಜಯೋಗಿ ಬ್ರಹ್ಮಾಕುಮಾರ ರಾಜು ಭಾಯೀಜೀಯವರು ಉದ್ಘಾಟಿಸಿದರು.

ನಾಗಮ್ಮ ನಿಧನ



ಹನೂರು, ಮೇ 25– ಹನೂರು ತಾಲೂಕು ದೊಡ್ಡಾಲತ್ತೂರು ಗ್ರಾಮದ ನಿವಾಸಿ ನಾಗಮ್ಮ ಅವರು ಶುಕ್ರವಾರ ನಿಧನರಾದರು. ಅವರಿಗೆ 68 ವರ್ಷ ವಯಸ್ಸಾಗಿತ್ತು ಮೃತರು ಪತಿ ಸಿದ್ದಯ್ಯ, ಮಕ್ಕಳಾದ ಶಿವು, ಗೌರೀಶ, ಶಶಿಕಲಾ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ದೊಡ್ಡಾಲತ್ತೂರಿನ ತೋಟದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ಪ್ರವಾಸಿಗರ ಜಾತ್ರೆ



ದೇವರಾಜ ಅರಸು ರಸ್ತೆಯಲ್ಲಿ ಟ್ರಾಫಿಕ್ ಜಾಮ್‌ನಿಂದ ನಿಧಾನವಾಗಿ ಸಾಗಿದ ವಾಹನಗಳು.

ಅರಮನೆ ಬಳಿ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ನೆರೆದಿದ್ದರು. ಅರಮನೆ ಒಳಾಂಗಣ ವೀಕ್ಷಣೆಗೆ ಟಿಕೆಟ್ ಕೊಂಡು ಹೋಗುವಾಗ ಗೇಟ್ ಬಳಿ ನೂಕುನುಗ್ಗಲು ಉಂಟಾಗಿತ್ತು. ಮಕ್ಕಳ ಆಟಿಕೆಗಳು, ಸುಟ್ಟ ಜೋಳ, ಚುರುಮುರಿ ಸೇರಿದಂತೆ ತಿಂಡಿ-ತಿನಿಸು ವ್ಯಾಪಾರಿಗಳು, ಟಾಂಗಾ ಗಾಡಿಯವ ಮೊಗದಲ್ಲಿ ಮಂದಹಾಸ ಮೂಡಿತ್ತು. ಮೃಗಾಲಯದಲ್ಲೂ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿತ್ತು. ಚಾಮುಂಡಿ ಬೆಟ್ಟಕ್ಕೆ ಭಕ್ತರ ದಂಡೇ ಹರಿದು ಬಂದಿತ್ತು. ಸರತಿಯಲ್ಲಿ ನಿಂತು ದೇವಿಯ ದರ್ಶನ ಪಡೆದರು. ದೇವಾಲಯದ ಬಳಿ ಪೂಜಾ ಸಾಮಗ್ರಿ ಇನ್ನಿತರ ಮಳಿಗೆಗಳಲ್ಲಿ ವ್ಯಾಪಾರ ಜೋರಾಗಿತ್ತು.

ಭಾರೀ ವಾಹನ ದಟ್ಟಣೆ: ಅರಮನೆ ಸುತ್ತ, ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ವಿನೋಬಾ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಹಾರ್ಡಿಂಜ್ ವೃತ್ತ, ಮಿರ್ಜಾ ರಸ್ತೆ, ಲೋಕರಂಜನ್ ಮಹಲ್ ರಸ್ತೆ, ಇಟ್ಟಿಗೆಗೂಡು ದಸರಾ ವಸ್ತುಪ್ರದರ್ಶನ ರಸ್ತೆ, ಗಾಂಧಿ ವೃತ್ತ, ಇರ್ವಿನ್ ರಸ್ತೆ, ಅಶೋಕ ರಸ್ತೆ, ಸಬರ್ಬನ್ ಬಸ್ ನಿಲ್ದಾಣದ ಬಳಿ, ಜೆಎಲ್‌ಬಿ ರಸ್ತೆ ಸೇರಿದಂತೆ ನಗರದ ಹೃದಯ ಭಾಗದಲ್ಲಿ ವಾಹನ ದಟ್ಟಣೆ ವಿಪರೀತವಾಗಿತ್ತು. ಪಾರ್ಕಿಂಗ್‌ಗೆ ಸ್ಥಳಾವಕಾಶ ಸಿಗದೆ ಹಲವು ವಾಹನಗಳನ್ನು ರಸ್ತೆ ಬದಿ ನಿಲ್ಲಿಸಲಾಗಿತ್ತು. ಇಟ್ಟಿಗೆಗೂಡಿನ ಕ್ರಾಸ್‌ಗಳಲ್ಲೂ ಅನೇಕ ವಾಹನಗಳನ್ನು ನಿಲುಗಡೆ ಮಾಡಲಾಗಿತ್ತು. ಸಬರ್ಬನ್ ಬಸ್ ನಿಲ್ದಾಣದ ಕಮಾನು ಗೇಟ್ ಬಳಿ ಭಾರೀ ದಟ್ಟಣೆ ಉಂಟಾಗಿ, ಸಾರಿಗೆ ಬಸ್‌ಗಳ ಸಂಚಾರಕ್ಕೆ ತೀವ್ರ ಅಡ್ಡಿಯಾಯಿತು. ಬೆಂಗಳೂರು-ನೀಲಗಿರಿ ರಸ್ತೆ, ಮಿನಿ ವಿಧಾನಸೌಧ ರಸ್ತೆ, ಇರ್ವಿನ್ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ದಟ್ಟಣೆಯಲ್ಲಿ ಸಿಲುಕಿದ್ದ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣಿಕರು ನಿಲ್ದಾಣಕ್ಕೆ ಹೋಗದೆ ಕಮಾನು ಗೇಟ್ ಬಳಿಯೇ ಇಳಿದರು. ದ್ವಿಚಕ್ರ ವಾಹನ ಸವಾರರು ಹೈರಾಣಾದರು.

ಅರಮನೆ ಸುತ್ತಲಿನ ವೃತ್ತಗಳು, ಬೆಂಗಳೂರು-ನೀಲಗಿರಿ ರಸ್ತೆ, ದೇವರಾಜ ಅರಸು ರಸ್ತೆ ಸೇರಿದಂತೆ ಹೆಚ್ಚು ವಾಹನ ಸಂಚಾರವಿದ್ದ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಅಡ್ಡಾದಿಡ್ಡಿ ವಾಹನ ಸಂಚಾರಕ್ಕೆ ಬ್ರೇಕ್ ಹಾಕಿ ಸಿಬ್ಬಂದಿ ನಿರ್ವಹಣೆ ಮಾಡಿದರು. ಚಾಮುಂಡಿಬೆಟ್ಟಕ್ಕೆ ಸಂಚರಿಸುವ ವಾಹನಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಲಲಿತಮಹಲ್ ರಸ್ತೆಯಲ್ಲೂ ವಾಹನ ದಟ್ಟಣೆ ಉಂಟಾಗಿತ್ತು. ಬೆಟ್ಟದಲ್ಲೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಪಾರ್ಕಿಂಗ್‌ಗೆ ಸ್ಥಳವಿಲ್ಲದೆ ರಸ್ತೆ ಬದಿಯಲ್ಲೂ ವಾಹನಗಳನ್ನು ನಿಲ್ಲಿಸಿದ್ದರು.

ಮಳೆ ಬಿಡುವು: ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣವಿದ್ದರೂ ಮಳೆ ಬಾರದ ಕಾರಣ ಸ್ಥಳೀಯರು, ಸುತ್ತಮುತ್ತಲ ಜಿಲ್ಲೆಗಳಿಂದಲೂ ಜನ ಪ್ರವಾಸ ಬಂದಿದ್ದರು. ಇನ್ನೇನು ಮಕ್ಕಳಿಗೆ ಶಾಲೆ ಆರಂಭವಾಗುತ್ತದೆ ಎಂದು ಕುಟುಂಬ ಸಮೇತ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ, ಸಂಭ್ರಮಿಸಿದರು. ಭಾನುವಾರವೂ ಕೂಡ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಮೈಸೂರಿಗೆ ಆಗಮಿಸುವ ನಿರೀಕ್ಷೆ ಇದ್ದು, ತುರ್ತು ಇದ್ದವರು ಸೂಕ್ತ ಮಾರ್ಗದಲ್ಲಿ ಸಂಚರಿಸುವುದು ಒಳ್ಳೆಯದು.

ಕಟ್ಟಡ ತುರ್ತು ದುರಸ್ತಿ ಅನಿವಾರ್ಯ

ಮಹಾರಾಜ ಕಾಲೇಜು, ಯುವರಾಜ ಕಾಲೇಜು, ಮಹಾರಾಜ ಕಾಲೇಜು ಯೂನಿಯನ್ ಬಿಲ್ಡಿಂಗ್ (ಹೌಸಿಂಗ್ ಡಿಪಾರ್ಟ್‌ಮೆಂಟ್ ಆಫ್ ಜರ್ನಲಿಸಂ), ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯ (ಲಕ್ಷ್ಮೀಪುರಂ ಬಾಲಕಿಯರ ಶಾಲೆ), ಗವರ್ನ್‌ಮೆಂಟ್ ಚಿಲ್ಡ್ರನ್ಸ್ ಗರ್ಲ್ಸ್ ಹೋಂ ಮತ್ತು ಮಹಾರಾಜ ಸಂಸ್ಕೃತ ಪಾಠಶಾಲಾ ಪಾರಂಪರಿಕ ಕಟ್ಟಡಗಳು ಶಿಥಿಲಗೊಂಡಿದ್ದು, ತುರ್ತಾಗಿ ದುರಸ್ತಿ ಮಾಡಬೇಕಾಗಿದೆ ಎಂದು ವರದಿಯಲ್ಲಿ ಅಭಿಪ್ರಾಯಿಸಲಾಗಿದೆ.

96,80,59,838 ರೂ. ವೆಚ್ಚ: ಪಟ್ಟಿಯಲ್ಲಿರುವ 11 ಪಾರಂಪರಿಕ ಕಟ್ಟಡಗಳನ್ನು ಮೂಲ ವಿನ್ಯಾಸದಂತೆಯೇ ದುರಸ್ತಿಗೊಳಿಸಿ ಸಂರಕ್ಷಿಸಲು ಒಟ್ಟು 96,80,59,838 ರೂ. ಅಂದಾಜು ವೆಚ್ಚವಾಗಲಿದೆ ಎಂದು ಪಾರಂಪರಿಕ ಆಯುಕ್ತ ಎ. ದೇವರಾಜು ತಿಳಿಸಿದ್ದಾರೆ. ಸಮೀಕ್ಷಾ ವರದಿ, ಅಂದಾಜು ಪಟ್ಟಿಯೊಂದಿಗೆ ಜಿಲ್ಲಾ ಪಾರಂಪರಿಕ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅದನ್ನು ಸರ್ಕಾರಕ್ಕೆ ಕಳುಹಿಸಿ ಅನುದಾನದೊಂದಿಗೆ ಅನುಮೋದನೆ ಪಡೆಯಬೇಕಿದೆ ಎಂದು ಅವರು ತಿಳಿಸಿದರು.

ಅತಿ ಹೆಚ್ಚು ವೆಚ್ಚ: ತುರ್ತು ದುರಸ್ತಿ ಅನಿವಾರ್ಯವಿರುವ 11 ಪಾರಂಪರಿಕ ಕಟ್ಟಡಗಳ ಪೈಕಿ ಮಹಾರಾಜ ಕಾಲೇಜು ಕಟ್ಟಡ ದುರಸ್ತಿ, ಪುನರುಜ್ಜೀವನಕ್ಕೆ ಅತಿ ಹೆಚ್ಚು 18,45,03,207 ಹಾಗೂ ಯುವರಾಜ ಕಾಲೇಜು ಕಟ್ಟಡಕ್ಕೆ 17,70,19,647 ರೂ. ವೆಚ್ಚ ಅಂದಾಜಿಸಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸಂರಕ್ಷಣೆ ವರ್ಗೀಕರಣ: ದುರಸ್ತಿಯಾಗಬೇಕಾಗಿರುವ 11 ಪಾರಂಪರಿಕ ಕಟ್ಟಡಗಳನ್ನು ವರ್ಗೀಕರಣ ಮಾಡಲಾಗಿದೆ. ಎನೇಬಲಿಂಗ್ ವರ್ಕ್ಸ್, ಪ್ರಿಪರೇಟರಿ ವರ್ಕ್ಸ್, ವಾಟರ್ ಪ್ರೂಫಿಂಗ್ ಸ್ಟ್ರಕ್ಚರಲ್ ರೆಸ್ಟೋರೇಷನ್, ರೂಫ್ ವರ್ಕ್ಸ್, ಕ್ರಾಕ್ ಫಿಲ್, ಆರ್ಟ್ ಪ್ಲಾಸ್ಟರಿಂಗ್, ಜಾಯ್ನರಿ ವರ್ಕ್ಸ್, ಫ್ಲೋರಿಂಗ್ ಹೀಗೆ ವಿಭಜಿಸಿ, ಪುನರುಜ್ಜೀವನಗೊಳಿಸುವ ಕಾರ್ಯಕ್ಕೆ ಚಾಲನೆ ದೊರೆಯಬೇಕಾಗಿದೆ.

ಇನ್ನು ಯಾವ ನಿರ್ಧಾರವೂ ಆಗಿಲ್ಲ

ಸಮೀಕ್ಷಾ ವರದಿ ನೀಡಿದೆ. ಆದರೆ, ಆ ಪೈಕಿ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳ ಪ್ರಸ್ತಾಪ ವಿಲ್ಲ. ಈ ಕುರಿತು ಪ್ರತಿಕ್ರಿಯಿಸಿರುವ ಪಾರಂಪರಿಕ ಆಯುಕ್ತ ಎ. ದೇವರಾಜು, ಈ ಎರಡೂ ಪಾರಂಪರಿಕ ಕಟ್ಟಡಗಳು ಸಂಪೂರ್ಣ ಶಿಥಿಲಾವಸ್ಥೆಯಲ್ಲಿವೆ. ಇವುಗಳ ನೆಲಸಮಗೊಳಿಸಿ, ಪಾರಂಪರಿಕ ಶೈಲಿಯಲ್ಲಿ ಹೊಸದಾಗಿ ನಿರ್ಮಿಸಬೇಕೆಂದು ತಜ್ಞರ ಸಮಿತಿ ಅಭಿಪ್ರಾಯಿಸಿದ್ದರೆ, ಅವುಗಳ ದುರಸ್ತಿ ಮಾಡಿ ಯಥಾಸ್ಥಿತಿ ಸಂರಕ್ಷಿಸಬಹುದೆಂದು ಮತ್ತೊಂದು ಕಮಿಟಿ ವರದಿ ನೀಡಿರುವುದರಿಂದ ಸರ್ಕಾರ ಈ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ ಎಂದರು.

ಅಲ್ಲದೆ, ಈ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವ ಕಾರಣ ತಮ್ಮ ಇಲಾಖೆ ಯಾವುದೇ ಕಾಮಗಾರಿಗೆ ಮುಂದಾಗಿಲ್ಲ ಎಂದು ತಿಳಿಸಿದ್ದಾರೆ.

ಐವರ ವಿರುದ್ಧ ಕ್ರಿಮಿನಲ್ ಕೇಸ್

1 ಎಕರೆ 30 ಗುಂಟೆ ಮತ್ತು ಸರ್ವೆ ನಂ.442ರ 1 ಎಕರೆ 26 ಗುಂಟೆ ಜಮೀನನ್ನು ಅವರ ಅಣ್ಣ ಚಂದ್ರಶೇಖರ್ ಅವರು ಬದುಕಿರುವಾಗಲೇ ಮರಣ ಪ್ರಮಾಣ ಪತ್ರ ಸೃಷ್ಟಿಸಿದ್ದಲ್ಲದೇ, ಚಂದ್ರಶೇಖರ್ ಅವರ ಮಕ್ಕಳೆಂದು ದೀಗಳ್ಳಿ ಗ್ರಾಮದ ಕೃಷ್ಣೇಗೌಡ ಮತ್ತು ಶಿವಮಲ್ಲೇಗೌಡ ಹೆಸರಿಗೆ ನಕಲಿ ವಂಶ ವೃಕ್ಷವನ್ನು ಸೃಷ್ಟಿಸಿ ಜಮೀನಿನ ಆರ್‌ಟಿಸಿಯನ್ನು ಅವರ ಹೆಸರಿಗೆ ಕಾನೂನು ಬಾಹಿರವಾಗಿ ವರ್ಗಾಯಿಸಿರುವುದು ಕಂಡು ಬಂದಿದೆ.

ಈ ಮಧ್ಯೆ 2024ರ ಏಪ್ರಿಲ್ 14ರಂದು ಕೆನಡಾದಲ್ಲಿ ಚಂದ್ರಶೇಖರ್ ಸಾವನ್ನಪ್ಪಿದ್ದಾರೆ. ದೂರು ನೀಡಲು ಪೂರಕ ದಾಖಲೆಗಳನ್ನು ಸಂಗ್ರಹಿಸಿದ ನಂತರ ನಾಗರಾಜ ರಾಂ ಅವರು ಮೇ 23ರಂದು ನೀಡಿದ ದೂರಿನನ್ವಯ ಬಿಳಿಗೆರೆ ಠಾಣೆ ಪೊಲೀಸರು ಮೂವರು ಕಂದಾಯ ಅಧಿಕಾರಿಗಳೂ ಸೇರಿದಂತೆ ಐವರ ವಿರುದ್ಧ ಭಾರತೀಯ ದಂಡ ಸಂಹಿತೆ 465, 468, 471, 420, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಶೇ. 58.82ರಷ್ಟು ಮತದಾನ

ಆರಂಭವಾಗಿತ್ತು. ಸಂಜೆ 6.30ರ ವರೆಗೂ ಮತದಾನಕ್ಕೆ ಅವಕಾಶ ನೀಡಲಾಗಿತ್ತು.

ಪಶ್ಚಿಮ ಬಂಗಾಳದ ಕೆಲವೆಡೆ ಹಿಂಸಾಚಾರ: ಪಶ್ಚಿಮ ಬಂಗಾಳದ ಎಂಟು ಲೋಕಸಭಾ ಕ್ಷೇತ್ರಗಳ ಕೆಲವು ಪ್ರದೇಶಗಳಲ್ಲಿ ಅಲ್ಲಲ್ಲಿ ಹಿಂಸಾಚಾರದ ಘಟನೆಗಳು ವರದಿಯಾಗಿವೆ. ಚುನಾವಣಾ ಆಯೋಗಕ್ಕೆ ವಿವಿಧ ರಾಜಕೀಯ ಪಕ್ಷಗಳಿಂದ ಬೆಳಗ್ಗೆ 11 ಗಂಟೆಯವರೆಗೆ 954 ದೂರುಗಳು ಬಂದಿದ್ದು, ಇವಿಎಂ ಅಸಮರ್ಪಕ ಕಾರ್ಯಗಳು ಮತ್ತು ಏಜೆಂಟರನ್ನು ಬೂತ್‌ಗಳಿಗೆ ಪ್ರವೇಶಿಸದಂತೆ ತಡೆಯಲಾಗಿದೆ. ಘಟಾಲ್ ಕ್ಷೇತ್ರದಲ್ಲಿ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ಬೆಂಬಲಿಗರ ನಡುವೆ ಮತಗಟ್ಟೆ ಏಜೆಂಟರನ್ನು ಬೂತ್‌ಗಳಿಗೆ ಪ್ರವೇಶಿಸುವುದನ್ನು ತಡೆಯುವ ಬಗ್ಗೆ ಘರ್ಷಣೆ ನಡೆದಿದೆ. ಟಿಎಂಸಿ ಗೂಂಡಾಗಳು ಮತದಾನ ಪ್ರಕ್ರಿಯೆಯಲ್ಲಿ ಅಡೆತಡೆಗಳನ್ನು ಸೃಷ್ಟಿಸುತ್ತಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ಹಿರಣ್ ಚಟರ್ಜಿ ಹೇಳಿದ್ದಾರೆ. ಬಿಜೆಪಿ ಕಾರ್ಯಕರ್ತರು ರಸ್ತೆಗಿಳಿದು ಪ್ರತಿಭಟನೆ ನಡೆಸಿ ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಮತದಾನ ಆರಂಭಕ್ಕೂ ಮುನ್ನ ಇಂದು ಒಡಿಶಾದಲ್ಲಿ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗೆ ವಿವಿಧ ರಾಜ್ಯಗಳಲ್ಲಿ ಅಣಕು ಮತದಾನ ನಡೆಸಲಾಯಿತು.

ಒಡಿಶಾದ ನಲವತ್ತೆರಡು ವಿಧಾನಸಭಾ ಕ್ಷೇತ್ರಗಳಿಗೂ ಇಂದು ಮತದಾನ ನಡೆದಿದೆ. ದೆಹಲಿ ಮತ್ತು ಹರಿಯಾಣದ ಎಲ್ಲಾ ಸಂಸದೀಯ ಸ್ಥಾನಗಳಿಗೆ ಈ ಹಂತದಲ್ಲಿ ಚುನಾವಣೆ ನಡೆದಿದೆ.

ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳಲ್ಲಿ ಇಬ್ಬರು ಮಾಜಿ ಮುಖ್ಯಮಂತ್ರಿಗಳಾದ ಮನೋಹರ್ ಲಾಲ್ ಖಟ್ಟರ್ ಮತ್ತು ಮೆಹಬೂಬಾ ಮುಫ್ತಿ ಸೇರಿದ್ದಾರೆ. ಖಟ್ಟರ್ ಅವರು ಕರ್ನಾಲ್‌ನಿಂದ ಬಿಜೆಪಿ ಅಭ್ಯರ್ಥಿಯಾಗಿ ಮತ್ತು ಮೆಹಬೂಬಾ ಮುಫ್ತಿ ಅನಂತನಾಗ್-ರಾಜೌರಿಯಿಂದ ಪಿಡಿಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ.

ಎಸ್‌ಜೆಸಿಇ ವಿದ್ಯಾರ್ಥಿಗಳ ಪ್ರತಿಭೆ ಅನಾವರಣ

ಆವಿಷ್ಕರಿಸಿದ ನಾನಾ ತಂತ್ರಜ್ಞಾನ ಆಧರಿತ ಮಾದರಿಗಳ ಪ್ರದರ್ಶನ

● ಕಾಡ್ಗಿಚ್ಚು ಸಂಭವಿಸಿದಾಗ ಬಳಸಬಹುದಾದ ಅದ್ಭುತ ಸ್ಪ್ರಿಂಕ್ಲರ್; ಸೋಲಾರ್ ವೈರ್‌ಲೆಸ್ ಚಾರ್ಜಿಂಗ್; ರೈತರಿಗೆ ಅನುಕೂಲಕಾರಿ ಬ್ಯಾಟರಿ ಬೈಸಿಕಲ್ ● ಎಸ್‌ಜೆಸಿಇ ಆವರಣದಲ್ಲಿ ಮುಕ್ತ ದಿನಕ್ಕೆ ಚಾಲನೆ





ಮೈಸೂರಿನ ಎಸ್‌ಜೆಸಿಇ ಕಾಲೇಜಿನಲ್ಲಿ ನಡೆದ ಮುಕ್ತ ದಿನದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ ಆವಿಷ್ಕಾರಗಳನ್ನು ಪ್ರದರ್ಶಿಸಿರುವುದು.

ಮೈಸೂರು, ಮೇ 25(ಎಂಟಿವೈ)- ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಆವಿಷ್ಕರಿಸಿರುವ ವಿವಿಧ ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಅನುಸರಿಸಬೇಕಾದ ನೂತನ ತಂತ್ರಜ್ಞಾನದ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಹಾಗೂ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಸಹಯೋಗದಲ್ಲಿ ಎಸ್‌ಜೆಸಿಇ ಕಾಲೇಜು ಆವರಣದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಮುಕ್ತ ದಿನ(ಓಪನ್ ಡೇ) ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಆವಿಷ್ಕರಿಸಿರುವ ತಂತ್ರಜ್ಞಾನ ಹಾಗೂ ಮಾದರಿಯನ್ನು ಪ್ರದರ್ಶನಕ್ಕಿಡಲಾಗಿದ್ದು, ಅವರ ಪ್ರತಿಭೆಯನ್ನು ಕಂಡ ನೋಡುಗರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಾಡ್ಗಿಚ್ಚು ತಡೆ: ಕಾಲೇಜಿನ ಪರಿಸರ ಇಂಜಿನಿಯರಿಂಗ್ ವಿದ್ಯಾರ್ಥಿಗಳಾದ ಎಂ.ಬಿ. ಲೇಖನಾ, ಎಂ. ಸುಸ್ಮಿತಾ ಹಾಗೂ ಕೀರ್ತಿ ಆರ್. ಗೌಡ ಕಾಡ್ಗಿಚ್ಚು ತಡೆಯುವ ತಂತ್ರಜ್ಞಾನ ಆವಿಷ್ಕರಿಸಿ ಪ್ರದರ್ಶಿಸಿದ್ದಾರೆ. ಈ ತಂತ್ರಜ್ಞಾನ ಬಳಸಿದರೆ ಅರಣ್ಯದ ಯಾವುದೇ ಭಾಗದಲ್ಲಿ ಬೆಂಕಿ ಕಾಣಿಸಿಕೊಂಡರೆ ವೈರ್‌ಲೆಸ್ ಸೆನ್ಸರ್ ನೆಟ್‌ವರ್ಕ್ ಮೂಲಕ ಮಾಹಿತಿ ದೊರೆತು, ಸ್ವಯಂಚಾಲಿತವಾಗಿ ಸ್ಪ್ರಿಂಕ್ಲರ್‌ಗಳು ಬೆಂಕಿ ನಂದಿಸುವ ಕಾರ್ಯ ಆರಂಭಿಸಲಿವೆ. ಈ ತಂತ್ರಜ್ಞಾನವನ್ನು ಕಾಲೇಜು ಆವರಣದಲ್ಲಿ ಪ್ರಾಯೋಗಿಕವಾಗಿ ಬಳಸಿ ಯಶಸ್ವಿಯಾಗಿದ್ದಾರೆ.

ಸೋಲಾರ್ ವೈರ್‌ಲೆಸ್ ಚಾರ್ಜಿಂಗ್: ಎಲೆಕ್ಟ್ರಿಕಲ್ ವಾಹನಗಳಿಗೆ ಪ್ಲಗ್ ಬಳಸದೆ ಎಸ್‌ಜೆಸಿಇ ಕಾಲೇಜಿನ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಾದ ಸೌಮ್ಯ, ಪಿ.ಪೂಜಾ, ಎಸ್. ಕೀರ್ತನಾ, ಸಿ. ಸುಮನಾ ಸುಮಿತ್ರಾ ವೈರ್‌ಲೆಸ್ ಸೋಲಾರ್ ಚಾರ್ಜಿಂಗ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ತಂತ್ರಜ್ಞಾನದಲ್ಲಿ ಎಲೆಕ್ಟ್ರಿಕಲ್ ವಾಹನಗಳನ್ನು ಚಾರ್ಜ್ ಮಾಡಲು ಪ್ಲಗ್ ಬಳಸುವ ಅವಶ್ಯಕತೆ ಇಲ್ಲ. ಮ್ಯಾಗ್ನಟಿಕ್ ಪವರ್ ಮಾದರಿಯಲ್ಲಿ ಚಾರ್ಜಿಂಗ್ ಸ್ಟೇಷನ್‌ನಲ್ಲಿ ವಾಹನಕ್ಕೆ ಸೋಲಾರ್ ವಿದ್ಯುತ್ ಪೂರೈಕೆಯಾಗುತ್ತದೆ.

ವಿಮಾನಗಳ ಹಾರಾಟ: ಎಸ್‌ಜೆಸಿಇ ವಿದ್ಯಾರ್ಥಿಗಳು ಥರ್ಮಕೋಲ್‌ನಿಂದ ಪುಟ್ಟ ವಿಮಾನ ತಯಾರಿಸಿ ಬ್ಯಾಟರಿ ಶಕ್ತಿಯಿಂದ ಹಾರಾಟ ನಡೆಸಿ, ಎಲ್ಲರ ಗಮನ ಸೆಳೆದರು.

ವಿವಿಧ ಆವಿಷ್ಕಾರ: ರೈತರಿಗೆ ವರದಾನವಾಗಲಿರುವ 100 ಕೆ.ಜಿ. ಸಾಮರ್ಥ್ಯದ ವಸ್ತುಗಳನ್ನು ಸಾಗಿಸುವ ಬ್ಯಾಟರಿ ಚಾಲಿತ ಸೈಕಲ್‌ವೊಂದನ್ನು ವಿದ್ಯಾರ್ಥಿಗಳಾದ ಎಲ್. ಅಗ್ನಿತೇಜ್, ಕೆ.ಮನು, ಜಿ. ನೇಸರ, ವಿ. ಸಂತೋಷ್ ಅಭಿವೃದ್ಧಿಪಡಿಸಿದ್ದಾರೆ. ಮೂರು ಬ್ಯಾಟರಿ ಬಳಕೆ ಮಾಡಲಾಗಿದೆ. ಒಂದು ಬಾರಿ ಚಾರ್ಜ್ ಮಾಡಿದರೆ 60 ಕಿ.ಮೀ.ವರೆಗೆ ಸಂಚರಿಸಬಹುದು.

ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ನೀರು ತುಂಬಿಸಿಕೊಳ್ಳಲು ಬಳಸುವ 20 ಲೀಟರ್‌ನ ಕ್ಯಾನ್ ಶುಚಿಗೊಳಿಸಲು ಯಂತ್ರವೊಂದನ್ನು ಇಂಡಸ್ಟ್ರಿಯಲ್ ಆ್ಯಂಡ್ ಪ್ರೊಡಕ್ಷನ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಾದ ಮಲ್ಲಿಕಾರ್ಜುನ್, ಜಿ.ಎನ್. ಮಂಜುನಾಥ್, ಎಸ್.ಚಂದನ್ ಅಭಿವೃದ್ಧಿಪಡಿಸಿ ಪ್ರದರ್ಶಿಸಿದ್ದಾರೆ. ಗಣಿಯಲ್ಲಿ ಕೆಲಸ ಮಾಡುವ ನೌಕರರಿಗಾಗಿ ಸ್ಮಾರ್ಟ್ ಹೆಲ್ಮೆಟ್ ಅನ್ನು ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗದ ಪ್ರಭು, ಪ್ರಥಮ್, ಸುದೀಪ್, ಸನತ್ ಸ್ಮಾರ್ಟ್ ಹೆಲ್ಮೆಟ್ ಅಭಿವೃದ್ಧಿಪಡಿಸಿದ್ದಾರೆ. ಇದರಲ್ಲಿ ಅಳವಡಿಸಿರುವ ತಂತ್ರಜ್ಞಾನವು ಕಾರ್ಮಿಕರಿಗೆ ಯಾವುದೇ ರೀತಿಯ ಅಪಾಯ ಎದುರಾದರೆ ತಕ್ಷಣ ಮಾಹಿತಿ ಒದಗಿಸುತ್ತದೆ. ಈ ಮಾಹಿತಿಯ ಆಧಾರದ ಮೇಲೆ ರಕ್ಷಣಾ ಕಾರ್ಯವನ್ನು ಕೈಗೊಳ್ಳಬಹುದು.

ಮುಕ್ತ ದಿನಕ್ಕೆ ಚಾಲನೆ: ಎಸ್‌ಜೆಸಿಇ ಆವರಣದಲ್ಲಿ ಶನಿವಾರ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ ಮುಕ್ತ ದಿನಕ್ಕೆ ಚಾಲನೆ ನೀಡಿದರು. ಎಸ್‌ಜೆಸಿಇ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಆವಿಷ್ಕಾರಗಳ ಪ್ರದರ್ಶಿಸಿದ್ದಾರೆ. ಇದು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದೆ ಎಂದರು.

ಈ ಸಂದರ್ಭ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾಲಯ ಕುಲಪತಿ ಡಾ.ಎ.ಎನ್. ಸಂತೋಷ್ ಕುಮಾರ್, ಕುಲಸಚಿವ ಡಾ.ಎಸ್.ಎ. ಧನರಾಜ್, ಪರೀಕ್ಷಾಂಗ ಕುಲಸಚಿವ ನಂಜುಂಡಸ್ವಾಮಿ, ಎಸ್‌ಜೆಸಿಇ ಪ್ರಾಂಶುಪಾಲ ಡಾ.ಸಿ. ನಟರಾಜು, ಮಹಾರಾಜ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಉದಯಶಂಕರ್ ಅತ್ರೆ ಹಾಗೂ ಇತರರು ಇದ್ದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ ಜನ್ಮದಿನ ಅಂಗವಾಗಿ ವಿಶೇಷಚೇತನರಿಗೆ ಅವಶ್ಯ ಉಪಕರಣಗಳ ವಿತರಣೆ



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಶನಿವಾರ ತಮ್ಮ ಜನ್ಮದಿನದ ಅಂಗವಾಗಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವಿಶೇಷ ಚೇತನರಿಗೆ ವಿವಿಧ ಸಲಕರಣೆ ವಿತರಿಸಿದರು.

ಮೈಸೂರು,ಮೇ 25(ಎಂಟಿವೈ)- ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 82ನೇ ವರ್ಧಂತಿ ಹಿನ್ನೆಲೆಯಲ್ಲಿ ಶನಿವಾರ ವಿಶೇಷಚೇತನರಿಗೆ ಅಗತ್ಯ ಉಪಕರಣಗಳನ್ನು ವಿತರಿಸಲಾಯಿತು.

ಮೈಸೂರು-ನಂಜನಗೂಡು ಮುಖ್ಯ ರಸ್ತೆಯಲ್ಲಿರುವ ಗಣಪತಿ ಆಶ್ರಮದ ನಾದಮಂಟಪದಲ್ಲಿ ಇಂದು ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವಿಶೇಷಚೇತನರಿಗೆ 40 ವ್ಹೀಲ್‌ಚೇರ್, 8 ವಾಕರ್ಸ್, 10 ಕ್ರಚರ್ಸ್, 5ಸ್ಟಿಕ್ ಸೇರಿದಂತೆ ಒಟ್ಟು 82 ಉಪಕರಣಗಳನ್ನು ವಿತರಿಸಿದರು.

ಬಳಿಕ ಆಶೀರ್ವಚನ ನೀಡಿದ ಶ್ರೀಗಳು, ವಿಶೇಷಚೇತನರನ್ನು ನೋಡಿಕೊಳ್ಳುವುದು ಪುಣ್ಯದ ಕೆಲಸ. ಅವರನ್ನು ಮತ್ತಷ್ಟು ಚೆನ್ನಾಗಿ ನೋಡಿಕೊಳ್ಳುವ ಶಕ್ತಿಯನ್ನು ದೇವರು ಅವರ ಪೋಷಕರಿಗೆ ನೀಡಲಿ ಎಂದು ಆಶೀರ್ವದಿಸಿದರು. ದೇವರು ವಿಶೇಷಚೇತನರಿಗೆ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ. ಸಕಲ ಭಕ್ತರಿಗೂ ಒಳಿತಾಗಲಿ ಎಂದು ಶ್ರೀಗಳು ಆಶೀರ್ವಚನ ನೀಡಿದರು.

ವಿವಿಧ ಕಾರ್ಯಕ್ರಮಗಳು: ನಾದ ಮಂಟಪದ 26ನೇ ವಾರ್ಷಿಕೋತ್ಸವ ಮತ್ತು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಜನ್ಮದಿನೋತ್ಸವದ ಅಂಗವಾಗಿ ಅವಧೂತ ದತ್ತ ಪೀಠದಲ್ಲಿ ಶ್ರೀ ಚಕ್ರಪೂಜೆ, ಹೋಮಗಳು ನೆರವೇರಿದವು, ನಂತರ ಆಶ್ರಮದ ಆವರಣದಲ್ಲಿರುವ ತಾಯಿ ರಾಜರಾಜೇಶ್ವರಿ ದೇವಿ ಸೇರಿದಂತೆ ಎಲ್ಲ ದೇವರಿಗೂ ಪೂಜೆ ಸಲ್ಲಿಸಿದರು. ಶ್ರೀ ಹರಿ ಸನ್ನಿಧಿಯಲ್ಲಿ ನಡೆದ ಹೋಮ ಕಾರ್ಯದಲ್ಲಿ ಸ್ವಾಮೀಜಿ ಪಾಲ್ಗೊಂಡರು.

ಇದಕ್ಕೂ ಮೊದಲು ದತ್ತ ಹ್ಯೂಮನ್ ಸರ್ವೀಸಸ್ ಸ್ವಯಂಸೇವಕರ ವತಿಯಿಂದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಗಾರ್ಡ್ ಆಫ್ ಹಾನರ್ ಸಲ್ಲಿಸಲಾಯಿತು.

ನಾದಮಂಟಪದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಯ ಶಾಂತಿ ಕಲ್ಯಾಣ ವೈಭವವಾಗಿ ನೆರವೇರಿತು. ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ಶ್ರೀಗಳ ಸಮ್ಮುಖದಲ್ಲಿ ಈ ಎಲ್ಲಾ ವಿವಿಧ ಕಾರ್ಯಕ್ರಮಗಳು ನೆರವೇರಿದವು.

ರಾಜೀವ್ ತಾರಾನಾಥ್ ಆಸ್ಪತ್ರೆಗೆ ದಾಖಲು



ಖ್ಯಾತ ಸರೋದ್ ವಾದಕರಾದ ಪಂಡಿತ್ ರಾಜೀವ್ ತಾರಾನಾಥ್ ಅವರನ್ನು ವಿಧಾನಪರಿಷತ್ ಸದಸ್ಯ ನಾಗರಾಜ್ ಯಾದವ್ ಶನಿವಾರ ಭೇಟಿಯಾಗಿ, ಆರೋಗ್ಯ ವಿಚಾರಿಸಿದರು.

ಮೈಸೂರು, ಮೇ 25(ಆರ್‌ಕೆ)- ಖ್ಯಾತ ಸಾರೋದ್ ವಾದಕ ರಾಜೀವ್ ತಾರಾನಾಥ್ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಳೆದ ನಾಲ್ಕು ದಿನಗಳ ಹಿಂದೆ ಮನೆಯಲ್ಲಿ ಜಾರಿ ಬಿದ್ದು ಕಾಲಿಗೆ ಪೆಟ್ಟಾಗಿದ್ದು, ಶಸ್ತ್ರಚಿಕಿತ್ಸೆ ಮಾಡಲಾಗಿದೆ ಇದೀಗ ಪೋಸ್ಟ್ ಆಪರೇಟಿವ್ ವಾರ್ಡ್‌ನಲ್ಲಿರುವ ಅವರು ಗುಣಮುಖರಾಗುತ್ತಿದ್ದು, ನಾಲ್ಕೈದು ದಿನದಲ್ಲಿ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗುವರು ಎಂದು ಮೂಲಗಳು ತಿಳಿಸಿವೆ.

ಸ್ಪಾ ಸೋಗಿನಲ್ಲಿ ವೇಶ್ಯಾವಾಟಿಕೆ: ಮೂವರ ಬಂಧನ

ಮೈಸೂರು, ಮೇ 25(ಆರ್‌ಕೆ)- ಸ್ಪಾ ಹೆಸರಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಮೂವರನ್ನು ಬಂಧಿಸಿರುವ ವಿಜಯನಗರ ಠಾಣೆ ಪೊಲೀಸರು, ಐವರು ಯುವತಿಯರನ್ನು ರಕ್ಷಿಸಿದ್ದಾರೆ. ಮೂಲತಃ ಕೆಆರ್‌ಎಸ್ ಗ್ರಾಮದವನಾದ ಇಲವಾಲ ನಿವಾಸಿ ರಾಜು, ಬಾಗಲಕೋಟೆಯ ಅಭಿಷೇಕ್ ಹಾಗೂ ಕೇರಳದ ರಾಮಪ್ರಸಾದ್ ಬಂಧಿತರು, ಮೈಸೂರಿನ ಹೆಬ್ಬಾಳು ಅಭಿಷೇಕ್ ಸರ್ಕಲ್‌ನ ರಾಯಲ್ ಇಷಾ ಸ್ಪಾದಲ್ಲಿ ಯುವತಿಯರನ್ನಿಟ್ಟುಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದರು.

ಬಾತ್ಮೀದಾರರ ಮಾಹಿತಿ ಆಧರಿಸಿ ಇಂದು ಮಧ್ಯಾಹ್ನ 2 ಗಂಟೆ ವೇಳೆಗೆ ದಾಳಿ ನಡೆಸಿದ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಪ್ರದೀಪ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ವಿಶ್ವನಾಥ, ನಾರಾಯಣ, ಸಿಬ್ಬಂದಿಗಳಾದ ಲೋಕೇಶ್, ಶ್ರೀನಿವಾಸ, ಪ್ರಶಾಂತ, ಗಂಗಾಧರ, ಕೌಶಲ್ಯ, ಜಯಶ್ರೀ ಅವರು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಮೂವರನ್ನು ಬಂಧಿಸಿದ್ದಾರೆ.

ಶ್ರೀನಿವಾಸಪ್ರಸಾದರಿಗೆ ನಾಯಕ ಸಮುದಾಯ ನಮನ

ಮೈಸೂರು, ಮೇ 25(ಎಂಟಿವೈ)- ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರಂತಹ ಬಹುತ್ವದ ನಾಯಕರಿಗೆ ದಿವಂಗತ ಎನ್ನದೇ ಅವರ ಆದರ್ಶವನ್ನು ಮೈಗೂಡಿಸಿಕೊಳ್ಳಲು ಮುಂದಾಗಬೇಕು ಎಂದು ಕುವೆಂಪು ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕ ಡಾ.ಪ್ರಶಾಂತ್ ನಾಯಕ ಸಲಹೆ ನೀಡಿದ್ದಾರೆ.

ಮೈಸೂರಿನ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ನಾಯಕರ ಯುವಸೇನೆ ಆಶ್ರಯದಲ್ಲಿ ನಾಯಕ ಜನಾಂಗದ ವತಿಯಿಂದ ಆಯೋಜಿಸಿದ್ದ 'ಸ್ವಾಭಿಮಾನಿ ಚಕ್ರವರ್ತಿ ವಿ.ಶ್ರೀನಿವಾಸ ಪ್ರಸಾದ್ ಬಹುತ್ವದ ಎಚ್ಚರ' ಸ್ಮರಣೆ ಮತ್ತು ಪ್ರಮಾಣ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಅನೇಕ ಮಹನೀಯರನ್ನು ಒಂದು ಜಾತಿಗೆ ಸೀಮಿತಗೊಳಿಸಲಾಗುತ್ತಿದೆ. ಜಾತ್ಯಾತೀತ, ಸಮಾನತೆ ಸೃಷ್ಟಿ ಮಾಡಬೇಕಾದ ಕಾಲಘಟ್ಟದಲ್ಲಿಯೂ ಜಾತಿ ವ್ಯವಸ್ಥೆ ಆಚರಣೆಯಲ್ಲಿರುವುದು ವಿಷಾದಕರ ಸಂಗತಿ. ಜಾತಿಯನ್ನು ಅಹಂಕಾರದ ನೆಲೆಗಟ್ಟಿನಲ್ಲಿ ಮೂಡಿಸಲಾಗುತ್ತಿದೆ. ವಾಹನ ಸೇರಿದಂತೆ ಇನ್ನಿತರ ಸ್ಥಳದಲ್ಲಿ ತಮ್ಮ ಜಾತಿಯನ್ನು ಬಿಂಬಿಸಿಕೊಳ್ಳಲಾಗುತ್ತಿದೆ. ಇದರಿಂದ ಮರ್ಯಾದಾ ಹತ್ಯೆಯಂತಹ ಪ್ರಕರಣ ನಡೆಯುತ್ತಿವೆ ಎಂದು ಕಿಡಿಕಾರಿದರು.

ಗಡಿ ಜಿಲ್ಲೆ ಚಾಮರಾಜನಗರ-ಮೈಸೂರು ಜಿಲ್ಲೆಯಲ್ಲಿ ರಾಜಕೀಯವಾಗಿ ಏಳ್ಗೆ ಹೊಂದಿದ ವಿ.ಶ್ರೀನಿವಾಸ ಪ್ರಸಾದ್ ಕೇಂದ್ರ ಹಾಗೂ ರಾಜ್ಯ ಸರ್ಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಮೈತ್ರಿ ಯೋಜನೆಯನ್ನು ಜಾರಿಗೆ ತಂದು ಅನೇಕರಿಗೆ (ತೃತೀಯಲಿಂಗಿಗಳಿಗೆ) ನೆರವಾಗಿದ್ದಾರೆ.

ಇದಕ್ಕೂ ಮುನ್ನ ಜೆಎಲ್‌ಆರ್ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಂಸದ ವಿ.ಶ್ರೀನಿವಾಸಪ್ರಸಾದ್ ಸಮಾಜಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ನನ್ನನ್ನೂ ಸೇರಿದಂತೆ ಅನೇಕರು ರಾಜಕೀಯ ಕ್ಷೇತ್ರದಲ್ಲಿ ಬೆಳೆಯಲು ಪ್ರೇರಣೆ ನೀಡಿ, ಸಹಕರಿಸಿದ್ದಾರೆ. ನಾನು ಹುಣಸೂರು ತಾಲೂಕಿನಿಂದ ಮೈಸೂರು ತಾಲೂಕು ಹಾಗೂ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಬರಲು ಶ್ರೀನಿ ವಾಸಪ್ರಸಾದ್ ಕಾರಣ. ಅವರ ಆದರ್ಶ ಮೈಗೂಡಿ ಸಿಕೊಳ್ಳುವುದು ಅನಿವಾರ್ಯವಾಗಿದೆ. ನಮ್ಮೆಲ್ಲರಿಗೂ ಸ್ಫೂರ್ತಿಯ ಸೆಲೆಯಾಗಿದ್ದರು ಎಂದು ಸ್ಮರಿಸಿದರು.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ನಡುವೆ ಘರ್ಷಣೆ ಸಂಭವಿಸಿದರೆ, ನಾಯಕ ಸಮುದಾಯದ ಮುಖಂಡನ್ನು ಕರೆದು ಮಾತುಕತೆ ಮಾಡಿ, ಘರ್ಷಣೆ ನಡೆದಿರುವ ಗ್ರಾಮಗಳಿಗೆ ಹೋಗಿ ಪರಿಸ್ಥಿತಿ ತಿಳಿಗೊಳಿಸುವಂತೆ ಸಲಹೆ ನೀಡುತ್ತಿದ್ದರು. ಅಲ್ಲದೆ, ಪರಿಶಿಷ್ಟ ಸಮುದಾಯದ ನಾಯಕರಿಗೂ ತಿಳುವಳಿಕೆ ನೀಡುತ್ತಿದ್ದರು. ನಾಯಕ ಸಮುದಾಯಕ್ಕೆ ವಿ.ಶ್ರೀನಿವಾಸ ಪ್ರಸಾದ್, ಮಾಜಿ ಸಂಸದ ಆರ್.ಧ್ರುವನಾರಾಯಣ್ ಹಾಗೂ ಮಾಜಿ ಶಾಸಕ ವಾಸು ಕೊಡುಗೆ ನೀಡಿದ್ದಾರೆ. ಅವರನ್ನು ನಮ್ಮ ಸಮುದಾಯ ಸ್ಮರಿಸಿಕೊಳ್ಳಬೇಕು ಎಂದರು.

ಕರ್ನಾಟಕ ರಾಜ್ಯ ನಾಯಕರ ಯುವಸೇನೆ ರಾಜ್ಯಾಧ್ಯಕ್ಷ ದೇವರಾಜು ಟಿ.ಕಾಟೂರು ಮಾತನಾಡಿ, ಸಂಸದ ವಿ.ಶ್ರೀನಿವಾಸಪ್ರಸಾದ್ ಶೋಷಿತರ ಪ್ರತಿನಿಧಿಯಾಗಿ ಸದಾ ಕಾಳಜಿ ಹೊಂದಿದ್ದರು. ಅದರಲ್ಲೂ ನಾಯಕ ಸಮುದಾಯದ ಮೇಲೆ ಅಪಾರ ಪ್ರೀತಿ ಹೊಂದಿದ್ದರು. ಶೋಷಿತ ಸಮುದಾಯ ಅನ್ಯಾಯಕ್ಕೆ ತುತ್ತಾದರೆ ಮುಂಚೂಣಿಯಲ್ಲಿ ನಿಂತುಕೊಂಡು ಹೋರಾಟ ಮಾಡುತ್ತಿದ್ದರು. ಅವರು ಯಾವುದೇ ಪಕ್ಷದಲ್ಲಿದ್ದರೂ ಪಕ್ಷಭೇದ ಮರೆತು ಎಲ್ಲಾ ಪಕ್ಷದ ನಾಯಕರೊಂದಿಗೆ ಒಡನಾಟ ಹೊಂದಿದ್ದರು. ಈ ಹಿನ್ನೆಲೆಯಲ್ಲಿ ನಾಯಕ ಸಮುದಾಯ ಅವರನ್ನು ಸದಾ ಸ್ಮರಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಹುಣಸೂರು ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ ಇದ್ದರು.

ಶ್ರೀಯುತರ ಗುಣಗಾನ ಮಾಡಿದ ಹಲವು ಮುಖಂಡರು



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ನಾಯಕರ ಯುವಸೇನೆ ವತಿಯಿಂದ ನಡೆದ 'ಸ್ವಾಭಿಮಾನಿ ಚಕ್ರವರ್ತಿ ವಿ.ಶ್ರೀನಿವಾಸ್ ಪ್ರಸಾದ್ ಬಹುತ್ವದ ಎಚ್ಚರ' ಸ್ಮರಣೆ ಮತ್ತು ಪ್ರಮಾಣ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವಸೇನೆ ರಾಜ್ಯಾಧ್ಯಕ್ಷ ದೇವರಾಜು ಟಿ.ಕಾಟೂರು ಮಾತನಾಡಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ 26-5-2024

“ ಎರಡು ವರ್ಷಗಳ ಹಿಂದೆ ಸಹಸ್ರ ಚಂದ್ರ ದರ್ಶನ ಭಾಗ್ಯ ಪಡೆದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಇಂದು (ಮೇ.26) 83ನೇ ವರ್ಧಂತಿ ಉತ್ಸವ ನಡೆಯುತ್ತಿದೆ. ಅವರು ಶತಾಯುಷಿಗಳಾಗಿ ಶತಕೋಟಿ ಭಕ್ತರನ್ನು ನಿರಂತರವಾಗಿ ಹರಸುತ್ತಿರಲಿ, ಮೈಸೂರು ನಗರ ಆಧ್ಯಾತ್ಮಿಕ ಕ್ಷಿತಜದಲ್ಲಿ ಧ್ರುವತಾರೆಯಾಗಿ ಮೆರೆಯುತ್ತಿರಲಿ ಎಂದು ನಾವೆಲ್ಲಾ ಹಾರೈಸೋಣ.



ಆಧ್ಯಾತ್ಮಿಕ ಸಂತ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರಿನ ನಂಜನಗೂಡು ರಸ್ತೆಯ, ಚಾಮುಂಡಿಬೆಟ್ಟದ ತಪ್ಪಲಿನ ಅವಧೂತ ದತ್ತಪೀಠದ ಜಗದ್ಗುರು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನಿಜ ಅರ್ಥದಲ್ಲಿ ದೇವಧೂತ. ನಿಜ ಜೀವನದಲ್ಲಿ ದೇವರ ಸಂದೇಶ ಜನರಿಗೆ ತಲುಪಿಸುವ ಆಧ್ಯಾತ್ಮಿಕ ಸಂತ. ಕಳೆದ 58 ವರ್ಷಗಳಿಂದ ಮೈಸೂರಿನ ತಮ್ಮ ಆಶ್ರಮವನ್ನು ಮುಖ್ಯ ಕಾರ್ಯಕ್ಷೇತ್ರವಾಗಿಸಿಕೊಂಡು ವಿಶ್ವಾದ್ಯಂತ 102 ಆಶ್ರಮ, ಅಸಂಖ್ಯಾತ ಭಕ್ತ ಸಮೂಹ ಹೊಂದಿದ್ದಾರೆ.

ಇವರು ದೈವ ಸಂಕಲ್ಪವಿದ್ದರೆ, ಮನುಷ್ಯ ಪ್ರಯತ್ನದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ ಎನ್ನುವುದನ್ನು ತೋರಿಸಿಕೊಟ್ಟ ವಿರಾಟಯೋಗಿ. ದೈವಿಕ ಸತ್ಯ ದರ್ಶನ ಕಂಡ ಸಾಕ್ಷಾತ್ಕಾರಿ ಮಹಾಸಂತ. ಪ್ರಾಣಿ-ಪಕ್ಷಿಗಳಲ್ಲಿ, ವೃಕ್ಷ ರಾಶಿಗಳಲ್ಲಿ ದೇವತೆಗಳನ್ನು ಕಾಣುವ ಅಂತರ್ದೃಷ್ಟಿವುಳ್ಳ ಮತ್ತು ಸಂಗೀತದಲ್ಲೂ ಅಧ್ಯಾತ್ಮದ ಚಿಕಿತ್ಸಕ ದೃಷ್ಟಿ ಹೊಂದಿದ ಸಾಧಕಸಂತ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ.

ಸಾಧಿಸುವ ಛಲವೊಂದಿದ್ದರೆ ಮನುಷ್ಯ ಎಂಥ ವಿಕ್ರಮವನ್ನಾದರೂ ಸಾಧಿಸಬಹುದೆಂಬುದಕ್ಕೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಆಧ್ಯಾತ್ಮಿಕ ಸಾಧನೆಯೇ ಸಾಕ್ಷಿ. ಅವರು ಧಾರ್ಮಿಕ-ಸಾಮಾಜಿಕ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ನಿರ್ಧಾರ ಕೈಗೊಳ್ಳುವ ಸುಧಾರಣಾಪರ ಯೋಗಿ ಎಂದರೆ ಅತಿಶಯೋಕ್ತಿ ಆಗಲಾರದು. ಅಸ್ಪೃಶ್ಯತೆ ಭಾರತೀಯ ಸಂಸ್ಕೃತಿಗೆ ಅಂಟಿದ ದೊಡ್ಡ ಕಪ್ಪುಚುಕ್ಕೆ, ಅಸ್ಪೃಶ್ಯತೆ ಅಳಿಸಲು ಹಿಂದೂ ಧರ್ಮ ಗುರುಗಳೆಲ್ಲ ಒಂದಾಗಿ ಹೋರಾಡುವ ಸಂಕಲ್ಪ ತೊಡಬೇಕೆಂದು ಸಾರ್ವಜನಿಕವಾಗಿ ಕರೆಕೊಟ್ಟ ಧೀರ ಸನ್ಯಾಸಿ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ. ಪ್ರತಿವರ್ಷ ತಮ್ಮ ಆಶ್ರಮದಲ್ಲಿ ಸಾವಿರಾರು ದಲಿತರ ಸಮಾವೇಶ ನಡೆಸಿ, ದಲಿತರ ಸ್ಥಿತಿಗತಿ ಸುಧಾರಣೆಗೆ ಧರ್ಮಸೂತ್ರದಡಿ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡುತ್ತಿದ್ದಾರೆ.

ಇಂಥ ಉದ್ದಾಮ ಸಂತರು, ಸಂಸ್ಕೃತ ವಿದ್ಯಾಶಾಲೆ ಜೊತೆಗೆ ಎರಡು ಕನ್ನಡ ಶಾಲೆಗಳನ್ನು ತೆರೆದು ಉಚಿತ ಶಿಕ್ಷಣ ನೀಡುವ ಉದಾರಶೀಲ ವಟುವಾಗಿದ್ದಾರೆ. ಧಾರ್ಮಿಕ ಸತ್ಸಂಗದ ಮೂಲಕ ಧರ್ಮ-ಕರ್ಮಗಳಲ್ಲಿ ಜನ ನಂಬಿಕೆ ಇಟ್ಟು ನೈತಿಕವಾಗಿ ಬದುಕುವಂತೆ ಪ್ರೇರೇಪಿಸುವ ಮಾರ್ಗದರ್ಶಿ ಯೋಗಿಯಾಗಿದ್ದಾರೆ. ಹಾಗೇ, ಭೂ ಒಡಲುರಿ ತಣಿಸಲು ಪರಿಸರ ಸಂರಕ್ಷಣೆಗೆ ಶ್ರಮಿಸುತ್ತಿರುವ ಕ್ರಾಂತಿಕಾರಿ ಯೋಗಿಯೂ ಆಗಿದ್ದಾರೆ.

* * *

ಮೇಕೆದಾಟುವಿನಲ್ಲಿ ಶ್ರೀಗಳ ಜನನ: ಇಂಥ ಆಧ್ಯಾತ್ಮಿಕ ಮಹಾಸಂತ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಹುಟ್ಟಿದ್ದು ಬೆಂಗಳೂರು ಜಿಲ್ಲೆ, ಕನಕಪುರ ತಾಲೂಕಿನ ಅರಣ್ಯಗಳಲ್ಲಿ ಹರಿಯುವ ಅರ್ಕಾವತಿ-ಗುಪ್ತಾಮಿನಿ-ಕಾವೇರಿ ನದಿಗಳ ತ್ರಿವೇಣಿ ಸಂಗಮದ ಪುಣ್ಯಕ್ಷೇತ್ರ ವಾದ ಮೇಕೆದಾಟುವಿನಲ್ಲಿ. ತಾಯಿ ಹರಿತಸ ಗೋತ್ರೋದ್ಭವರಾದ ಲಿಂಗಣ್ಣನವರ ಮಗಳು ಜಯಲಕ್ಷ್ಮಿ, ತಂದೆ ಆಂಧ್ರಪ್ರದೇಶದ ಅನಂತಪುರದ ಬೊಮ್ಮೆಪರ್ತಿ ಗ್ರಾಮದ ನರಸಿಂಹಶಾಸ್ತ್ರಿ. ಈ ದಂಪತಿಯ ಜ್ಯೇಷ್ಠ ಪುತ್ರರಾಗಿ ಚಿತ್ರಭಾನು ಸಂವತ್ಸರದ ಜ್ಯೇಷ್ಠ ಶುದ್ಧ ಏಕಾದಶಿ ಮಂಗಳವಾರದಂದು(ಕ್ರಿಸ್ತಶಕೆ: 26-5-1942) ಜನಿಸಿದ ಸತ್ಯನಾರಾಯಣ ಎಂಬ ಬಾಲ ಪ್ರತಿಭೆ ಶ್ರೀಗಣಪತಿ ಸಚ್ಚಿದಾನಂದಸ್ವಾಮೀಜಿ ಆಗಿ ಬೆಳೆದು, ಆಧ್ಯಾತ್ಮಿಕ ಹಾದಿಯಲ್ಲಿ ಸಾಗಿದ್ದೇ ಒಂದು ರೋಚಕ ಸಂಗತಿ. ಇವರ ಆಧ್ಯಾತ್ಮಿಕ ಬದುಕಿನ ಮೊದಲ ಗುರು ತಾಯಿ ಜಯಲಕ್ಷ್ಮಿ ಮಾತಾ. 1953ರಲ್ಲಿ ತಮ್ಮ ಯೋಗವಿದ್ಯೆಯನ್ನೆಲ್ಲ ಶಕ್ತಿಪಾತ ವಿಧಾನದಿಂದ ತಮ್ಮ ಮುದ್ದಿನ ಮಗನಿಗೆ ಧಾರೆಯೆರೆದು, ದೇಹತ್ಯಾಗ ಮಾಡಿದ ತ್ಯಾಗಮಯಿ ತಾಯಿ. 1924ರ ಶಂಕರಜಯಂತಿಯಂದು ಧರೆಗೆ ಬಂದ ಆ ಮಹಾಸಾಧ್ವಿ, 1953ರ ಶಂಕರಜಯಂತಿಯಂದೇ ಇಹಲೋಕ ತ್ಯಜಿಸಿದ್ದು, ದೈವ ನಿರ್ಣಯವಾಗಿತ್ತು. ಮಗ ಸತ್ಯನಾರಾಯಣ ಭಾರತದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಲೋಕದಲ್ಲಿ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಗಿ ಬೆಳಗುವ ಆ ಮಹಾಮಾತೆಯ ಸಂಕಲ್ಪವೂ ಆಗಿತ್ತು.

* * *

ಪತ್ನಿಯನ್ನು ಕಳೆದುಕೊಂಡ ತಂದೆ ನರಸಿಂಹ ಶಾಸ್ತ್ರಿಗಳು ಸಂಸಾರ ತ್ಯಜಿಸಿ, ವಿರಾಗಿಯಾದಾಗ ಬಾಲಕ ಸತ್ಯನಾರಾಯಣರಿಗೆ 11 ವರ್ಷ. ತಂಗಿಯರಾದ 8 ವರ್ಷದ ವರಲಕ್ಷ್ಮಿ, 5 ವರ್ಷದ ಸರಸ್ವತಿ ಮತ್ತು ಒಂದು ತಿಂಗಳ ಹಸುಗೂಸು ತಮ್ಮ ಕೋದಂಡ ರಾಮರೊಂದಿಗೆ ಮೈಸೂರಿನಲ್ಲಿದ್ದ ತಾತ ಲಿಂಗಣ್ಣನವರ ಮನೆಯಲ್ಲಿ ಆಶ್ರಯ ಪಡೆದರು. ಕಡುಬಡತನದ ಬೇಗೆಯಲ್ಲು ತಾತಾ ಲಿಂಗಣ್ಣನವರು ಮೊಮ್ಮಕ್ಕಳನ್ನು ಕಷ್ಟಪಟ್ಟು ಸಾಕುತ್ತಿದ್ದರು. ಹೀಗಿರುವಾಗ ಒಂದು ತಿಂಗಳ ತಮ್ಮ ಕೋದಂಡರಾಮ ತಾಯ ಹಂಬಲಿಸಿ ಅವರ ಬಳಿಯೇ ಹೋದ. ಉಳಿದ ಮೂರು ಮಕ್ಕಳನ್ನು ಸಾಕಲಾರದೇ ತಾತಾ ಲಿಂಗಣ್ಣ ಎಳೆಯ ಮಗು ಸರಸ್ವತಿಯನ್ನು ಮೈಸೂರಿನಲ್ಲೇ ಇದ್ದ ಕೊನೆಯ ಮಗಳು ಪಾರ್ವತಮ್ಮನ ಬಳಿ ಮತ್ತು ಸತ್ಯನಾರಾಯಣ, ವರಲಕ್ಷ್ಮಿಯರನ್ನು ಬನ್ನೇರುಘಟ್ಟದಲ್ಲಿದ್ದ ಅವರ ಎರಡನೆಯ ಮಗಳು ಶಾರದಮ್ಮನ ಹತ್ತಿರ ಬಿಟ್ಟರು. ಶಾರದಮ್ಮನವರ ಗಂಡ ಶೇಷಗಿರಿಶಾಸ್ತ್ರಿಗಳು ಅಲ್ಲಿನ ಚಂಪಕಧಾಮ ಸ್ವಾಮಿಯ ದೇವಾಲಯದಲ್ಲಿ ಅರ್ಚಕರಾಗಿದ್ದರು. ಆ ದೇವಾಲಯದ ಸುತ್ತಲೂ ದಟ್ಟಕಾಡು ಇದ್ದದ್ದು ಬಾಲಯೋಗಿ ಸತ್ಯನಾರಾಯಣರ ಆಧ್ಯಾತ್ಮಿಕ ಸಾಧನೆಗೆ ನೆರವಾಯಿತು. ತಾಯಿ ಕಲಿಸಿಕೊಟ್ಟ ಅಧ್ಯಾತ್ಮ ವಿದ್ಯೆಯ ಅಧ್ಯಯನವನ್ನು ಅಲ್ಲಿ ನಿರಂತರವಾಗಿ ಮಾಡುತ್ತಿದ್ದರು.

ಹೀಗಿರುವಾಗ ಬಾಲಯೋಗಿ ಸತ್ಯನಾರಾಯಣರಿಗೆ ಮತ್ತಷ್ಟು ಅಧ್ಯಾತ್ಮದಲ್ಲಿ ತೊಡಗಿಸಿಕೊಳ್ಳುವ ಮಾರ್ಗವನ್ನು ಭಗವಂತ ಕಲ್ಪಿಸಿಕೊಟ್ಟ. ಆಂಧ್ರ ಪ್ರದೇಶದ ಪ್ರೊದ್ದಟೂರಿನಲ್ಲಿರುವ ಉಮಾಮಹೇಶ್ವರ ದೇವಾಲಯದಲ್ಲಿ ಸನ್ಯಾಸಿನಿಯಾಗಿ ಬದುಕು ಸಾಗಿಸುತ್ತಿದ್ದ ಸೋದರತ್ತೆ ವೆಂಕಮ್ಮ(ತಂದೆ ನರಸಿಂಹಶಾಸ್ತ್ರಿ ಅಕ್ಕ)ನವರ ಆಶ್ರಯಕ್ಕೆ ಬಂದರು. ಆ ಯೋಗಿನಿಯು ತನ್ನ ಹಠಯೋಗ ವಿದ್ಯೆಯನ್ನೆಲ್ಲಾ ಬಾಲಕ ಸತ್ಯನಾರಾಯಣರಿಗೆ ಧಾರೆಯೆರೆದರು. ಪ್ರೊದ್ದಟೂರಿನಲ್ಲೇ ಇದ್ದ ಶ್ರೀ ಅಭೇದಾನಂದ ಸ್ವಾಮಿ ಮತ್ತು ಆಗಾಗ ಅಲ್ಲಿಗೆ ಬರುತ್ತಿದ್ದ ಶ್ರೀ ಯೋಗೀಂದ್ರ ಭಾರತೀ ಸ್ವಾಮಿಯವರ ಸಾಂಗತ್ಯ ಸಹ ಸತ್ಯನಾರಾಯಣನಿಗೆ ಹೆಚ್ಚಿನ ಆಧ್ಯಾತ್ಮಿಕ ಜ್ಞಾನ ತುಂಬಿತು.

* * *

ಸಾಧನಾಸಿದ್ಧಿಯಿಂದ ಶ್ರೀಗಣಪತಿ ಸಚ್ಚಿದಾನಂದರಾದರು: 1955ರಲ್ಲಿ ವೆಂಕಮ್ಮನವರು ಮೃತರಾದಾಗ ಮತ್ತೆ ಅನಾಥರಾದ ಸತ್ಯನಾರಾಯಣ ಮತ್ತು ವರಲಕ್ಷ್ಮಿಯರಿಗೆ ಅನಂತಪುರ ಸಮೀಪದ ಕಂದುಕೂರು ಗ್ರಾಮದಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದ ಬಲ ಅಣ್ಣ ನಂಜುಂಡಯ್ಯ ಆಶ್ರಯ ನೀಡಿದರು. ಅನಂತಪುರದಲ್ಲಿದ್ದ ಸ್ಕೂಲಿನಲ್ಲಿ ಆರನೆಯ ತರಗತಿಗೆ ಸೇರಿಸಿದ್ದರು. ಆದರೆ ಕಂದುಕೂರಿನಲ್ಲೇ ಇದ್ದ ವರಲಕ್ಷ್ಮಿಗೆ ನಂಜುಂಡಯ್ಯನವರ ಅಜ್ಜಿ ಅಂಬಮ್ಮನವರ ಕಿರುಕುಳ ಹೆಚ್ಚಾಯಿತು. ತಂಗಿಯ ಬವಣೆ ನೋಡಲಾರದೆ ಬಾಲಕ ಸತ್ಯನಾರಾಯಣ 1957ರಲ್ಲಿ ವರಲಕ್ಷ್ಮಿಯೊಂದಿಗೆ ಮತ್ತೆ ಮೈಸೂರಿನಲ್ಲಿದ್ದ ತಾತಾ ಲಿಂಗಣ್ಣನವರ ಆಶ್ರಯಕ್ಕೆ ಬಂದರು. ಕೆಸರೆ ಎಲೆಕ್ಟ್ರಿಸಿಟಿ ಕಾಲೋನಿಯಲ್ಲಿದ್ದ ಚಿಕ್ಕಮ್ಮ ಪಾರ್ವತಮ್ಮನ ಮನೆಯಲ್ಲಿ ಸ್ವಲ್ಪದಿನ, ದೊಡ್ಡಮ್ಮ ಶಾರದಮ್ಮ ಮನೆಯಲ್ಲಿ ಕೆಲಕಾಲ ಕಳೆಯುತ್ತಾ ಇದ್ದರು. 1958-61ರವರೆಗೆ ಮೈಸೂರಿನ ಅನಾಥ ಮಕ್ಕಳ ಆಶ್ರಯದಾತ ಟಿ.ಎಸ್.ಸುಬ್ಬಣ್ಣನವರ ಸಾರ್ವಜನಿಕ ಹಾಸ್ಟೆಲ್‌ನಲ್ಲಿ ಪ್ರೌಢಶಾಲೆ ಪೂರೈಸಿ, ತಂಗಿಯರ ಸಾಕಲು ಅಂಚೆ ಕಚೇರಿಯಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು. ಆದರೆ ಅಂತರಂಗಿಕವಾಗಿ ಆಧ್ಯಾತ್ಮಿಕ ಸಾಧನೆ ಮುಂದುವರೆಸಿದ್ದರು. ವಿಶೇಷವಾಗಿ ಅರ್ಕಮಹಾಗಣಪತಿಯ ಸಾಧನಾಸಿದ್ಧಿಯಿಂದ ಜನರ ಐಹಿಕಾಭಿವೃದ್ಧಿಗೆ ಶ್ರಮಿಸುತ್ತಿದ್ದರು. ಇದಕ್ಕಾಗಿ ತಮ್ಮ ನಿವಾಸವನ್ನು ಮೈಸೂರಿನ ಕೆಸರೆಯ ಎಲೆಕ್ಟ್ರಿಸಿಟಿ ಕಾಲೋನಿಯ ಒಬ್ಬ ಗೆಳೆಯನ ಮನೆಗೆ ಬದಲಾಯಿಸಿದರು.

ಸನ್ಯಾಸ ದೀಕ್ಷಾ ಸ್ವೀಕಾರದ ಸಮಯದಲ್ಲಿ ತಾಯಿ ಜಯಲಕ್ಷ್ಮಿ ಮಾತಾ ಅನುಗ್ರಹಿಸಿಕೊಟ್ಟಿದ್ದ ಪ್ರಶ್ನಗಣಪತಿಯ ರತ್ನಶಿಲೆಯಿಂದ ಗಣಪತಿಯ ಸಂದೇಶಗಳು ಕೇಳಿಸತೊಡಗಿತು. ಆಗ ಸತ್ಯನಾರಾಯಣ ಎಂಬ ತಮ್ಮ ಮೂಲ ಹೆಸರನ್ನು ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯಾಗಿ ಪರಿವರ್ತಿಸಿ ಧರ್ಮಪ್ರಚಾರಕ್ಕಿಳಿದರು.

* * *

ಎಸ್.ಪ್ರಕಾಶ್ ಬಾಬು
ಮೈಸೂರು
ಮೊ. 9844463930

ಅಂದಿನಿಂದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮಿಯಾಗಿ ಕೆಸರೆಯ ಎಲೆಕ್ಟ್ರಿಸಿಟಿ ಕಾಲೋನಿಯಲ್ಲಿ ಪ್ರತಿ ಭಾನುವಾರ ಗಣಪತಿಯ ಹೋಮ, ದಿವ್ಯನಾಮ ಸಂಕೀರ್ತನೆ ನಡೆಸತೊಡಗಿದರು. ಕೇರಳ, ಆಂಧ್ರ, ತಮಿಳುನಾಡು ರಾಜ್ಯಗಳ ಲಕ್ಷಾಂತರ ಭಕ್ತರು ಇದರಲ್ಲಿ ಪಾಲ್ಗೊಳ್ಳುತ್ತಿದ್ದರು. ಅಂದು ಕೊಡುಗೈದಾನಿ ಎಂದೇ ಖ್ಯಾತರಾದ ಸಾಹುಕಾರ್ ಚೆನ್ನಯ್ಯ ಉದಾರವಾಗಿ ಕೊಟ್ಟಿದ್ದ ಕೆಸರೆ ನಿವೇಶನವನ್ನು ಮಾರಿ, ಆ ಹಣದಲ್ಲಿ 1966ರ ಜೂನ್.6ರಂದು ನಂಜನಗೂಡು ರಸ್ತೆಯಲ್ಲಿರುವ ಚಾಮುಂಡಿ ಬೆಟ್ಟದ ತಪ್ಪಲಿನ ಈಗಿನ ಅವಧೂತ ದತ್ತಪೀಠದ ಆಶ್ರಮ ಸ್ಥಾಪಿಸಿದರು. ಆಶ್ರಮ ಸ್ಥಾಪನೆಯಾದ ಕೆಲದಿನಗಳಲ್ಲೆ ಸ್ವಾಮೀಜಿಯವರು ಶ್ರೀಶೈಲದ ಪಾತಾಳ ಗಂಗೆಯಲ್ಲಿ ಸ್ನಾನಮಾಡುತ್ತಿದ್ದಾಗ ಸಿಕ್ಕ ಕಾಷಾಯ ವಸ್ತ್ರದಿಂದ ಅವರಿಗೆ ಅವಧೂತ ದೀಕ್ಷೆ ಲಭಿಸಿತು. ಅಂದಿನಿಂದ ಶ್ವೇತವಸ್ತ್ರ ತ್ಯಜಿಸಿ, ಕಾಷಾಯ ವಸ್ತ್ರಧಾರಿಯಾದರು 1968ರಲ್ಲಿ ಎರಡನೆಯ ತಂಗಿ ಸರಸ್ವತಿಯ ಮದುವೆಯನ್ನು ದತ್ತಪೀಠದ ಆಶ್ರಮದಲ್ಲೇ ನಡೆಸಿದರು.

1969ರಲ್ಲಿ ಅನ್ನಪೂರ್ಣಮಂದಿರವೆಂಬ ಸುವಿಶಾಲವಾದ ಷೀಟಿನ ಷೆಡ್ಡು ನಿರ್ಮಿಸಿದರು. ಅರ್ಥರಹಿತವಾದ ಅಂತಃಕಲಹಗಳ ವಿಷವಲಯದಲ್ಲಿ ಸಿಕ್ಕಿರುವ ಭಾರತೀಯ ಭಕ್ತಕೋಟಿ ದ್ವೇಷ ಭಾವನೆಗಳ ಬಿಟ್ಟು, ಅಸ್ಪೃಶ್ಯರಹಿತವಾದ ದೈವದೃಷ್ಟಿಯನ್ನುಂಟು ಮಾಡಲು 1971ರಲ್ಲಿ ಅಪರೂಪವಾದ ತ್ರಿಮತಸ್ಥ ಸಮ್ಮೇಳನ ಆಶ್ರಮದಲ್ಲಿ ನಡೆಸಿದರು. ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಪೀಠಾಧಿಪತಿಗಳು ಸಮಾವೇಶಗೊಂಡು ಶ್ರೀಗಣಪತಿ ಸಚ್ಚಿದಾನಂದಸ್ವಾಮೀಜಿಯವರ ಭಾವನೆಗಳಿಗೆ ಸ್ಪಂದಿಸಿದರು. ಇದರ ಸ್ಮರಣಾರ್ಥ ಅಂದು ರಾಮಾನುಜ-ಮಧ್ವ-ಶಂಕರ ಕುಟೀರ ಎಂಬ ಮಂದಿರಕ್ಕೆ ತ್ರಿಮತಸ್ಥ ಯತಿಗಳಿಂದಲೇ ಶಂಕುಸ್ಥಾಪನೆ ಮಾಡಿಸಿದರು. ಇದು ರಾ.ಮ.ಶಂಕರ ಕುಟೀರ ಎಂಬ ಮಂದಿರವಾಗಿ 1976ರಲ್ಲಿ ಲೋಕಾರ್ಪಣೆ ಯಾಯಿತು. 1978ರ ಜೂನ್.9ರಂದು ಆಶ್ರಮದಲ್ಲಿ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಅಮೃತ ಹಸ್ತದಿಂದ ಕಾಲಾಗ್ನಿಶಮನ ದತ್ತಾತ್ರೇಯ ಪ್ರತಿಷ್ಠಾಪನೆಯಾಗಿ ದತ್ತ ಪ್ರಭಂಜನವು ವಿಶ್ವವಿಖ್ಯಾತವಾಯಿತು.

* * *

ನಿಜಾರ್ಥದ ಜಗದ್ಗುರು: 1976ರಲ್ಲಿ ಮೊತ್ತ ಮೊದಲ ಬಾರಿಗೆ ವಿದೇಶ ಪರ್ಯಟನೆಯನ್ನು ಆರಂಭಿಸಿದ ಶ್ರೀಗಣಪತಿ ಸಚ್ಚಿದಾನಂದಸ್ವಾಮೀಜಿಯವರು ನೂರಾರು ಬಾರಿ ವಿದೇಶ ಪರ್ಯಟನೆ ಮಾಡಿ, ನಿಜಾರ್ಥದಲ್ಲಿ ಜಗದ್ಗುರುವಾಗಿದ್ದಾರೆ. ವಿಶ್ವದ ಅನೇಕ ಕಡೆ ಅಸಂಖ್ಯಾತ ಆಧ್ಯಾತ್ಮಿಕ ಪ್ರವಚನಗಳನ್ನು ಕೊಟ್ಟಿದ್ದಾರೆ. ವಿದೇಶಗಳಲ್ಲಿ ಹಲವು ದತ್ತಾತ್ರೇಯ ದೇವಾಲಯಗಳನ್ನು ನಿರ್ಮಿಸಿದ್ದಾರೆ. ವೆಸ್ಟ್ ಇಂಡೀಸ್ ದ್ವೀಪ ಸಮೂಹದ ಟ್ರಿನಿಡಾಡ್‌ನಲ್ಲಿ 108 ಅಡಿ ಎತ್ತರದ ಶ್ರೀಕಾರ್ಯಸಿದ್ಧಿ ಹನುಮಾನ್ ಬೃಹತ್ ಏಕಶಿಲಾ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಅಮೆರಿಕಾದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಎಂಟು ಶಾಖೆಗಳಿವೆ. ಬಾಲ್ಯದಿಂದಲೂ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಸಂಗೀತದ ಮೇಲೆ ವಿಶೇಷ ಆಸಕ್ತಿ. 1964ರಿಂದಲೂ ಸ್ವಾಮೀಜಿ ಅವರು ನಡೆಸುತ್ತಿದ್ದ ಸಂಕೀರ್ತನ ರಾಗಪದ್ಧತಿಗಳನ್ನು 1982ರಿಂದ ರೋಲ್ಯಾಂಡ್‌ನಂಥ ಸಿಂಥಸೈಜರ್ ಸಂಗೀತದ ಮೂಲಕ ಹೊರಹೊಮ್ಮಿಸಿ, ಸಂಗೀತಲೋಕವನ್ನು ಅಚ್ಚರಿಗೊಳಿಸಿದ್ದಾರೆ. ಆಧ್ಯಾತ್ಮಿಕ ಸ್ಪರ್ಶದ ಈ ರಾಗರಾಗಿಣೀ ವಿದ್ಯೆಯನ್ನು ತನ್ಮಯಗೊಳಿಸಿ, ಶ್ರೋತೃಗಳಿಗೆ ಆಧ್ಯಾತ್ಮಿಕ ಸಂಗೀತ ಚಿಕಿತ್ಸಕವನ್ನು ಪ್ರಸಾದಿಸುತ್ತಾ ಬಂದಿದ್ದಾರೆ.


* * *

ಭಕ್ತಿ-ಭಾವಲತೆಗಳನ್ನು ದೇಶ-ವಿದೇಶಗಳಲ್ಲಿ ಹಬ್ಬಿಸುತ್ತಿರುವ ಶ್ರೀಗಣಪತಿಸಚ್ಚಿದಾನಂದ ಸ್ವಾಮೀಜಿ ಅವರು, ಮೈಸೂರಿನ ತಮ್ಮ ಆಶ್ರಮವನ್ನೆ ಆಧ್ಯಾತ್ಮಿಕ ಮತ್ತು ಧಾರ್ಮಿಕ ಪ್ರವಾಸಿ ತಾಣವಾಗಿಸಿದ್ದಾರೆ. ಇಲ್ಲಿರುವ ಕಾಲಾಗ್ನಿ ದತ್ತಾತ್ರೇಯ ದೇವಸ್ಥಾನವಲ್ಲದೆ, ಶ್ರೀ ದತ್ತವೆಂಕಟೇಶ್ವರ ದೇವಾಲಯ ಮತ್ತು ಶ್ರೀಕಾರ್ಯಸಿದ್ಧಿ ಹನುಮಾನ್ ದೇವಾಲಯಗಳು ಭಕ್ತರ ಸೆಳೆಯುತ್ತಿವೆ. ದಕ್ಷಿಣ ಅಮೆರಿಕಾದಲ್ಲಿ ಕಂಡು ಬರುವ ನಾನೂರಕ್ಕೂ ಹೆಚ್ಚು ಜಾತಿಯ ಗಿಣಿಗಳನ್ನು ತಮ್ಮ ಆಶ್ರಮದ ಶುಕವನದಲ್ಲಿ ಸಂರಕ್ಷಿಸಿ ಗಿನ್ನಿಸ್ ದಾಖಲೆ ಸ್ಥಾಪಿಸಿದ್ದಾರೆ. ಅಪರೂಪದ ಬೋನ್ಸಾಯ್ ಗಾರ್ಡನ್‌ನಲ್ಲೂ ದೇವರ ನೆಲೆ ಹುಡುಕುವ ಪ್ರಯತ್ನ ಮಾಡಿದಂತೆಯೇ, ಆಶ್ರಮದ ನವಗ್ರಹ ಉದ್ಯಾನದಲ್ಲಿ ಪ್ರತಿ ಗ್ರಹಕ್ಕು ವೃಕ್ಷದೇವತೆಗಳನ್ನು ಪ್ರತಿಷ್ಠಾಪಿಸಿದ್ದಾರೆ.

ಸಾವಯವ ಕೃಷಿಗೆ ಉತ್ತೇಜನ: ವಿಶ್ವಾದ್ಯಂತ ಇರುವ ತಮ್ಮ ವಿವಿಧ ಆಶ್ರಮದ ಶಾಖೆಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಮಾನವೋದ್ಧಾರದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದಾರೆ. ಬಹುಮುಖ್ಯವಾಗಿ ಭೂಪರಿಸರಕ್ಕೆ ಮಾರಕವಾದ ಆಧುನಿಕ ಕೈಗಾರಿಕೆ ಮತ್ತು ಕೃಷಿ ವಿಧಾನಗಳ ಸುಧಾರಣೆಗೆ ಯತ್ನಿಸುತ್ತಿದ್ದಾರೆ. ಇದಕ್ಕಾಗಿ ಕಳೆದ ಎರಡು ದಶಕಗಳಿಂದ ಶ್ರೀಗಣಪತಿ ಸ್ವಾಮೀಜಿ ಅವರು ರಾಸಾಯನಿಕ ಬೇಸಾಯದ ಬದಲು ನೈಸರ್ಗಿಕ ಅಥವ ಸಾವಯವ ಕೃಷಿ ಪದ್ಧತಿಯನ್ನು ರೈತರು ಅಳವಡಿಸಿಕೊಳ್ಳಬೇಕೆಂದು ಉಪದೇಶಿಸುತ್ತಿದ್ದಾರೆ. ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಭಾರತೀಯರು ಸೇಂದ್ರಿಯ ಗೊಬ್ಬರದ ಮಹಿಮೆಯನ್ನು ಅರಿತಿದ್ದ ವಿವರ ವರಾಹಮಿಹಿರನ ಬೃಹತ್ ಸಂಹಿತೆಯಲ್ಲಿದೆ. ಯಾವ ಬೆಳೆಗೆ ಯಾವ ಗೊಬ್ಬರ ಹಾಕಬೇಕು ಮತ್ತು ಅದನ್ನು ಹೇಗೆ ತಯಾರಿಸಬೇಕೆಂದು ಅದರಲ್ಲಿ ತಿಳಿಸಿದ್ದಾನೆ. ಇದನ್ನನುಸರಿಸಿ ರೈತರು ಮತ್ತು ಕೃಷಿ ವಿಜ್ಞಾನಿಗಳು ಚಿಂತನೆ ನಡೆಸಬೇಕು. ನಮ್ಮ ಭೂಪರಿಸರ ರಕ್ಷಿಸದಿದ್ದರೆ ಮಾನವ ಜನಾಂಗ ಅವನತಿಯ ಹಾದಿ ಹಿಡಿಯಲಿದೆ ಎಂದು ಎಚ್ಚರಿಸುತ್ತಾ ಬಂದಿದ್ದಾರೆ.

ಮಾನವನ ಅತಿರೇಕದ ಮತ್ತು ವಿವೇಚನಾರಹಿತ ಭೋಗವಿಲಾಸ ಜೀವನದಿಂದ ಆರೋಗ್ಯಕರ ಪರಿಸರ ಹಾಳಾಗಿ ಕೊರೊನಾದಂಥ ರೋಗರುಜಿನಗಳ ಬಾಧೆ ಮಿತಿಮೀರುತ್ತಿದೆ. ಆಧುನಿಕತೆ ಹೆಸರಿನಲ್ಲಿ ಮಾನವರು ಮಾಡಿಕೊಂಡ ಐಷಾರಾಮಿ ಬದುಕು, ಅವರ ರೋಗ ನಿರೋಧಕ ಶಕ್ತಿಯನ್ನೆ ಹಾಳು ಮಾಡಿದೆ. ಮನುಷ್ಯನ ದೈಹಿಕ ಶಕ್ತಿ ಕುಸಿದಂತೆಲ್ಲಾ ಮಾನಸಿಕ ದೌರ್ಬಲ್ಯಗಳು ಹೆಚ್ಚಿ, ಆತ ಆತಂಕದ ಉನ್ಮಾದ ಸ್ಥಿತಿ ತಲುಪುತ್ತಿದ್ದಾನೆ. ಕೆಲವೇ ಜನರ ಹಣದ ಲಾಲಾಸೆಗೆ ಇಡೀ ಮನುಕುಲವೇ ನಾಶವಾಗುತ್ತಿದೆ. ಈಗಲಾದರೂ ಮಾನವರು ಎಚ್ಚೆತ್ತು, ಐಷಾರಾಮಿ ಬದುಕು ಬಿಟ್ಟು ಪರಿಸರಕ್ಕೆ ಒಳಿತಾಗುವ ಕಾರ್ಯಾನುಷ್ಠಾನಕ್ಕೆ ರಚನಾತ್ಮಕವಾದ ದಿಟ್ಟ ಹೆಜ್ಜೆ ಇಡಬೇಕಿದೆ ಎಂದು ಪರಮಪೂಜ್ಯ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಜಗತ್ತಿಗೆ ಸಾರಿ ಸಾರಿ ಹೇಳುತ್ತಿದ್ದಾರೆ. ದುರಾದೃಷ್ಟವಶಾತ್, ಕೇಳಬೇಕಾದ ಕಿವಿಗ'ಳು ಆಧುನಿಕತೆಯ ಅಬ್ಬರದಲ್ಲಿ ಕಿವುಡಾಗಿ ಬಿಟ್ಟಿವೆ.

ಈಗಲಾದರೂ ಮಾನವರ ಕಿವಿಗಳು ಪರಿಸರದ ಕೂಗು ಕೇಳಿ, ಉತ್ತಮ ಬದುಕು ಕಟ್ಟಿಕೊಳ್ಳುವ ಕಡೆಗೆ ಮನಸು ಮಾಡಬೇಕು. ಇದಷ್ಟೆ ನಮಗಿರುವ ಏಕೈಕ ಬದುಕುವ ದಾರಿ ಎಂದು ಜನರಿಗೆ ಉಪದೇಶಾಮೃತ ನೀಡುತ್ತಿದ್ದಾರೆ. ಎರಡು ವರ್ಷಗಳ ಹಿಂದೆ ಸಹಸ್ರ ಚಂದ್ರ ದರ್ಶನ ಭಾಗ್ಯ ಪಡೆದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಇಂದು (ಮೇ.26) 83ನೇ ವರ್ಧಂತಿ ಉತ್ಸವ ನಡೆಯುತ್ತಿದೆ. ಅವರು ಶತಾಯುಷಿಗಳಾಗಿ ಶತಕೋಟಿ ಭಕ್ತರನ್ನು ನಿರಂತರವಾಗಿ ಹರಸುತ್ತಿರಲಿ, ಮೈಸೂರು ನಗರ ಆಧ್ಯಾತ್ಮಿಕ ಕ್ಷಿತಜದಲ್ಲಿ ಧ್ರುವತಾರೆಯಾಗಿ ಮೆರೆಯುತ್ತಿರಲಿ ಎಂದು ನಾವೆಲ್ಲಾ ಹಾರೈಸೋಣ.



ವಾರಭವಿಷ್ಯ

26.5.2024 ರಿಂದ 1.6.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ ಚಂದ್ರ-ಧನುಸ್ಸು, ಮಕರ, ಕುಂಭ ಮೀನ, ಕುಜ-ಮೀನ, ಬುಧ-ಮೇಷ, ವೃಷಭ ಗುರು-ವೃಷಭ ಶುಕ್ರ-ವೃಷಭ ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೯ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆರಂಭಕ್ಕೆ ಕೆಲವು ಅಹಿತಕರ ಘಟನೆಗಳು ನಡೆಯಬಹುದು. ಸಂಸಾರದಲ್ಲಿ ಮಾತನಾಡುವಾಗ ಅತಿಯಾದ ಆಕ್ರಮಣಕಾರಿ ಪ್ರವೃತ್ತಿ ಬೇಡ. ನಿಮ್ಮ ನಿಕಟವರ್ತಿಗಳು ಭಿನ್ನವಾದ ವರ್ತನೆ ತೋರಬಹುದು. ಇದರಿಂದ ನಿಮ್ಮ ಸಾಮಾಜಿಕ ಅಂತಸ್ತಿಗೆ ಧಕ್ಕೆಯಾದೀತು. ವಾರದ ಉತ್ತರಾರ್ಧಕ್ಕೆ ನೀವು ಚತುರ ಕಾರ್ಯ ನೀತಿ ಬಳಸಿ ಆರ್ಥಿಕ ಲಾಭವನ್ನು ಹೊಂದುವಿರಿ.

-ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಈ ವಾರ ನೀವು ಕೊಂಚ ತಾಳ್ಮೆ ವಹಿಸುವುದು ಒಳ್ಳೆಯದು. ಪ್ರತಿಯೊಂದು ಕೆಲಸವೂ ಯಶಸ್ವಿ ಆಗುತ್ತದೆಂದು ಹೇಳಲು ಬರುವುದಿಲ್ಲ. ಆದರೂ ಕೈಚೆಲ್ಲಿ ಕೂರುವುದು ಉಚಿತವಲ್ಲ. ನಿಮ್ಮ ಮನಸ್ಸು ಸಮ್ಮತಿಸದೆ ಇರುವ ಸಂಗತಿಗಳಿಗೆ ಕೈ ಹಾಕಬೇಡಿ. ವಾರಾಂತ್ಯಕ್ಕೆ ಯಶಸ್ಸು ನಿಮ್ಮ ಮುಡಿಗೇರುವುದು. ಮನೆಯಲ್ಲಿ ಹಿರಿಯರ ಔಷಧೋಪಚಾರಕ್ಕೆ ಹಣ ವ್ಯಯವಾಗುವುದು.

-ಶ್ರೀ ಚಾಮುಂಡೇಶ್ವರಿ ಆರಾಧನೆ. ಶುಭ ಸಂಖ್ಯೆ-3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಗುರುದೇವ ವ್ಯಯಸ್ಥಾನದಲ್ಲಿದ್ದು, ನೀವು ಯಾರೊಂದಿಗೆ ಮತ್ತು ಯಾವಾಗ ಒಡನಾಟ ಇಟ್ಟುಕೊಳ್ಳಬೇಕು ಎಂಬುದು ಈಗ ಮುಖ್ಯವಾಗಿದೆ. ಕೈಗೆ ಬಂದ ಹಣ ಬಿದಿರೆಲೆಗೆ ಬಿದ್ದ ನೀರಿನಂತೆ ಕಾಣೆಯಾಗುವುದು. ಯಾವುದೇ ವಿಷಯದಲ್ಲಿ ಸಮಯೋಚಿತ ನಿರ್ಧಾರ ಮಾಡದೆ ಹಿನ್ನಡೆಯನ್ನು ಅನುಭವಿಸುವಿರಿ. ವಾರದ ದ್ವಿತೀಯಾರ್ಧ ಉತ್ತಮ ರೀತಿಯಲ್ಲಿ ಸಾಗಲಿದೆ.

- ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-1.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ವಿವೇಕ ಸಂಪನ್ನತೆಯಿಂದ ಕಾರ್ಯಸಾಧನೆ. ನಿಮ್ಮ ಕಾರ್ಯವೈಖರಿಗೆ ಸರ್ವ ಸಮ್ಮತಿ ದೊರೆಯುವುದು. ಸಾಮಾಜಿಕ ಕಾರ್ಯಗಳಿಗಾಗಿ ಸಾಮರ್ಥ್ಯ ತೋರುವಿರಿ. ವಿದ್ಯಾರ್ಥಿಗಳಿಗೆ, ವಿಜ್ಞಾನಿಗಳಿಗೆ ಸ್ಫೂರ್ತಿಯಿಂದ ಕೆಲಸ ಮಾಡಲು ಗುರು ಪ್ರೇರಣೆಯಾಗುವುದು. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯ ನಡೆಯುವುದು. ವಾರಾಂತ್ಯಕ್ಕೆ ಅನ್ನದಾನ ಮಾಡಿ ಕೀರ್ತಿಗೆ ಭಾಜನರಾಗುವಿರಿ.

- ಶ್ರೀ ಶನಿ ಸ್ತೋತ್ರ, ಶುಭ ಸಂಖ್ಯೆ-6

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಕೆಲವೊಂದು ಅಸ್ಥಿರತೆಯ ಸಂದರ್ಭಗಳನ್ನು ಎದುರಿಸಬೇಕಾದೀತು. ಆದ್ಯತೆಯ ಅನುಸಾರ ಹೊಸ ಕೆಲಸಗಳನ್ನು ಕೈಗೆತ್ತಿಕೊಳ್ಳಿ. ಪ್ರೀತಿ-ಪ್ರೇಮ ವಿಷಯಗಳಲ್ಲಿ ಸಕಾರಾತ್ಮಕ ಫಲವನ್ನು ಹೊಂದುವಿರಿ. ಉದ್ಯೋಗಕ್ಕೆ ಸಂಬಂಧಪಟ್ಟಂತೆ ಪ್ರಯಾಣಗಳು ಎದುರಾಗುವುದು. ಅಷ್ಟಮ ಶನಿಯ ಪ್ರಭಾವದಿಂದ ಶತ್ರುಗಳು ಹುಟ್ಟಿಕೊಳ್ಳುವರು. ಅಸಮರ್ಪಕ ಆರೋಗ್ಯದಿಂದ ವೈದ್ಯರ ದರ್ಶನ.

- ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-7

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ನಿಮ್ಮಲ್ಲೇ ಅವಿಶ್ವಾಸ, ಮನೋಚಂಚಲತೆ, ಬಂಧು ವಿರೋಧಗಳು ಉಂಟಾಗುತ್ತವೆ. ಗುರು ಪ್ರಭಾವದಿಂದ ನಿಮ್ಮ ತಾಪತ್ರಯಗಳು ಕ್ರಮೇಣ ಬಗೆಹರಿಯಲಿದೆ. ನಿಮ್ಮ ಕುಂಡಲಿಯಲ್ಲಿ ದಶಾ-ಭುಕ್ತಿಗಳು ಉತ್ತಮವಿದ್ದರೆ, ನೀವು ಜೀವನದ ಉತ್ತುಂಗವನ್ನು ಏರುವಿರಿ. ಕೋರ್ಟು, ಕಚೇರಿ ವ್ಯವಹಾರಗಳು ನಿಮಗೆ ಅನುಕೂಲವಾಗಿ ನಡೆಯುವುದು. ಸ್ನಾಯು ಸೆಳೆತ ಕಾಡುತ್ತೆ.

- ಶ್ರೀ ಸತ್ಯನಾರಾಯಣ ಅರ್ಚನೆ. ಶುಭ ಸಂಖ್ಯೆ-8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸಪ್ತಾಹದ ಆದಿಗೆ ಧನ-ಧಾನ್ಯ ಲಾಭ. ನೂತನ ವಸ್ತ್ರಲಾಭ, ಪ್ರಿಯಕಾಮಿನಿಯ ಸಾಂಗತ್ಯ, ಸಹವಾಸ, ಉತ್ಸಾಹದಿಂದ ಕಾರ್ಯಮಗ್ನರಾಗಿರುವಿರಿ. ಆರ್ಥಿಕ ಮುಗ್ಗಟ್ಟು ಉಂಟಾದರೂ ಬಹುಮಟ್ಟಿಗೆ ನಿವಾರಿಸಿಕೊಳ್ಳುವಿರಿ. ಸ್ವತಂತ್ರ ವೃತ್ತಿ ಮಾಡುವವರಿಗೆ ಕೈತುಂಬಾ ಕೆಲಸ ಹಾಗೂ ಧನಾದಾಯ. ರಾಜಕೀಯ ವ್ಯಕ್ತಿಗಳಿಗೆ ಕಾನೂನು ಕಂಟಕಗಳು ಸುತ್ತಿಕೊಳ್ಳುವುದು. ಜಲಾಶಯಗಳ ಹತ್ತಿರ ಹುಡುಗಾಟ ಬೇಡಿ.

- ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-2

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ವಾರದಾರಂಭಕ್ಕೆ ಶುಭ ಚಂದ್ರ, ನಿಮ್ಮ ರಾಶಿಗೆ ಪ್ರವೇಶಿಸುವುದರ ದ್ಯೋತಕವೇನೆಂದರೆ ಹರ್ಷ ಉಲ್ಲಾಸಗಳು, ಹೊಸ ಮಿತ್ರರ ಭೇಟಿ, ಕುಟುಂಬ ವರ್ಗದವರಿಗೆ ಮುದ ನೀಡುವ ಸಂಗತಿಗಳು ಘಟಿಸುವುವು. ಗುರು-ಶನಿಗಳು ಅಶುಭರಿದ್ದು ಇನ್ನಷ್ಟು ಶತ್ರುಗಳು ಹುಟ್ಟಿಕೊಳ್ಳದಂತೆ ಎಚ್ಚರ ವಹಿಸಿ. ಸಂಚಾರಿ ನಿಯಮ ಅನುಸರಿಸಿ ಆಗಬಹುದಾದ ಅನಾಹುತವನ್ನು ದೂರ ಮಾಡಿಕೊಳ್ಳಿ.

- ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-3

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಮೈಮನಗಳಲ್ಲಿ ಹಾಗೂ ಮನೆಯಲ್ಲಿ ಹರುಷ, ಸಂತಸದ ವಾತಾವರಣ ಇರುತ್ತದೆ. ಎಲ್ಲಾ ಕೆಲಸಗಳನ್ನು ಒಮ್ಮೆಗೆ ನಿಭಾಯಿಸಲು ಹೋಗಿ ಪೇಚಿಗೆ ಸಿಲುಕುವಿರಿ. ನಿಮ್ಮ ರಾಜಕೀಯ ಹಾಗೂ ಸಾಮಾಜಿಕ ಪ್ರಭಾವ ವೃದ್ಧಿಸಲಿದೆ. ಮೋಸದ ಹಣಕಾಸಿನ ಪ್ರಸ್ತಾಪಗಳಿಗೆ ಬಲಿಯಾಗದಿರಿ. ವಾರದ ಕಡೆಗೆ ಸಂಬಂಧಿಕರಲ್ಲಿ ವಿವಾದಗಳು ಉಂಟಾಗುತ್ತವೆ.

- ಶ್ರೀ ಗುರುರಾಯರ ಪ್ರಾರ್ಥನೆ. ಶುಭ ಸಂಖ್ಯೆ-4

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಈ ವಾರ ನಿಮಗೆ ಆಶಾದಾಯಕವಾಗಿದೆ. ನಿಮ್ಮ ಸಾಧನೆಯ ಬಗ್ಗೆ ನಿಮಗೆ ನಂಬಿಕೆ ಇದ್ದಲ್ಲಿ ಮುಂದಿನ ದಾರಿ ಗೋಚರಿಸುತ್ತದೆ. ಸಣ್ಣ ಕೈಗಾರಿಕೆ ಹಾಗೂ ಗುಡಿ ಕೈಗಾರಿಕೆಯವರಿಗೆ ಅಪರೂಪದ ಅವಕಾಶಗಳು ದೊರಕುತ್ತವೆ. ಗೃಹ ನಿರ್ಮಾಣ ಕೆಲಸ ಪ್ರಾರಂಭಿಸಲು ಪೂರ್ವಭಾವಿ ತಯಾರಿಗಳಲ್ಲಿ ತೊಡಗಿಸಿಕೊಳ್ಳುವಿರಿ. ಕುಟುಂಬ ಸದಸ್ಯರೊಂದಿಗಿನ ವಿವಾದಗಳಿಂದ ಮುಕ್ತಿ ಪಡೆಯುತ್ತೀರಿ.

- ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-1

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಕಲಿಯುಗ ದಂಡಾಧಿಕಾರಿಯಾದ ಶನಿದೇವ ನಿಮ್ಮ ರಾಶಿಯಲ್ಲೇ ಸ್ಥಿತನಿದ್ದಾನೆ. ಕಾರಣ ಮನೆಯ ಆಂತರಿಕ ಕಲಹಗಳು, ಅಪನಂಬಿಕೆಗಳಿಂದ ಮಾನಸಿಕವಾಗಿ ಘಾಸಿಗೊಳ್ಳುವಿರಿ. ವಿಚಾರಹೀನತೆಯಿಂದ ಮಾಡುವ ಕೆಲಸಗಳು ನಿರೀಕ್ಷಿತ ಫಲ ನೀಡದೆ ಬೇಸರ. ವಾರ ಮಧ್ಯಾನಂತರ ಮನೋಕಾರಕ ಚಂದ್ರನಿಂದ ಮನಸ್ಸಿಗೆ ನೆಮ್ಮದಿ, ಸಂತಸ ನೀಡುವ ಮಾರ್ಗವೊಂದು ಗೋಚರಿಸುವುದು. ಮಂಡಿ ನೋವು ಕಾಡಬಹುದು.

- ಶ್ರೀ ಶನಿ ಸ್ತುತಿ. ಶುಭ ಸಂಖ್ಯೆ-5

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಸುಖ-ದುಃಖಗಳು ಚಲಿಸುವ ಮೋಡಗಳಂತೆ ಸ್ಥಿರವಲ್ಲ. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ ಎಂದು ಸಾತ್ವಿಕವಾಗಿ ಸ್ವೀಕರಿಸಿದರೆ ಚಿತ್ತಕ್ಷೋಭೆಯಿಂದ ಬಿಡುಗಡೆ ಹೊಂದಬಹುದು. ವಾರ ಸರಿದಂತೆ ಕೈಗೊಂಡ ಮುಖ್ಯ ಕೆಲಸ ಕಾರ್ಯಗಳಲ್ಲಿ ಆರಂಭದಲ್ಲಿ ಉಂಟಾಗಿದ್ದ ಅಡ್ಡಿ ಆತಂಕಗಳು ನಿವಾರಣೆ ಆಗುವುದು. ರಾಹು-ಕೇತುಗಳು ಶುಭರಿಲ್ಲ. ನೆರೆಹೊರೆಯಲ್ಲಿ ಕಲಹಕ್ಕೆ ಆಸ್ಪದ ಕೊಡದಿರಿ.

- ಶ್ರೀ ಶಿರಡಿಸಾಯಿ ದರ್ಶನ. ಶುಭ ಸಂಖ್ಯೆ-5

ತಿ.ನರಸೀಪುರ ಪುರಸಭೆಯಿಂದ ಮೂರು ಪಟ್ಟು ತೆರಿಗೆ ಹೆಚ್ಚಳ

ಅವೈಜ್ಞಾನಿಕ ತೆರಿಗೆ ಹೆಚ್ಚಳದಿಂದ ಸಾರ್ವಜನಿಕರಿಗೆ ಸಂಕಷ್ಟ: ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್ ಆಕ್ರೋಶ

ತಿ.ನರಸೀಪುರ, ಮೇ 25– ಪಟ್ಟಣದ ಪುರಸಭೆ ಆಸ್ತಿ ತೆರಿಗೆಯನ್ನು ಮೂರು ಪಟ್ಟು ಹೆಚ್ಚಿಸುವ ಮೂಲಕ ಬಡ ಜನತೆಯನ್ನು ಸಂಕಷ್ಟಕ್ಕೀಡು ಮಾಡಲು ಹೊರಟಿದೆ ಎಂದು ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೈರಾಪುರ, ಆಲಗೂಡು ಗ್ರಾಪಂಗಳು 2014–15ರಲ್ಲಿ ತಿ.ನರಸೀಪುರ ಪುರಸಭೆಗೆ ವಿಲೀನಗೊಳ್ಳುವ ಮೊದಲು ಒಂದು ಚದರ ಮನೆಗೆ 134 ರೂ. ಕಂದಾಯ ನಿಗದಿ ಮಾಡ ಲಾಗಿತ್ತು. ವಿಲೀನವಾದ ನಂತರ ಚದರವೊಂದಕ್ಕೆ 230 ರೂ. ಕಂದಾಯ ಕಟ್ಟಲಾಗುತ್ತಿತ್ತು. ನಂತರ 2023–24ನೇ ಸಾಲಿನಲ್ಲಿ ಪುರಸಭೆ ಚದುರವೊಂದಕ್ಕೆ 1686 ರೂ. ನಿಗದಿ ಮಾಡಿತ್ತು. ಆದರೆ ಪ್ರಸಕ್ತ 2024–25ನೇ ಸಾಲಿನಲ್ಲಿ 3937 ರೂ. ಪಡೆಯಲಾಗುತ್ತಿದೆ. ಅಂದರೆ ಕಳೆದ ಸಾಲಿಗಿಂತ ದುಪ್ಪಟ್ಟು ಕಂದಾಯವನ್ನು ಪುರಸಭೆ ನಿಗದಿ ಮಾಡಿದ್ದು, ಈ ಅವೈಜ್ಞಾನಿಕ ಆಸ್ತಿ ತೆರಿಗೆ ನೀತಿಯಿಂದ ಸಾರ್ವಜನಿಕರು ತೀವ್ರ ತೊಂದರೆಗೆ ಒಳಗಾಗಿದ್ದಾರೆ ಎಂದು ಆರೋಪಿಸಿದರು.

ಪುರಸಭೆ ವ್ಯಾಪ್ತಿಯ ಖಾಲಿ ನಿವೇಶನಕ್ಕೆ 2023–24ನೇ ಸಾಲಿನಲ್ಲಿ 500 ರೂ. ಕಂದಾಯ ನಿಗದಿ ಮಾಡಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ಮೂರು ಪಟ್ಟು ಹೆಚ್ಚು ಮಾಡಿ 2 ಸಾವಿರ ರೂ.ಗಳಿಗೆ ನಿಗದಿ ಮಾಡಿ ವಸೂಲಿ ಮಾಡಲಾಗುತ್ತಿದ್ದು, ಇದರಿಂದ ತೀವ್ರ ಸಮಸ್ಯೆ ಎದುರಾಗಿದೆ. ಬಡವರು ಕಂದಾಯ ಕಟ್ಟಲು ಆಗದೇ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.



ಸುದ್ದಿಗೋಷ್ಠಿಯಲ್ಲಿ ಎ.ಜೆ.ವೆಂಕಟೇಶ್ ಮಾತನಾಡಿದರು.

ಕಟ್ಟಡ ಲೈಸೆನ್ಸ್ ಕೊಡುತ್ತಿಲ್ಲ: ಪುರಸಭೆಯಿಂದ ಕಟ್ಟಡ ನಿರ್ಮಿಸಲು ಲೈಸೆನ್ಸ್ ನೀಡುತ್ತಿಲ್ಲ. ಆದ್ದರಿಂದ ಸಾರ್ವಜನಿಕರು ತಮಗಿಷ್ಟ ಬಂದಂತೆ ಕಟ್ಟಡ ನಿರ್ಮಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಪುರಸಭೆಯವರು ಕಟ್ಟಡ ನಿರ್ಮಾಣಕ್ಕೆ ಅಧಿಕೃತ ಲೈಸೆನ್ಸ್ ನೀಡಿ ಅನುಕೂಲ ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದರು.

ಭೈರಾಪುರ ಹಾಗೂ ಆಲಗೂಡು ಗ್ರಾಮದಲ್ಲಿ ದಾಖಲೆ ಹೊಂದಿರುವ ನಿವೇಶನಗಳಿಗೆ ಅನಧಿಕೃತ ನಿವೇಶನಗಳೆಂದು ಪರಿಗಣಿಸಲಾಗುತ್ತಿರುವುದರಿಂದ ತೀವ್ರ ತೊಂದರೆ ಅನುಭವಿಸುವಂತಾಗಿದೆ. ಪುರಸಭೆ ಸದಸ್ಯರು ಈ ಬಗ್ಗೆ ಗಮನಹರಿಸಿ ಅಧಿಕೃತ ಬಡಾವಣೆ ನಿವೇಶನಗಳೆಂದು ದಾಖಲಿಸುವ ಮೂಲಕ ಹೆಚ್ಚುವರಿಯಾಗಿ ವಸೂಲಿ ಮಾಡುತ್ತಿರುವ ಕಂದಾಯ ನಿಲ್ಲಿಸಿ ಜನತೆಗೆ ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಮುಖಂಡ ಪಿ.ಸ್ವಾಮಿನಾಥ್ ಮಾತನಾಡಿ, ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಬೀದಿ ದೀಪಗಳಿಲ್ಲದೇ ಜನತೆ ಪರಿತಪಿಸುವಂತಾಗಿದೆ. ಈ ಬಗ್ಗೆ ಗಮನ ಹರಿಸಿ ಬೀದಿ ದೀಪಗಳು ಬೆಳಗಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು ಮಾತನಾಡಿ, ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ರಿಜಿಸ್ಟರ್ ವ್ಯಾಲುವೇಷನ್ ಹಾಗೂ ಜಾಗದ ವ್ಯಾಲುವೇಷನ್ ಜಾಸ್ತಿ ಮಾಡಿದ್ದು, ಅದರ ಆಧಾರದ ಮೇಲೆ ನಾವು ಕಂದಾಯ ಹೆಚ್ಚಳ ಮಾಡಿದ್ದೇವೆ. ಇಲ್ಲಿ ಎಲ್ಲವೂ ಆನ್‌ಲೈನ್ ಮೂಲಕವೇ ವ್ಯವಹಾರ ನಡೆಯುವುದರಿಂದ ನಾವೇನು ಮಾಡಲು ಸಾಧ್ಯವಿಲ್ಲ ಎಂದು ಪುರಸಭೆಯವರು ಹೇಳುತ್ತಿದ್ದಾರೆ. ಆದರೆ ಇದೀಗ ಮೂರು ಪಟ್ಟು ಕಂದಾಯ ಹೆಚ್ಚಿಸಿರುವುದುರಿಂದ ಜನರಿಗೆ ತೀವ್ರ ತೊಂದರೆಯಾಗಿದ್ದು, ಈ ಹಿಂದೆ ಇದ್ದ ಮಾದರಿಯಲ್ಲೇ ಕಂದಾಯ ವಸೂಲಿ ಮಾಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜು(ಚೀಕಾ), ಸೋಮನಾಥಪುರ ಎಪಿಎಂಸಿ ಮಾಜಿ ಅಧ್ಯಕ್ಷ ಶಿವಣ್ಣ, ಮುಖಂಡ ತಿರುಮಕೂಡಲು ಲಕ್ಷ್ಮಣ ಹಾಜರಿದ್ದರು.

ಅಧಿಕೃತ ಎಂದು ಇ–ಸ್ವತ್ತು ನೀಡಲಿ

ಪುರಸಭೆ ವ್ಯಾಪ್ತಿಯಲ್ಲಿ ಇ–ಸ್ವತ್ತು ಕೊಡುವ ವೇಳೆ ಅನಧಿಕೃತ ನಿವೇಶನ ಎಂದು ನಮೂದಿಸಲಾಗುತ್ತಿದೆ. ಇದರಿಂದ ಸಾರ್ವಜನಿಕರು ಆಸ್ತಿ ಮಾರಾಟ ಮಾಡಲು ಅಥವಾ ಬ್ಯಾಂಕ್‌ನಿಂದ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಪುರಸಭೆಯಿಂದ ಜನರಿಗಾಗುತ್ತಿರುವ ಸಮಸ್ಯೆ ಬಗೆಹರಿಸಿಕೊಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದ್ದು, ನಮ್ಮ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಚುನಾವಣೆ ಮುಗಿದ ನಂತರ ಉಪವಿಭಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ ಎಂದು ವೆಂಕಟೇಶ್ ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟರ್ಬೋ (ಮ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮ್ಯಾಟ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ)	4 ಪ್ರದರ್ಶನಗಳು
ಸಂಗಂ	
3ನೇ ಕೃಷ್ಣಪ್ಪ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತ್ರಿಭುಜ (ಕ)	ಬೆಳಗಿನ ಪ್ರದರ್ಶನ
ಕೃಷ್ಣ ನೀ ಬೇಗನೆ ಬಾರೋ (ಕ)	3 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **3ನೇ ಕೃಷ್ಣಪ್ಪ (ಕ):** ಮ.1.10ಕ್ಕೆ.
ಸ್ಕ್ರೀನ್ 2	ರಾಮನ ಅವತಾರ (ಕ): ಬೆ.10.30ಕ್ಕೆ, ಬಯ್ಯಾ ಜಿ (ಹಿಂ): ಮ.1.35ಕ್ಕೆ, ಸಂ.4.25ಕ್ಕೆ, ಥಾಲವನ್ (ಮ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ಪಿಟಿ ಸರ್ (ತ): ಮ.1.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಟರ್ಬೋ (ಮ): ಬೆ.10.10ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.1.50ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, **A** (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, **3ದೇವಿ** (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **4N6** (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಪರಿಚಿತ ವಾಹನ ಡಿಕ್ಕಿ: ಪಾದಚಾರಿ ಸಾವು

ಪಿರಿಯಾಪಟ್ಟಣ, ಮೇ 25– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಸೇಂಟ್ ಮೇರಿಸ್ ಆಸ್ಪತ್ರೆ ಎದುರು ಶುಕ್ರವಾರ ರಾತ್ರಿ ನಡೆದಿದೆ.



ತಾಲೂಕಿನ ಅಪ್ಪಟೂರಿನ ನಿವಾಸಿ ರವಿ(42) ಸಾವನ್ನಪ್ಪಿದವರು. ಈತ ತಮ್ಮ ಜಮೀನಿನಲ್ಲಿ ಬೆಳೆದಿದ್ದ ಶುಂಠಿ ಬೆಳೆಗೆ ಔಷಧಿ ತರಲು ಪಿರಿಯಾಪಟ್ಟಣಕ್ಕೆ ಬಂದಿದ್ದು, ಈ ವೇಳೆ ಗೋಣಿಕೊಪ್ಪಗೆ ತೆರಳುತ್ತಿದ್ದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ರವಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೃತನ ಪತ್ನಿ ಕವಿತಾ ನೀಡಿದ ದೂರಿನ ಮೇರೆಗೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರು: ಬೇಸಿಗೆ ಶಿಬಿರ ಸಮಾರೋಪ



ಹುಣಸೂರು, ಮೇ 25– ಮಕ್ಕಳು ಬೇಸಿಗೆ ರಜೆಯಲ್ಲಿ ಸಂಪೂರ್ಣ ದೀನಿ ತಾಲಿಂ ಬಗ್ಗೆ ತರಬೇತಿ ಪಡೆದಿರುವುದು ಸಂತಸದ ವಿಚಾರ ಎಂದು ನಗರದ ಜಾಮೀಯ ಮಸೀದಿ ಅಧ್ಯಕ್ಷ ಹಜರತ್ ಜಾನ್ ತಿಳಿಸಿದರು.

ಬೇಸಿಗೆ ಶಿಬಿರದಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ಹಾಗೂ ನೆನಪಿನ ಕಾಣಿಕೆ ನೀಡಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳ ದೀನಿ ತಾಲಿಂ ಬಗ್ಗೆ ಕಾಳಜಿ ವಹಿಸಬೇಕು. ಮುಂದಿನ ದಿನಗಳಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಸಂಪೂರ್ಣ ಸಹಕಾರ ನೀಡಬೇಕು ಎಂದರು.

ಈ ವೇಳೆ ಉಪಾಧ್ಯಕ್ಷ ಮಹಮ್ಮದ್ ಅಮುರ್, ಕಾರ್ಯದರ್ಶಿ ಶಹಜಮಾ, ಇನಾಯತುಲ್ಲಾ ಖಾನ್, ಸದಸ್ಯರಾದ ಬಷೀರ್ ಅಹಮದ್, ಅತಾವುಲ್ಲಾ, ಷರೀಫ್, ಖಾಲಿದ್ ಪಾಷ, ಅಜ್ಮಲ್ ಬೇಗ್, ಮಸೂದ್ ಅಹಮದ್ ಖಾನ್, ಮುನ್ವರುದ್ದೀನ್ ಖಾನ್, ಮಹಮ್ಮದ್, ಹೆಚ್.ಎಂ.ಪಾಷ, ಹಿರಿಯ ಗುರುಗಳಾದ ಶಾಲಂ, ಕಿರಿಯ ಗುರುಗಳಾದ ಆಜ್ಞಂ, ರಫೀ, ಅಂಜದ್ ಷರೀಫ್, ಇನ್ನಿತರು ಹಾಜರಿದ್ದರು.

ಪರಿಷತ್ ಚುನಾವಣೆಯಲ್ಲಿ ಪ.ಜಾತಿಗೆ ಅವಕಾಶ ನೀಡಿ


ತಿ.ನರಸೀಪುರ, ಮೇ 25– ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ಜೂ.6 ರಂದು ನಡೆಯುವ ಚುನಾವಣೆಯಲ್ಲಿ ಬಿಜೆಪಿಯಿಂದ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಪರಿಶಿಷ್ಟ ಜಾತಿಯವರಿಗೆ ಅವಕಾಶ ನೀಡಬೇಕು ಎಂದು ಎಸ್ಸಿ ಮೋರ್ಚಾ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ತೊಟ್ಟವಾಡಿ ಅನಿಲ್ ಕುಮಾರ್ ಮನವಿ ಮಾಡಿದರು.



ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಗೆ 3 ಸ್ಥಾನ ಗೆಲ್ಲುವ ಅವಕಾಶಗಳಿದ್ದು, ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಗೆ ನೀಡಬೇಕು. ಇದುವರೆಗೂ ಪರಿಶಿಷ್ಟ ಜಾತಿಗೆ ಅವಕಾಶ ದೊರಕಿಲ್ಲ. ಆದ್ದರಿಂದ ಈ ಬಾರಿ ಪರಿಶಿಷ್ಟ ಜಾತಿಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ವರಿಷ್ಠರೊಂದಿಗೆ ಚರ್ಚಿಸಿ ಪರಿಶಿಷ್ಟ ಜಾತಿಯವರಿಗೆ ಅವಕಾಶ ನೀಡಬೇಕು. ಈ ಎರಡೂ ಜಿಲ್ಲೆಗಳಲ್ಲಿ ಶ್ರೀವತ್ಸ ಅವರೊಬ್ಬರೇ ಬಿಜೆಪಿ ಶಾಸಕರಿರುವುದರಿಂದ ಪಕ್ಷದ ಬೆಳವಣಿಗೆ ಕಷ್ಟಕರವಾಗಲಿದೆ. ಆದ್ದರಿಂದ ಮುಂಬರುವ ಜಿಪಂ, ತಾಪಂ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಲು ಪರಿಶಿಷ್ಟ ಜಾತಿಗೆ ಅವಕಾಶ ಕಲ್ಪಿಸಿ ಕೊಡಬೇಕೆಂದು ಒತ್ತಾಯಿಸಿದ್ದಾರೆ.

ನೇಮಕ



ಸರಗೂರು, ಮೇ 25– ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಅಬ್ದುಲ್ ಜಬ್ಬರ್ ಹಾಗೂ ಶಾಸಕ ಅನಿಲ್ ಅವರ ಸೂಚನೆ ಮೇರೆಗೆ ತಾಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾಗಿ ಅಮೀರ್ ಸುಹೇಲ್ ನೇಮಕಗೊಂಡಿದ್ದಾರೆ.

ಧಾರಾಕಾರ ಮಳೆ: 20ಕ್ಕೂ ಹೆಚ್ಚು ಮನೆಗಳು ಜಲಾವೃತ

ನಂಜನಗೂಡು, ಮೇ 25– ಶುಕ್ರವಾರ ರಾತ್ರಿ ಸುಮಾರು 3 ಗಂಟೆಗೂ ಹೆಚ್ಚು ಕಾಲ ಸುರಿದ ಧಾರಾಕಾರ ಮಳೆಗೆ ನಗರದ ಅಶೋಕಪುರಂ ಬಡಾವಣೆ, ನಟರಾಜ ಬಡಾವಣೆಯಲ್ಲಿ ಮನೆಗಳಿಗೆ ಚರಂಡಿ ನೀರು ನುಗ್ಗಿ ನಿವಾಸಿಗಳು ಪರದಾಡುವಂತಾಯಿತು.

ನಗರದ 27ನೇ ವಾರ್ಡ್ ಅಶೋಕಪುರಂ ಬಡಾವಣೆಯಲ್ಲಿ ಸುಮಾರು 20ಕ್ಕೂ ಹೆಚ್ಚು ಮನೆಗಳಿಗೆ ಚರಂಡಿ ನೀರು ನುಗ್ಗಿ, ಅವಾಂತರ ಸೃಷ್ಟಿಯಾಗಿದೆ. ಜೊತೆಗೆ ಒಂದು ಮನೆ ಗೋಡೆ ಕುಸಿದು ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಅಶೋಕಪುರಂ ಬಡಾವಣೆಯಲ್ಲಿ ವ್ಯವಸ್ಥಿತ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆ ಬಂದಾಗ ಮನೆಗಳು ಸಂಪೂರ್ಣವಾಗಿ ಜಲಾವೃತವಾಗುತ್ತಿವೆ. ಇದರಿಂದ ಮನೆಯಲ್ಲಿದ್ದ ದವಸ ಧಾನ್ಯಗಳು ಹಾಗೂ ಗೃಹೋಪಯೋಗಿ ವಸ್ತುಗಳು ಸಂಪೂರ್ಣ ನಾಶವಾಗಿದೆ. ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸುವಂತೆ ನಗರಸಭಾ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಪ್ರತಿ ಬಾರಿ ನಮಗೆ ತೊಂದರೆಯಾಗುತ್ತಿದೆ. ಕೂಲಿ ಮಾಡಿ ಜೀವನ ನಡೆಸುವ ನಮಗೆ ದವಸ ಧಾನ್ಯಗಳು ಹಾಳಾಗಿರುವುದರಿಂದ ಊಟಕ್ಕೆ ಅನಾನೂಕೂಲವಾಗಿದೆ ಎಂದು ಇಲ್ಲಿನ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.



ಶುಕ್ರವಾರ ಸುರಿದ ಧಾರಾಕಾರ ಮಳೆಗೆ ಮನೆಗೆ ನೀರು ನುಗ್ಗಿರುವುದು

ನಗರದ 5 ಮತ್ತು 6ನೇ ತಿರುವಿನಲ್ಲೂ ಚರಂಡಿ ನೀರು ಮನೆಗಳಿಗೆ ನುಗ್ಗಿದ ಪರಿಣಾಮ ನಿವಾಸಿಗಳು ಪರದಾಡುವಂತಾಗಿತ್ತು. ನಗರದ ನಟರಾಜ ಬಡಾವಣೆಯಲ್ಲಿ 6 ಮನೆಗಳಿಗೆ ನೀರು ನುಗ್ಗಿದೆ. ಜೊತೆಗೆ ಚರಂಡಿ ನೀರು ಸರಾಗವಾಗಿ ಹರಿಯದೆ ರಸ್ತೆಯಲ್ಲಿ 3 ಅಡಿಗಳಷ್ಟು ನೀರು ತುಂಬಿಕೊಂಡು ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ಸಾರ್ವಜನಿಕರ ಆಕ್ರೋಶದಿಂದ ಎಚ್ಚೆತ್ತ ನಗರಸಭಾ ಅಧಿಕಾರಿಗಳು ಶನಿವಾರ ಬೆಳಗ್ಗೆಯೇ ಕಾರ್ಯಾಚರಣೆಗೆ ಇಳಿದು ಚರಂಡಿಗಳ ಸ್ವಚ್ಛತೆ ನಡೆಸಿದರು.

ಕಡಿಮೆ ತೂಕದ ಮಕ್ಕಳ ಆರೋಗ್ಯ ತಪಾಸಣಾ ಶಿಬಿರ

ಹೆಚ್.ಡಿ.ಕೋಟೆ, ಮೇ 25– ಮಗು ಹುಟ್ಟಿನಿಂದ 1 ವರ್ಷದವರೆಗೆ ಆಸ್ಪತ್ರೆಯಿಂದ ನೀಡುವ ಎಲ್ಲಾ ಚುಚ್ಚುಮದ್ದುಗಳನ್ನು ಮಗುವಿಗೆ ಕೊಡಿಸಬೇಕು. ಇದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ಪಟ್ಟಣದ ಆರೋಗ್ಯಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರ್‌ಬಿಎಸ್‌ಕೆ ವೈದ್ಯಾಧಿಕಾರಿಗಳು ಮತ್ತು ತಂಡ, ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರ, ಜಿಲ್ಲಾ ಆಸ್ಪತ್ರೆ ಮೈಸೂರು ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸರಗೂರು ಇವರುಗಳ ಸಹಯೋಗದಲ್ಲಿ ನಡೆದ ಕಡಿಮೆ ತೂಕದ ಮಕ್ಕಳ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಈ ಶಿಬಿರದಲ್ಲಿ 6 ತಿಂಗಳಿಂದ 6 ವರ್ಷದೊಳಗಿನ ಕಡಿಮೆ ತೂಕದ ಮಕ್ಕಳ ಆರೋಗ್ಯ ತಪಾಸಣೆಯನ್ನು ಜಿಲ್ಲಾಸ್ಪತ್ರೆ ತಜ್ಞ ವೈದ್ಯರಿಂದ ಮಾಡಿಸಲಾಗುವುದು. ಮಕ್ಕಳು ವಯಸ್ಸಿಗೆ ಅನುಗುಣವಾಗಿ ಎತ್ತರಕ್ಕೆ ತಕ್ಕಂತೆ ತೂಕ ಇರಬೇಕು. ಹೀಗಾಗಿ ಕಡಿಮೆ ತೂಕ ಇರುವ ಮಕ್ಕಳನ್ನು ಗುರ್ತಿಸಿ ಹೆಚ್ಚಿನ ಚಿಕಿತ್ಸೆಗಾಗಿ ಎನ್‌ಆರ್‌ಸಿ ತಾಲೂಕು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುವುದು ಎಂದರು.



ಹೆಚ್.ಡಿ.ಕೋಟೆಯಲ್ಲಿ ಕಡಿಮೆ ತೂಕದ ಮಕ್ಕಳ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸೋಮಣ್ಣ ಮಾತನಾಡಿ, ಪೋಷಕರು ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಮಗು ಹುಟ್ಟಿದ 6 ತಿಂಗಳ ತನಕ ಎದೆಹಾಲನ್ನು ಬಿಟ್ಟು ಬೇರೇನು ನೀಡಬಾರದು. 6 ತಿಂಗಳ ನಂತರ ಮನೆಯಲ್ಲೇ ಪೌಷ್ಟಿಕ ಆಹಾರ ತಯಾರಿಸಿ ಮಗುವಿಗೆ ನೀಡಬೇಕು. ಕಾಲಕಾಲಕ್ಕೆ ಆಸ್ಪತ್ರೆಯಲ್ಲಿ ಲಸಿಕೆ ಕೊಡಿಸಬೇಕು. ಮಕ್ಕಳು ಕಡಿಮೆ ತೂಕಕ್ಕೆ ಬರುವ ಮುಂಚೆ ನೀವು ಮಕ್ಕಳನ್ನು ಚೆನ್ನಾಗಿ ಆರೈಕೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಸ್ಪತ್ರೆ ಮಕ್ಕಳ ತಜ್ಞ ಡಾ.ಸಂಪತ್ ಕುಮಾರ್, ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ವೈದ್ಯಾಧಿಕಾರಿ ಡಾ.ಅಭಿಲಾಶ್, ಜಿಲ್ಲಾಸ್ಪತ್ರೆ ಡಿಇಐಸಿ ಮೇಲ್ವಿಚಾರಕ ಲೋಕೇಶ್, ವೈದ್ಯಾಧಿಕಾರಿಗಳಾದ ಡಾ.ಮೋಹನ್, ಡಾ.ಹೇಮಲತಾ ಡಾ.ರಮ್ಯಾ ಮತ್ತು ಸಿಬ್ಬಂದಿ ವರ್ಗ, ಅಂಗನವಾಡಿ ಮೇಲ್ವಿಚಾರಕರು, ಕಾರ್ಯಕರ್ತೆಯರು, ಕಡಿಮೆ ತೂಕದ ಮಕ್ಕಳು, ಪೋಷಕರು ಇನ್ನಿತರರಿದ್ದರು.



ಅದ್ದೂರಿ ಮೂರುರಮ್ಮ ಜಾತ್ರಾ ಮಹೋತ್ಸವ

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಭುವನಹಳ್ಳಿಯಲ್ಲಿ ಗ್ರಾಮದೇವತೆ ಮೂರುರಮ್ಮನವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಿತು. ಈ ವೇಳೆ ಗ್ರಾಮದ ಮುಖಂಡರಾದ ಈಶ್ವರ್‌ಗೌಡ, ಸೋಮೇಗೌಡ, ಬಿ.ವಿ.ಗಿರೀಶ್, ವಕೀಲ ಜವರೇಗೌಡ, ನಾಗೇಂದ್ರ ರಾಜೇಗೌಡ, ನಿವೃತ್ತ ಪಿಡಿಓ ಭದ್ರಶೆಟ್ಟಿ, ನಿವೃತ್ತ ಶಿಕ್ಷಕ ಸಣ್ಣ ಸ್ವಾಮಿಗೌಡ, ನಾರಾಯಣಶೆಟ್ಟಿ ಸೇರಿದಂತೆ ಗ್ರಾಮಸ್ಥರಿದ್ದರು.

ನಾಯಿಗಳ ದಾಳಿಗೆ ಜಿಂಕೆ ಬಲಿ

ನಂಜನಗೂಡು, ಮೇ 25– ತಾಲೂಕಿನ ಹೆಡತಲೆ ಗ್ರಾಮದಲ್ಲಿ ನಾಯಿಗಳ ದಾಳಿಗೆ ಜಿಂಕೆ ಬಲಿಯಾಗಿದ್ದು, ಮತ್ತೊಂದು ಜಿಂಕೆಯನ್ನು ಗ್ರಾಮಸ್ಥರು ರಕ್ಷಿಸಿದ್ದಾರೆ.



ಗ್ರಾಮದ ಹೊರವಲಯದ ಜಮೀನಿನಲ್ಲಿ ಜಿಂಕೆಗಳು ಗುಂಪಿನಲ್ಲಿ ಮೇವು ತಿನ್ನುತ್ತಿದ್ದ ವೇಳೆ ನಾಯಿಗಳು ದಾಳಿ ನಡೆಸಿ ಹೆಡತಲೆ ಗ್ರಾಮದೊಳಗೆ ಅಟ್ಟಾಡಿಸಿಕೊಂಡು ಬಂದಿದ್ದು, ಒಂದು ಜಿಂಕೆಯನ್ನು ಬಲಿ ಪಡೆದಿವೆ. ಈ ವೇಳೆ ಮತ್ತೊಂದು ಜಿಂಕೆಯನ್ನು ನಾಯಿಗಳು ಅಟ್ಟಾಡಿಸಿಕೊಂಡು ಬರುತ್ತಿರುವುದನ್ನು ಕಂಡ ಗ್ರಾಮಸ್ಥರು ನಾಯಿಗಳಿಂದ ಜಿಂಕೆ ರಕ್ಷಿಸಿ, ನೀರು ಕುಡಿಸಿ ಜಿಂಕೆ ಕಣ್ಣಿಗೆ ಬಟ್ಟೆ ಕಟ್ಟಿ ಅರಣ್ಯ ಇಲಾಖೆಗೆ ವಿಷಯ ತಿಳಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಮಂಜು ಮೃತಪಟ್ಟ ಜಿಂಕೆ ಮತ್ತು ಗಾಯಗೊಂಡ ಜಿಂಕೆಯನ್ನು ವಶಕ್ಕೆ ಪಡೆದು ನಂಜನಗೂಡು ಅರಣ್ಯ ಇಲಾಖೆಗೆ ರವಾನಿಸಿದ್ದಾರೆ.

ನಾಲ್ಕು ಅವಧಿಯಲ್ಲಿ ಸ್ವಾರ್ಥ ರಾಜಕಾರಣ, ಪಕ್ಷಾಂತರವೇ ಮರಿತಿಬ್ಬೇಗೌಡರ ಸಾಧನೆ

• ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ವಾಗ್ದಾಳಿ • ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದರ ಗೆಲುವು ನಿಶ್ಚಿತ

ಕೆ.ಆರ್.ನಗರ, ಮೇ 25– ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ವಿವೇಕಾನಂದ ಅವರ ಗೆಲುವು ನಿಶ್ಚಿತವಾಗಿದೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅಚಲ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ, ಉಪನ್ಯಾಸಕರಲ್ಲಿ ವಿವೇಕಾನಂದ ಪರ ಮತಯಾಚಿಸಿ ಮಾತನಾಡಿದ ಅವರು, ಈ ಹಿಂದೆ ಜೆಡಿಎಸ್ ಮತ್ತು ಬಿಜೆಪಿ ಸರ್ಕಾರಗಳು ಅಧಿಕಾರದಲ್ಲಿದ್ದಾಗ ಶಿಕ್ಷಣ ಕ್ಷೇತ್ರ, ಶಿಕ್ಷಕರಿಗೆ ಭಾರಿ ಅನುಕೂಲ ಕಲ್ಪಿಸಿ, ಅಧಿಕ ಅನುದಾನ ನೀಡಿದ್ದು, ಇವು ನಮ್ಮ ಅಭ್ಯರ್ಥಿ ಗೆಲುವಿಗೆ ಸಹಕಾರಿಯಾಗಲಿದೆ ಎಂದರು.

ಕಳೆದ 4 ಅವಧಿಯಲ್ಲಿ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ಮರಿತಿಬ್ಬೇಗೌಡರು ಬರೀ ಸ್ವಾರ್ಥ ರಾಜಕಾರಣ ಮಾಡಿಕೊಂಡು; ಪಕ್ಷಾಂತರವೇ ತಮ್ಮ ಸಾಧನೆ ಎಂದು ಬಿಂಬಿಸಿದ್ದು, ಹೀಗಾಗಿ ಅಂತಹವರನ್ನು ತಿರಸ್ಕರಿಸಿ ಹೊಸಬರಿಗೆ ಅವಕಾಶ ನೀಡುವಂತೆ ಕೋರಿದರು.



ಕೆ.ವಿವೇಕಾನಂದ ಪರ ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮತಯಾಚಿಸಿದರು.

ಎನ್‌ಡಿಎ ಮೈತ್ರಿ ಅಭ್ಯರ್ಥಿಯಾಗಿರುವ ಕೆ.ವಿವೇಕಾನಂದ ಅವರು ಕಳೆದ 2 ದಶಕಗಳಿಂದ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದು, ಇದೀಗ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಆ ಮೂಲಕ ಎಲ್ಲರ ಸೇವೆ ಮಾಡಲು ನಿರ್ಧರಿಸಿದ್ದು, ಅವರ ಹಿಂದೆ ನಾವೆಲ್ಲಾ ಬೆನ್ನೆಲುಬಾಗಿ ಇರುತ್ತೇವೆ. ಶಿಕ್ಷಕ ಬಾಂಧವರು ಅವರನ್ನು ಚುನಾವಣೆಯಲ್ಲಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ನಾನು ಮೂಲತಃ ಶಿಕ್ಷಕನಾಗಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಅಲ್ಲದೇ ಚುನಾವಣೆಯಲ್ಲಿ ಸ್ಪರ್ಧಿಸಲು ಕಳೆದ 2 ವರ್ಷಗಳಿಂದ ಸಾಕಷ್ಟು ತಯಾರಿ ಮಾಡಿಕೊಂಡಿದ್ದೆ. ಆದರೆ ಈ ಬಾರಿ ವಿವೇಕಾನಂದ ಅವರಿಗೆ ಟಿಕೆಟ್ ನೀಡಿದ್ದರಿಂದ ಪಕ್ಷದ ನಿರ್ಧಾರವನ್ನು ಗೌರವಿಸಿ ಅವರ ಪರ ಪ್ರಚಾರ ನಡೆಸುತ್ತಿದ್ದೇನೆ. ಈ ಹಿಂದೆ ಎರಡ್ಮೂರು ಬಾರಿ ಉಪ ಸಭಾಪತಿಯಾಗುವ ಅವಕಾಶವಿತ್ತು. ಆದರೆ ಕಾರಣಾಂತರಗಳಿಂದ ಆ ಅವಕಾಶ ತಪ್ಪಿ ಹೋಯಿತು. ಪಕ್ಷನನ್ನನ್ನು 2 ಬಾರಿ ಶಾಸಕನ್ನಾಗಿ ಮಾಡಿದೆ ಈ ಬಾರಿ ನನಗೆ ಟಿಕೆಟ್ ಸಿಗದಿರುವುದರಿಂದ ಬೇಸರವಾಗಿಲ್ಲ ಕೆಲಸ ಮಾಡಲು ಅಧಿಕಾರವೇ ಬೇಕಿಲ್ಲ. ಆದ್ದರಿಂದ ಪಕ್ಷದ ವರಿಷ್ಠರ ತೀರ್ಮಾನಕ್ಕೆ ಬದ್ಧನಾಗಿ ನಮ್ಮ ಅಭ್ಯರ್ಥಿ ಪರ ಪ್ರಚಾರ ನಡೆಸುತ್ತಿದ್ದೇನೆ ಎಂದರು.

ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಸದಾ ಶಿಕ್ಷಕರ, ಉಪನ್ಯಾಸಕರ ಪರವಾಗಿ ಕೆಲಸ ಮಾಡಿವೆ. ಹೀಗಾಗಿ ವಿವೇಕಾನಂದ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಬಳಿಕ ಅವರು ಪಟ್ಟಣದ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಬಿಜೆಪಿ, ಜೆಡಿಎಸ್ ಮುಖಂಡರೊಡನೆ ತೆರಳಿ ಕೆ.ವಿವೇಕಾನಂದ ಪರ ಮತಯಾಚನೆ ಮಾಡಿದರು. ಇದೇ ವೇಳೆ ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್ ಮಾತನಾಡಿದರು. ಪ್ರಾಂಶುಪಾಲ ಬಿ.ಟಿ.ವಿಜಯ್, ಉಪನ್ಯಾಸಕರಾದ ಪಿ.ಪ್ರಶಾಂತ್, ನಾಗರತ್ನ, ಜೆಡಿಎಸ್ ಮುಖಂಡ ಕೃಷ್ಣಶೆಟ್ಟಿ, ಶಿಕ್ಷಕ ಮಿರ್ಲೆ ಧನಂಜಯ ಮತ್ತಿತರರಿದ್ದರು.

ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ

ನಂಜನಗೂಡು, ಮೇ 25– ನಗರದ 8ನೇ ಕ್ರಾಸ್ ನಿವಾಸಿ ಶೇಖರ್ ಮತ್ತು ನಿಖಿತ ದಂಪತಿ ಪುತ್ರಿ ಮೂರು ವರ್ಷದ ಷಡ್ಗುಣ್ಯ 3 ನಿಮಿಷ 48 ಸೆಕೆಂಡ್‌ಗಳಲ್ಲಿ 20 ಶ್ಲೋಕಗಳನ್ನು ಪಠಣ ಮಾಡುವ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಬರೆದಿದ್ದಾಳೆ.



ಆನ್‌ಲೈನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 20 ಶ್ಲೋಕಗಳನ್ನು ಪಠಣ ಮಾಡಿ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಬರೆದು ಪಾರಿತೋಷಕ ಮತ್ತು ಇಂಡಿಯಾ ಬುಕ್ ಅನ್ನು ಬಹುಮಾನವಾಗಿ ಪಡೆದಿದ್ದಾಳೆ. ಮಗಳ ಸಾಧನೆ ಕಂಡು ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ.